ಸ್ಥಾಪನೆ : ೧೮೫೭ 1911 ಸಂಸ್ಥಾಪಕರು 46

ಜೀವನ ಶಿಕ್ಷಣ ಪತ್ರಿಕೆಯು

ಶತಮಾನೋತ್ತರ ಬೆಳ್ಳಿ ಹಬ್ಬದ

ಪುಸ್ತಕ ಪ್ರದರ್ಶನ ೧೯೮೨

ಶತಮಾನೋತ್ತರ ಬೆಳ್ಳಿ ಹಬ್ಬ (ಏಪ್ರಿಲ್ ೧೯೮೨ ರಿಂದ)

ವರ್ಷ 1911

ಡೆ. ಚೆನ್ನಬಸಪ್ಪನವರು. (೧೮೩೩–೧೮೮೧)

ಮೂಲ ಸಂಸ್ಥಾಪಕರು

ಕನ್ನಡ ಶಾಲಾ ಪತ್ರಿಕೆ



ಶಿಕ್ಷಣ ಸಂತಸ

ಸರಕಾರಿ ಉಪಾಧ್ಯಾಯರ ತರಬೇತಿ ವಿದ್ಯಾಲಯ

ಡೆಪ್ಯೂಟಿ ಚೆನ್ನಬಸಪ್ಪ ವೃತ್ತ, ರೋಡ್ಡ ರಸ್ತೆ, ಧಾರವಾಡ – ೧

ಸಿದ್ಧನಾಥ ವಾಚನ ಮಂದಿರ.
ಮೊರಬ. ಜಿ. ಧಾರವಾಡ.

ಶಾಲಾಪತ್ರಿಕೆ

ಪುಸ್ತಕ ೪೭ { ಜನವರಿ ೧೯೧೧. { ಸಂಚಿಕೆ ೧

ವಿದ್ಯಾಸುಧಾರಣಾ ಸಂಬಂಧದ ವೃತ್ತಾಂತಗಳು.

ಮುಂಬಯಿ ಇಲಾಖೆಯ ಶಾಲಾಖಾತೆಯ ೧೯೦೯-೧೦ ನೇ ವರ್ಷದ ...ಗ್ಗೆ ಮೆ|| ಡಾಯರೆಕ್ಟರ ಸಾ|| ಬಹಾದ್ದೂರವರ ವಾರ್ಷಿಕ ರಿಪೋರ್ಟು ...ಸಿದ್ಧವಾಗಿರುತ್ತದೆ. ಅದರೊಳಗಿನ ಮುಖ್ಯಾಂಶಗಳನ್ನು ಶಾಲಾಪತ್ರಿಕಡೆ ಚಕರಿಗೋಸ್ಕರ ಇಲ್ಲಿ ಕೊಡುತ್ತೇವೆ:—

ಮುಂಬಯಿ ಇಲಾಖೆಯಲ್ಲಿ ಯಾವತ್ತೂ ಬಗೆಯ ಶಿಕ್ಷಣಸಂಸ್ಥೆಗಲ್ಲಿ ಕೂಡಿ ಕಳೆದ ಎರಡು ವರ್ಷಗಳ ಕೊನೆಗೆ ವಿದ್ಯಾರ್ಥಿಗಳ ಸಂಖ್ಯೆಳಗೆ ಬರೆದ ಪ್ರಕಾರ ಇತ್ತು:—

...ಾವತರದ ಸಂಸ್ಥೆಗಳು	ಸಂಸ್ಥೆಗಳ ಸಂಖ್ಯೆ.		ವಿದ್ಯಾರ್ಥಿಗಳ ಸಂಖ್ಯೆ.	
	೧೯೦೮-೦೯	೧೯೦೯-೧೦	೧೯೦೮-೦೯	೧೯೦೯-೧೦
ಸಾರ್ವಜನಿಕ ವಿದ್ಯಾಲಯಗಳು. Public Institutions	೧೧,೫೬೧	೧೨,೪೨೪	೭೩೫,೭೧೩	೭,೭೦,೪೩೫
ಖಾಸಗಿ ವಿದ್ಯಾಲಯಗಳು. Private Institutions.	೩,೦೨೮	೩,೦೦೮	೫೬,೮೪೬	೭೯,೮೫೮
	೧೪,೫೮೯	೧೫,೪೩೨	೭,೯೨,೫೫೯	೮,೫೦.೭೨೯

ಮೇಲಿನ ಪಟ್ಟಿಯಿಂದ ಒಟ್ಟು ಸಂಸ್ಥೆಗಳು ೮೩೪ ಹೆಚ್ಚಾದದ್ದೂ ...ದ್ಯಾರ್ಥಿಗಳ ಸಂಖ್ಯೆಯು ೫೭,೨೩೪ ಹೆಚ್ಚಾದದ್ದೂ ಕಂಡು ಬರುವದು. ...ಕಾರದ ಮೇಲ್ವಿಚಾರಣೆಗೆ ಒಳಪಟ್ಟ ಸಂಸ್ಥೆಗಳಲ್ಲಿ ಗಂಡು ಹುಡುಗರ ...ಖ್ಯೆಯು ಹಿಂದಿನ ವರ್ಷ ೬,೦೭,೫೩೨ ಇದ್ದದ್ದು, ಕಳೆದ ವರ್ಷ ...೩,೫೦೪ ಆಯಿತು; ಹಾಗೂ ಹೆಣ್ಣು ಹುಡುಗರ ಸಂಖ್ಯೆಯು

೬,೯೩,೨೮೦ ಇದ್ದದ್ದು ೭,೫೫,೧೩೪ ಆಯಿತು. ನಿತ್ಯದ ಹಾಜರೀ ಸರಾಸರಿಯು ೫,೨೬,೩೦೭ರಿಂದ ೫,೭೫,೨೪೪ರ ವರೆಗೆ ಏರಿತು. ನಿತ್ಯದ ಹಾಜರೀ ಸರಾಸರಿಗೂ ಹಾಜರಿಯ ಮೇಲಿನ ಹುಡುಗರ ಸಂಖ್ಯೆಯ ತಿಂಗಳ ಸರಾಸರಿಗೂ ಇರುವ ಪ್ರಮಾಣವು ಹಿಂದಿನ ವರ್ಷ ೭೫.೯ ಇದ್ದದ್ದು ೭೬.೨ ಆಯಿತು. ಶಿಕ್ಷಣ ಹೊಂದುತ್ತಿದ್ದ ಎಲ್ಲ ವಿದ್ಯಾರ್ಥಿಗಳ ಸಂಖ್ಯೆಗೂ ಮುಂಬಯಿ ಇಲಾಖೆಯ ಒಟ್ಟು ಜನಸಂಖ್ಯೆಗೂ ಇರುವ ಪ್ರಮಾಣ ನೂರಕ್ಕೆ ೩.೧ ಇದ್ದದ್ದು ೩.೩ ಆಯಿತು.

ಇಂಗ್ಲಿಷ ಕಲಿಯುವ ವಿದ್ಯಾರ್ಥಿಗಳ ಸಂಖ್ಯೆಯು ಹಿಂದಿನ ವರ್ಷ ೭೧,೭೨೩ ಇದ್ದದ್ದು ಕಳೆದ ವರ್ಷದಲ್ಲಿ ೭೪,೮೯೭ ಆಯಿತು. ಸಂಸ್ಕೃತ ಮತ್ತು ಬೇರೆ ಪ್ರಾಚೀನ ಭಾಷೆಗಳನ್ನು ಕಲಿಯುವ ವಿದ್ಯಾರ್ಥಿಗಳ ಸಂಖ್ಯೆಯು ೩೩,೮೩೭ರಿಂದ ೩೯,೪೧೧ಕ್ಕೆ ಏರಿತು, ಹಾಗೂ ದೇಶೀಯ ಭಾಷೆಗಳನ್ನು ಅಭ್ಯಾಸಿಸುವ ವಿದ್ಯಾರ್ಥಿಗಳ ಸಂಖ್ಯೆ ೬,೭೩,೧೯೨ ಇದ್ದದ್ದು ಕಳೆದ ವರ್ಷ ೭,೪೦,೪೫೮ ಆಯಿತು.

ಕಳೆದ ಎರಡು ವರ್ಷ ಯಾವತ್ತು ಸಾರ್ವಜನಿಕ ವಿದ್ಯಾಸಂಸ್ಥೆಗಳಲ್ಲಿ ಕಲಿಯುತ್ತಿದ್ದ ವಿದ್ಯಾರ್ಥಿಗಳ ಜಾತಿಗಳು ಮುಂದಿನ ಪಟ್ಟಿಯಲ್ಲಿ ಕಾಣಿಸಿದ ಪ್ರಕಾರ ಇದ್ದವು:—

	೧೯೦೮-೦೯	೧೯೦೯-೧೦
ಯುರೋಪಿಯನ್ ಮತ್ತು ಯುರೇಶಿಯನ್	೪,೭೯೮	೪,೧೮೮
ನೇಟಿವ್ ಕ್ರಿಶ್ಚನ್	೧೬,೫೮೦	೧೬,೯೧೩
ಹಿಂದೂ { ಬ್ರಾಹ್ಮಣರು	೧,೦೯,೧೩೦	೧,೧೫,೩೧೬
ಹಿಂದೂ { ಬ್ರಾಹ್ಮಣೇತರರು	೪,೫೬,೦೮೭	೪,೯೦,೪೨೫
ಮುಸಲಮಾನರು	೧,೨೪,೭೬೨	೧,೩೫,೧೧೦
ಬೌದ್ಧರು	೧	೧
ಪಾರ್ಸೀ	೧೫,೭೬೧	೧೬,೨೦೭
ಇತರರು	೧,೧೮೭	೨,೨೭೫
ಒಟ್ಟು.	೭,೧೫,೭೧೩	೭,೭೦,೫೩೫

ಮೇಲೆ ಕಾಣಿಸಿದ ಬ್ರಾಹ್ಮಣೇತರ ಹಿಂದೂಗಳ ೪,೯೦,೪೨೫ ಸಂಖ್ಯೆಯಲ್ಲಿ ಲಿಂಗಾಯತ ವಿದ್ಯಾರ್ಥಿಗಳು ಎಲ್ಲ ತರದ ವಿದ್ಯಾಲಯಗಳ

ಒಟ್ಟುಗೂಡಿಸಿ ೫೮,೦೧೬ ಇದ್ದರು. ಅವರಲ್ಲಿ ೪೧ ಮಂದಿ ಕಾಲೇಜಗಳಲ್ಲಿ, ೧,೦೬೬ ಮಧ್ಯಮ, ಅಂದರೆ ಇಂಗ್ಲಿಷ ಕಲಿಯುವ ಶಾಲೆಗಳಲ್ಲಿ, ೫೬,೬೯೪ ಮಂದಿ ಪ್ರಾಥಮಿಕ ಶಾಲೆಗಳಲ್ಲಿ, ಹಾಗೂ ೧೪೧ ಮಂದಿ ಟ್ರೇನಿಂಗ ಕಾಲೇಜಗಳು, ಡ್ರಾಯಿಂಗ ಕ್ಲಾಸುಗಳು, ಕೃಷಿಶಿಕ್ಷಣಶಾಲೆಗಳು ಇವೇ ಮೊದಲಾದ ವಿಶೇಷ ತರದ ವಿದ್ಯಾಲಯಗಳಲ್ಲಿ ಇದ್ದರು.

ಕೆಳಗೆ ಕೊಟ್ಟ ಪಟ್ಟಿಯಲ್ಲಿ ಬ್ರಿಟಿಶ್ ಆಡಳಿತೆಯಲ್ಲಿಯೂ ದೇಶೀಯ ಸಂಸ್ಥಾನಗಳ ಆಡಳಿತೆಯಲ್ಲಿಯೂ ಇರುವ ಪ್ರದೇಶಗಳ ಕ್ಷೇತ್ರಫಲ, ಆಯಾ ಪ್ರದೇಶಗಳಲ್ಲಿದ್ದ ಊರುಗಳ ಸಂಖ್ಯೆ, ಶಾಲೆಗಳ ಸಂಖ್ಯೆ ಮುಂತಾದ ವಿವರವನ್ನು ಕೊಟ್ಟಿರುತ್ತದೆ:—

	ಬ್ರಿಟಿಶ್ ಇಲಾಖೆ.	ದೇಶೀಯ ಸಂಸ್ಥಾನಗಳ ಪ್ರದೇಶ.
ಕ್ಷೇತ್ರಫಲ (ಚೌರಸ ಮೈಲುಗಳು)	೧,೨೩,೦೬೦	೬೫,೭೫೬
ಊರುಗಳೂ ವಸತಿಯುಳ್ಳ ಹಳ್ಳಿಗಳೂ	೨೫,೬೫೩	೧೪,೯೬೧
ಜನಸಂಖ್ಯೆ	೧,೮೫,೭೩ ೫೬೨	೬೮,೯೨,೬೦೧
ಸಾರ್ವಜನಿಕ ಸಂಸ್ಥೆಗಳು	೯,೩೬೪	೩,೦೧೬
ತಾ| ೩೧|೩| ೧ನೇ ದಿವಸದ ವಿದ್ಯಾರ್ಥಿಗಳ ಸಂಖ್ಯೆ	೫೯೩,೦೮೬	೧,೭೫,೬೪೧
ಖಾಸಗಿ ವಿದ್ಯಾಲಯಗಳು	೨,೨೯೮	೭೧೦
ಸದರ. ವಿದ್ಯಾರ್ಥಿಗಳು	೫೩,೧೯೨	೨೬ ೬೬೬
ವಿದ್ಯಾರ್ಥಿಗಳ ಒಟ್ಟು ಸಂಖ್ಯೆಗೂ ಜನಸಂಖ್ಯೆಗೂ ಇರುವ ಶೇಕಡಾ ಪ್ರಮಾಣ	೩.೫	೨.೯
ಶಾಲೆ ಇದ್ದ ಊರುಗಳ ಸಂಖ್ಯೆ	೮,೩೭೦	೨,೫೨೫
ಎಷ್ಟು ಚೌರಸ ಮೈಲುಗಳಿಗೆ ಶಾಲೆ ಇದ್ದ ಒಂದು ಊರು ಇರುವದು?	೧೪.೮	೨೬

ಕಳೆದ ಎರಡು ವರ್ಷಗಳಲ್ಲಿ ಬ್ರಿಟಿಶ್ ಇಲಾಖೆಯೊಳಗಿನ ಸಾರ್ವಜನಿಕ ವಿದ್ಯಾಪ್ರಸಾರದ ಸಂಬಂಧವಾಗಿ ಬೇರೆ ಬೇರೆ ಬಾಬುಗಳೊಳಗಿಂದ ಕೆಳಗೆ ಬರೆದ ಪ್ರಕಾರ ಖರ್ಚು ಆಯಿತು:—

ಬಾಬಿನ ಹೆಸರು.	೧೯೦೮-೦೯.	೧೯೦೯-೧೦
	ರೂ.	ರೂ.
ಪ್ರೊವಿನ್ಷಿಯಲ್‌ಫಂಡ (ಖುದ್ದ ಸರಕಾರದ ಹಣ)	೪೬,೨೧,೨೪೮	೪೯,೦೪,೪೧೭
ಲೋಕಲ್ ಫಂಡ	೧೦,೨೨,೧೧೩	೧೦,೩೪,೩೨೧
ಮುನಸಿಪಲ್ ಫಂಡ್	೨,೩೬,೨೬೪	೨೪೯,೯೬೭
ಫೀಯ ಉತ್ಪನ್ನದೊಳಗಿಂದ	೭೭,೪೦,೨೩೨	೭೩,೯೫,೬೧೦
ಇತರ ಯಾವತ್ತು ಬಾಬುಗಳೊಳಗಿಂದ	೩೬,೮೦,೦೬೨	೩೭,೬೨,೯೩೬
ಒಟ್ಟು ಖರ್ಚು.	೧,೧೮,೦೩,೦೭೪	೧,೭೩,೫೭,೨೯(

ಕಳೆದ ವರ್ಷದಲ್ಲಿ ವಿದ್ಯಾಖಾತೆಯ ಬಗ್ಗೆ ಖರ್ಚು ಯಾವ ಯಾ: ಫಂಡುಗಳಿಂದ ಶೇಕಡಾ ಎಷ್ಟು ಆಯಿತೆಂಬದು ಕೆಳಗೆ ಕೊಟ್ಟ ಪಟ್ಟಿಯಿ: ದ ಕಂಡು ಬರುವದು:—

	ಬ್ರಿಟಿಶ ಇಲಾಖೆಯಲ್ಲಿ ಶೇಕಡಾ ಪ್ರಮಾಣ	ಒಟ್ಟ ಇಲಾಖೆಯ ಶೇಕಡಾ ಪ್ರಮಾಣ.
ಪ್ರೊವಿನ್ಸಿಯಲ್ ಫಂಡ	೪೬.೫	೩೯.೨
ಲೋಕಲ್ ಫಂಡ್	೯.೩	೮.೪
ಮುನಸಿಪಲ್‌ಫಂಡ್	೨	೬.೧
ಫೀ	೭೦.೩	೧೯.೪
ದೇಶೀಯ ಸಂಸ್ಥಾನಗಳಿಂದ	೧	೧೫.೫
ಇತರ ಯಾವತ್ತು ಬಾಬುಗಳು	೧೬.೮	೧೯.೯
	೧೦೦	೧೦೦

ಕೆಳಗಿನ ಪಟ್ಟಿಯಿಂದ ಒಟ್ಟು ಖರ್ಚಿನಲ್ಲಿ ಬೇರೆ ಬೇರೆ ತರಗತಿಯ: ವಿದ್ಯಾಸಂಸ್ಥೆಗಳಿಗೆ ಎಷ್ಟು ಖರ್ಚು ಆಯಿತೆಂಬದು ಕಂಡು ಬರುವದು:—

ಯಾವ ತರಗತಿಯ ವಿದ್ಯಾಸಂಸ್ಥೆಗಳು.	೧೯೦೮-೦೯	೧೯೦೯-೧೦
	ರೂ.	ರೂ.
ಉದಾತ್ತ ಶಿಕ್ಷಣಾಲಯಗಳು Arts. Colleges.)	೧,೭೫,೬೪೩	೧,೫೭,೨೩೦
ಉಚ್ಚತರದ ಉದ್ಯೋಗಶಿಕ್ಷಣಾಲಯಗಳು	೨,೩೩ ೪೧೪	೨,೩೯,೭೨೬
ಮಧ್ಯಮ (ಇಂಗ್ಲಿಷ) ಶಾಲೆಗಳು.	೫,೧೭,೦೨೨	೫,೬೦,೨೧೧
ಪ್ರಾಥಮಿಕ ಶಾಲೆಗಳು	೧೬,[illegible]೫,೩೦೦	೧೮,೯೬,೨೭೬
ಟ್ರೇನಿಂಗ ಶಾಲೆಗಳು	೧,೮೦,೭೬೪	೧,೭೪,೦೯೪
ವೈದ್ಯಕ ಶಾಲೆಗಳು.	೪೩,೯೧೮	೪೦,೫೨೩
ಬೇರೆ ವಿಶೇಷ ತರದ ಶಾಲೆಗಳು.	೨,೩೫,೨೮೨	೨,೬೦,೧೪೩
ಇಮಾರತುಗಳೂ ಉಪಕರಣಗಳೂ	೧೦,೫೧,೯೦೩	೧,೮೪,೫೫೫.
ವಿಶ್ವವಿದ್ಯಾಲಯ	೧೫೦೦೦	೧೦೦೦೦
ಆಡಳಿತ ಮತ್ತು ಮೇಲ್ವಿಚಾರಣೆ.	೪,೬೮,೮೨೭	೪,೩೬,೪೫೯
ಸ್ಕಾಲರಶಿಪ್ಪುಗಳು	೪೨,೨೬೫	೪೪,೪೮೮
ವಿವಿಧ ಬಾಬುಗಳು.	೧,೪೨,೩೯೦	೧,೫೦,೭೦೭
ಒಟ್ಟು ಖರ್ಚು	೪೬,೭೧,೭೪೮	೪೯,೦೪,೪೧೨

ಮೇಲಿನ ಪಟ್ಟಿಯಲ್ಲಿ ಪ್ರಾಥಮಿಕ ಶಾಲೆಗಳಿಗೋಸ್ಕರ ಹಿಂದಿನ ವರ್ಷಕ್ಕಿಂತ ಕಳೆದ ವರ್ಷದಲ್ಲಿ ೨,೮೦,೯೫೬ ರೂಪಾಯಿ ಹೆಚ್ಚು ಖರ್ಚು ಆದದ್ದು ಕಂಡು ಬರುವದು. ಈ ಹೆಚ್ಚಿನ ಹಣವು ಲೋಕಲಬೋರ್ಡ ಹಾಗೂ ಮುನಿಸಿಪಾಲಿಟಿಗಳಿಗೆ ಹೊಸ ಶಾಲೆಗಳನ್ನು ಸ್ಥಾಪಿಸುವದಕ್ಕೂ ಟ್ರೇಂಡ ಹಾಗೂ ಅನ್‌ಟ್ರೇಂಡ ಮಾಸ್ತರರ ಸಂಬಳವನ್ನೂ ಹೆಚ್ಚಿಸುವದಕ್ಕೂ ಹಳ್ಳಿಯ ಖಾಸಗಿ ಶಾಲೆಗಳ ಬಡ ವಿದ್ಯಾರ್ಥಿಗಳಿಗೆ ಪುಸ್ತಕಗಳನ್ನೂ ಸ್ಲೇಟುಗಳನ್ನೂ ಪೂರೈಸುವದಕ್ಕೂ ಕೊಡಲ್ಪಟ್ಟಿತು.

ಪ್ರಾಥಮಿಕಶಾಲೆಗಳು.

ಕಳೆದ ವರ್ಷ ಪ್ರಾಥಮಿಕ ಶಾಲೆಗಳ ಸಂಖ್ಯೆಯು ೯,೯೦೦ ಇದ್ದದ್ದು ೧೦,೬೮೬ ಆಯಿತು, ಹಾಗೂ ವಿದ್ಯಾರ್ಥಿಗಳ ಸಂಖ್ಯೆಯು ೫,೭೦,೧೪೫ ರಿಂದ ೬,೧೫,೬೦೩ ಆಯಿತು. ಹೆಚ್ಚಾದ ಶಾಲೆಗಳಲ್ಲಿ ಲೋಕಲ್‌ಬೋರ್ಡ ಶಾಲೆಗಳೇ ಮುಖ್ಯವಾಗಿರುತ್ತವೆ.

ಲೋಕಲ್ ಬೋರ್ಡ ಶಾಲೆಗಳು:-ಲೋಕಲಬೋರ್ಡ ಗಂಡುಹುಡುಗರ ಪ್ರಾಥಮಿಕ ಶಾಲೆಗಳು ೫,೦೮೪ ರಿಂದ ೫,೫೭೬ ಆದವು, ಹಾಗೂ ಹುಡುಗರ ಸಂಖ್ಯೆಯು ೨,೮೦,೭೭೮ ರಿಂದ ೩,೦೭,೩೭೧ ಆಯಿತು. ಈ ಪ್ರಕಾರ ಶಾಲೆಗಳ ಸಂಖ್ಯೆಯೂ ವಿದ್ಯಾರ್ಥಿಗಳ ಸಂಖ್ಯೆಯೂ ಬೆಳೆದದ್ದಕ್ಕೆ ಸರಕಾರದಿಂದ ಸ್ಪೆಶಲ್ ಗ್ರ್ಯಾಂಟಾಗಿ ಸಿಕ್ಕ ಹೆಚ್ಚು ಹಣವೇ ಕಾರಣವಾಗಿರುತ್ತದೆ. ೨,೫೮೮ ಶಾಲೆಗಳಿಗೆ ಲೋಕಲಬೋರ್ಡಿನ ಶಾಲಾಗೃಹಗಳಿವೆ; ೧,೧೦೧ ಶಾಲೆಗಳು ಬಾಡಿಗೆಯ ಮನೆಗಳಲ್ಲಿ ಹಾಕಲ್ಪಟ್ಟವೆ; ಉಳಿದವುಗಳು ಚಾವಡಿ, ಧರ್ಮಶಾಲೆ, ಗುಡಿ ಮುಂತಾದ ಇಮಾರತುಗಳಲ್ಲಿ ಅವೆ. ಈ ವಿಷಯದಲ್ಲಿ ಮಧ್ಯಭಾಗದ ಎಜ್ಯುಕೇಶನಲ್ ಇನಸ್ಪೆಕ್ಟರರಾದ ಮೆ॥ ಪ್ರಾಯರ ಸಾಹೇಬರವರು, ತಾಲೂಕಿನ ಸ್ಥಳಗಳಲ್ಲಿಯೂ ಶಾಲೆಯಲ್ಲಿ ಹುಡುಗರ ಸಂಖ್ಯೆ ಕನಿಷ್ಟಪಕ್ಷಕ್ಕೆ ೧೫೦ ಇರುವಂಥ ಇತರ ಊರುಗಳಲ್ಲಿಯೂ ಮಾತ್ರ ಶಾಲೆಗಳಗೋಸ್ಕರ ಕಲ್ಲು-ಇಟ್ಟಂಗಿಗಳಿಂದ ಪಕ್ಕಾ ಇಮಾರತುಗಳನ್ನು ಕಟ್ಟಿಸಬೇಕೆಂತಲೂ, ಬಹಳ ಮುಳಿಯಾಗದಂಥ ಸಣ್ಣ ಊರುಗಳಲ್ಲಿ ಚಲೋ ಮೇಲುಮುದ್ದಿಯ ಶಾಲಾಗೃಹಗಳನ್ನು ಕಟ್ಟಿಸುವದಕ್ಕೆ ಪರವಾನಗಿ ಇರಬೇಕೆಂತಲೂ ಅಭಿಪ್ರಾಯ ಪಡುತ್ತಾರೆ. ಇದೇ ಪದ್ಧತಿಯನ್ನು ಅಕ್ಕಲಕೋಟೆಯ ಸಂಸ್ಥಾನದಲ್ಲಿ ಈಗ ಸ್ವೀಕರಿಸಿರುವದರಿಂದ ಆ ಸಂಸ್ಥಾನದೊಳಗಿನ ೪೨ ಶಾಲೆಗಳಲ್ಲಿ ೩೧ ಶಾಲೆಗಳಿಗೆ ಚಲೋ ಇಮಾರತುಗಳಾಗಿವೆ. ಇದಲ್ಲದೆ, ಈ ಪದ್ಧತಿಯನ್ನು ಅನುಸರಿಸುವದರಿಂದ ಹಳ್ಳಿಯ ಜನರಿಗೆ ಶಾಲಾ ಇಮಾರತುಗಳಿಗೋಸ್ಕರ ವರ್ಗಣಿಯನ್ನು ಕೊಡುವದಕ್ಕೂ ಹೆಚ್ಚು ಉತ್ತೇಜನವಾಗುವ ಕಾರಣ, ಒಟ್ಟು ಖರ್ಚಿನ ಬಹಳ ಭಾಗವು ಜನರ ವರ್ಗಣಿಯಿಂದಲೇ ವಸೂಲಾಗಬಹುದು. ಇದೇ ಮೇರೆಗೆ ದಕ್ಷಿಣಭಾಗದ ಎಜ್ಯುಕೇಶನಲ್ ಇನಸ್ಪೆಕ್ಟರರಾದ ಮೆ॥ ಕರಂದೀಕರ ಸಾಹೇಬರವರು ಅಭಿಪ್ರಾಯ ಪಡುವದೇನಂದರೆ:—

"ಇಂಜನೆಯರ ಖಾತೆಯಿಂದ ಆದ ಇಮಾರತುಗಳಿಗೆ ಪ್ರತಿ ಒಬ್ಬ ವಿದ್ಯಾರ್ಥಿಗೆ ಸುಮಾರು ೪೦ ರೂಪಾಯಿ ಖರ್ಚು ಬೀಳುವದರಿಂದ ಆ ಖರ್ಚನ್ನು ತೂಗಿಸಿಕೊಳ್ಳುವದು ಅಸಾಧ್ಯವು; ಲೋಕಲಬೋರ್ಡ ಇಮಾರತುಗಳಿಗೆ ಪ್ರತಿ ಒಬ್ಬ ವಿದ್ಯಾರ್ಥಿಗೆ ಸುಮಾರು ೨೫ ರಿಂದ ೩೦ ರೂಪಾಯಿ ಖರ್ಚು ಬೀಳುವದು; ಆದರೆ ಲೋಕಲಬೋರ್ಡಿನಿಂದ ಆದ ಕೆಲಸವು

ಕನಿಷ್ಟಪ್ರತಿಯದೂ ಭರವಸೆಗೆ ಲಾಯಖವಲ್ಲದ್ದೂ ಇರುವದು. ಇನ್ನು, ಶಾಲಾಗೃಹಗಳನ್ನು ಕಟ್ಟಿಸಲಿಕ್ಕೆ ಉಳಿದ ಮಾರ್ಗವು ಊರವರಿಂದ ಕಟ್ಟಿಸಿಕೊಳ್ಳುವದು. ಊರಮನೆಯ ಪದ್ಧತಿಯ ಶಾಲಾಗೃಹಗಳನ್ನು ಕಟ್ಟಿಸುವದಾದರೆ, ಹಳ್ಳಿಯ ಉಪ್ಪಾರ ಬಡಿಗ ಮುಂತಾದವರಿಂದ ಸ್ವಲ್ಪ ಖರ್ಚಿನಲ್ಲಿ ಚಲೋ ಇಮಾರತುಗಳನ್ನು ಕಟ್ಟಿಸಿಕೊಳ್ಳಬಹುದು. ಆದರೆ ಅವರಿಂದ ನಮೂನೆಯ ಪ್ರಕಾರ "ಪ್ಲ್ಯಾನಎಸ್ಟಮೇಟು" ದೊರೆಯುವದು ಅಸಾಧ್ಯವು; ಪ್ಲ್ಯಾನಎಸ್ಟಮೇಟೂ ಹಳ್ಳಿಯವರಿಂದ ಶಾಲಾ ಇಮಾರತನ್ನು ಕಟ್ಟಿಸಿಕೊಳ್ಳುವದಕ್ಕೆ ಸುಪರಿಂಟೆಂಡಿಂಗ್ ಇಂಜನೆಯರ ಸಾಹೇಬರ ಪರವಾನಗಿಯೂ ಇಲ್ಲದಿದ್ದರೆ, ಸರಕಾರದ ಗ್ರ್ಯಾಂಟು ಸಿಗುವದಿಲ್ಲ; ಸರಕಾರದ ಗ್ರ್ಯಾಂಟು ಇಲ್ಲದೆ ಬರೇ ಡಿಸ್ಟ್ರಿಕ್ಟ ಲೋಕಲ್‌ಬೋರ್ಡಿನಿಂದ ವಿಶೇಷ ಕೆಲಸವಾಗುವ ಆಶೆ ಇಲ್ಲ. ಆದಕಾರಣ, ಕೇವಲ ನಮೂನೆಯ ಪ್ರಕಾರ ಪ್ಲ್ಯಾನಎಸ್ಟಮೇಟುಗಳನ್ನು ತಯಾರಿಸದಿದ್ದರೂ ಸ್ಕೂಲ ಕಮಿಟಿಗೆ ಮುಂಗಡ ಹಣ ಕೊಡುವದಕ್ಕೂ, ಸ್ಕೂಲ ಕಮಿಟಿಯ ಹಾಗೂ ಮಾಮಲೇದಾರರ ಮೇಲ್ವಿಚಾರಣೆಯಿಂದ ತಕ್ಕ ಶಾಲಾಗೃಹಗಳನ್ನು ಕಟ್ಟಿಸಿಕೊಳ್ಳುವದಕ್ಕೂ ಡಿಸ್ಟ್ರಿಕ್ಟ ಲೋಕಲ್‌ಬೋರ್ಡಿಗೆ ಅಧಿಕಾರವಿರಬೇಕು. ಹಾಗೂ ಇಂಥ ಇಮಾರತುಗಳಿಗೆ ಆಗಿರುವ ಖರ್ಚಿನ ಅಂದಾಜಿನ ಅರ್ಧದಷ್ಟು ಹಣವು ಸರಕಾರದಿಂದ ದೊರೆಯಬೇಕು."

ದಕ್ಷಿಣಭಾಗದ ಬ್ರಿಟಿಶ್ ಇಲಾಖೆಯಲ್ಲಿ ಶಾಲೆಗಳ ಸಂಖ್ಯೆ ೧,೪೨೨ ರಿಂದ ೧,೫೭೮, ಹಾಗೂ ಹುಡುಗರ ಸಂಖ್ಯೆ ೮೨,೨೭೭ ರಿಂದ ೯೨,೬೮೧ ಆಯಿತು. ಈ ಶಾಲೆಗಳಲ್ಲಿ ಲೋಕಲ್‌ಫಂಡ ಕೊಡುವ ವಿದ್ಯಾರ್ಥಿಗಳ ಪ್ರಮಾಣವು ನೂರಕ್ಕೆ ೭೫.೭ ರಂತೆ ಇತ್ತು; ಮತ್ತು ಬ್ರಿಟಿಶ್ ಹದ್ದಿನೊಳಗಿನ ಖಾಸಗಿ ಶಾಲೆಗಳಲ್ಲಿ ನೂರಕ್ಕೆ ೮೨.೫ ರಂತೆ ಇತ್ತು. ಲೋಕಲ್‌ಫಂಡ ಕೊಡುವವರ ಮಕ್ಕಳಿಗೆ ಶಾಲೆಯ ಫೀ ದರವು ಸರಾಸರಿ ಮಾನದಿಂದ ತಿಂಗಳಿಗೆ ಪ್ರತಿಯೊಬ್ಬ ಹುಡುಗನಿಗೆ ೬ ಪೈಗಿಂತ ಸ್ವಲ್ಪ ಹೆಚ್ಚು ಬಿತ್ತು. ಮೇಲ್ಕಾಣಿಸಿದ ೧೫೭೮ ಶಾಲೆಗಳಲ್ಲಿ ೧೫೭೬ ಶಾಲೆಗಳು ಹಗಲೊತ್ತು ನಡೆಯುವಂಥವುಗಳೂ ೨ ಮಾತ್ರ ರಾತ್ರಿಯ ಶಾಲೆಗಳೂ ಇದ್ದವು. ೧೫೭೬ ಶಾಲೆಗಳಲ್ಲಿ, ೯೯೨ ಕನ್ನಡ ಶಾಲೆಗಳೂ, ೫೦೫ ಮರಾಠೀ ಶಾಲೆಗಳೂ ೭೯ ಉರ್ದುಶಾಲೆಗಳೂ ಇರುತ್ತವೆ. ಕಳೆದ ವರ್ಷ ಒಟ್ಟು ೧೬೯ ಹೊಸ

ಶಾಲೆಗಳು ಸ್ಥಾಪಿಸಲ್ಪಟ್ಟವು. ಮತ್ತು ೧೨ ಶಾಲೆಗಳು ಸಾಕಷ್ಟು ಹಾಜರಿ ಸಂಖ್ಯೆ ಇಲ್ಲದ ಮೂಲಕ ಬಂದು ಮಾಡಲ್ಪಟ್ಟವು. ಹೊಸ ಶಾಲೆಗಳನ್ನು ಜನರು ಬಹುಶಃ ಆದರದಿಂದ ಬರಮಾಡಿಕೊಂಡರು; ಹಾಗೂ ಕೆಲವು ಹಳ್ಳಿಗಳ ಜನರು ಶಾಲೆಗಳಿಗೆ ಇಮಾರತುಗಳನ್ನೂ ಒದಗಿಸಿ ಕೊಟ್ಟರು. ವಿದ್ಯಾರ್ಥಿಗಳಿಗೆ ಸ್ವಚ್ಛತೆಯ ಚಟವನ್ನು ಹೆಚ್ಚುವದಕ್ಕೋಸ್ಕರ ಬೆಳಗಾವಿಯ ಕಲೆಕ್ಟರ ಸಾಹೇಬರು ಮುರಗೋಡ ಶಾಲೆಯಲ್ಲಿ "ಸೋಪ ಡ್ರಿಲ್ಲ"ನ್ನ, ಅಂದರೆ ದಿನಾಲು ಬೆಳಗ್ಗೆ ಶಾಲೆಗೆ ಹುಡುಗರು ಬಂದ ಕೂಡಲೆ ಸಾಬೂಣ ಹಚ್ಚಿ ಅವರ ಮೋರೆ ತೊಳಿಸುವ ವ್ಯವಸ್ಥೆಯನ್ನು ಮಾಡುವದಕ್ಕೆ ಸೂಚಿಸಿದ ಪ್ರಕಾರ ಆ ಶಾಲೆಯ ಕೆಲವು ವರ್ಗಗಳಲ್ಲಿ ಅನುಭವ ತಕ್ಕೊಳ್ಳಲ್ಪಟ್ಟಿತು. ಈ ಪ್ರಯೋಗಕ್ಕೆ ೨೦ ರೂಪಾಯಿ ಖರ್ಚಾಯಿತು. ಇದರಿಂದ "ಹುಡುಗರು ಸ್ವಚ್ಛತೆಯುಳ್ಳವರಾಗಿಯೂ, ಉತ್ಸಾಹವುಳ್ಳವರಾಗಿಯೂ ಕಂಡು ಬರುವದು ಸರಿ. ಆದರೆ ಇದಕ್ಕೆ ತಗಲುವ ಖರ್ಚಿನಮೂಲಕ ಈ ಪದ್ಧತಿಯನ್ನು ಬೆಳಿಸುವದಾಗಲಿ ಮುಂದೆ ನಡಿಸುವದಾಗಲಿ ಅಸಾಧ್ಯವಿರುತ್ತದೆ."

ಮುನಸಿಪಲ್‌ಶಾಲೆಗಳು:— ದಕ್ಷಿಣ ಭಾಗದಲ್ಲಿರುವ ೨೦೧ ಗಂಡು ಮತ್ತು ಹೆಣ್ಣು ಹುಡುಗರ ಶಾಲೆಗಳಲ್ಲಿ ೧೦೨ ಶಾಲೆಗಳಿಗೆ ಸ್ವಂತ ಇಮಾರತುಗಳವೆ. ಬೆಳಗಾವಿಯ ಮುನಶಿಪಲ್ ಶಾಲೆಗಳ ಇಮಾರತುಗಳು ಕೆಟ್ಟವಿರುತ್ತವೆ. ಆದರೆ ಆ ಮುನಶಿಪಾಲಿಟಿಯು ಪ್ರಾಥಮಿಕ ಶಿಕ್ಷಣದ ಬಗ್ಗೆ ನಿಯಮದ ಪ್ರಕಾರ ಖರ್ಚು ಮಾಡತಕ್ಕ ರಕಮಿಗಿಂತಲೂ ೪೦೦೦ ರೂಪಾಯಿ ಹೆಚ್ಚು ಖರ್ಚು ಮಾಡುತ್ತದೆ.

ಶಿರ್ಶೀ ಮುನಸಿಪಾಲಿಟಿಯವರು ವಿದ್ಯಾಖಾತೆಯವರ ಸೂಚನೆಯನ್ನು ಲೆಕ್ಕಿಸದೆ ಹೆಡಮಾಸ್ತರನ ಜಾಗದ ಪಗಾರವನ್ನು ೩೦ರಿಂದ ೨೫ ಮಾಡಿರುವರು; ಮತ್ತು ಕುಮಟಾ ಹೊನ್ನಾವರ ಮುನಸಿಪಾಲಿಟಿಯವರೂ ಇದೇ ಎಣಿಕೆಯಲ್ಲಿದ್ದಂತೆ ತೋರುತ್ತದೆ.

ಸಂಸ್ಥಾನದಶಾಲೆಗಳು:—ದಕ್ಷಿಣಭಾಗದಲ್ಲಿ ಸಾಂಗಲಿಸಂಸ್ಥಾನದವರು ೨೭ ಹೊಸ ಶಾಲೆಗಳನ್ನು ಸ್ಥಾಪಿಸಿದರು. ಈ ಸಂಸ್ಥಾನದ ಶಾಲೆಗಳಲ್ಲಿ ಊರ

(ಮುಂದಿನ ೧೬ ಪುಟಗಳನ್ನು ಬಿಟ್ಟು ಮುಂದೆ ಸಾಗಿರುವದು.)

ಪ್ರಕೃತಿವಿಮರ್ಶೆ.

ವನಸ್ಪತಿಗಳು.

೧ನೇ ಅಧ್ಯಾಯ.

ಉಪೋದ್ಘಾತ.

ವನಸ್ಪತಿಗಳು ಸಜೀವ ವಸ್ತುಗಳಿರುವದಿಲ್ಲೆಂದು ಎಷ್ಟೋ ಜನರು ಭಾವಿಸುವದುಂಟು. ಈ ತಪ್ಪು ತಿಳುವಳಿಕೆಯುಂಟಾಗಲಿಕ್ಕೆ ಪ್ರಾಣಿಗಳ ಜೀವನವ್ಯಾಪಾರಗಳು, ನಮ್ಮ ಚಿತ್ತವನ್ನು ಆಕರ್ಷಿಸಿಕೊಳ್ಳುವಂತೆ ವನಸ್ಪತಿಗಳ ವ್ಯಾಪಾರಗಳು ಆಕರ್ಷಿಸಿಕೊಳ್ಳದಿರುವದೇ ಮುಖ್ಯ ಕಾರಣವು. ಸೂರ್ಯನ ಬೆಳಕಿನಲ್ಲಿ ನೆಟ್ಟನೆ ಬೆಳೆದು, ಹಸರು ಬಣ್ಣದಿಂದೊಪ್ಪುವ ಅನೇಕ್ಕ ಎಲೆಗಳನ್ನು ಧರಿಸಿ, ಉಲ್ಲಾಸವೃತ್ತಿಯಲ್ಲಿರುವ ಯಾವದೊಂದು ವೃಕ್ಷದ ಕಡೆಗೆ ನಮ್ಮ ದೃಷ್ಟಿಯು ಹೋದರೆ ಅದು ಸಜೀವವಿದ್ದು ಯಾವದೊಂದು ಕೆಲಸ ಮಾಡುತ್ತಿರುವದೆಂಬ ಕಲ್ಪನೆಯು ಸಹ ನಮ್ಮ ಮನಸಿನಲ್ಲಿ ಬರುವದಿಲ್ಲ. ಅದರ ಸೌಂದರ್ಯವನ್ನು ನೋಡಿ, ಬೆರಗಾಗಿ, ನಾವು ಕೆಲವೊಂದು ಚಿತ್ರವನ್ನು ನೋಡುತ್ತ ನಿಲ್ಲುವಂತೆ, ಅದನ್ನು ದಿಟ್ಟಿಸಿ ನೋಡಹತ್ತುವೆವು. ಸೂಕ್ಷ್ಮ ದೃಷ್ಟಿಯಿಂದ ಅದರ ಜೀವನ ವ್ಯಾಪಾರಗಳನ್ನು ನಿರೀಕ್ಷಿಸಹತ್ತಿದರೆ ಆ ವನಸ್ಪತಿಗೆ ಜೀವವಿರುವದಷ್ಟೆಯಲ್ಲ, ಅದು ಮಾಡುತ್ತಿರುವ ಕಾರ್ಯಗಳನ್ನು ನೆರವೇರಿಸುವದು ಪ್ರಾಣಿಮಾತ್ರಕ್ಕೆ ಅಸಾಧ್ಯವಾದದ್ದೆಂಬ ಸಂಗತಿಯು ನಮಗೆ ಕ್ರಮದಿಂದ ಮನವರಿಕೆಯಾಗುವದು. ತನ್ನ ಹಸರೆಲೆಗಳ ಸಹಾಯದಿಂದ ಅದು ಕೆಲವು ಮೂಲತತ್ವಗಳ ರಸಾಯನ ಮಿಶ್ರಣಗಳನ್ನುಂಟು ಮಾಡಿ, ಅವುಗಳನ್ನು ತನ್ನ ಆಹಾರದಂತೆ ಉಪಯೋಗಿಸಿಕೊಳ್ಳುವದಲ್ಲದೆ ಪ್ರಾಣಿಗಳಿಗೆ ಆಹಾರವನ್ನೀಯುವದು. ಖನಿಜದ್ರವ್ಯಗಳನ್ನು ತಿಂದು ಬದುಕುವ ಸಾಮರ್ಥ್ಯವು ಪ್ರಾಣಿಗಳಿಗೆ ಎಷ್ಟು ಮಾತ್ರವೂ ಇರುವದಿಲ್ಲ. ಆಹಾರದ ವಿಷಯದಲ್ಲಿ ಪ್ರಾಣಿಗಳು ವನಸ್ಪತಿಗಳನ್ನು ಪ್ರತ್ಯಕ್ಷವಾಗಿ ಇಲ್ಲವೆ ಅಪ್ರತ್ಯಕ್ಷವಾಗಿ ಅವಲಂಬಿಸಬೇಕಾಗುವದು. ವನಸ್ಪತಿಗಳು ಸಿದ್ಧ ಪಡಿಸಿದ ಆಹಾರದ ಪದಾರ್ಥಗಳನ್ನು ಹಲವು ಪ್ರಾಣಿಗಳು ತಿಂದು ಬದುಕುತ್ತವೆ. ಇಲ್ಲವೆ ಬೇರೆ

ಕೆಲವು ಪ್ರಾಣಿಗಳು, ವನಸ್ಪತಿಗಳನ್ನು ತಿಂದು ಬದುಕುವ ಪ್ರಾಣಿಗಳನ್ನು ತಮ್ಮ ಆಹಾರದಂತೆ ಉಪಯೋಗಿಸಿಕೊಂಡು ಜೀವಿಸುತ್ತಿರುವವು.

ಇದಲ್ಲದೆ ಎಷ್ಟೋ ವನಸ್ಪತಿಗಳು ಹೂಬಿಟ್ಟು ಅದರ ಸಹಾಯದಿಂದ ಒಂದು ಇಲ್ಲವೆ ಹೆಚ್ಚು ಬೀಜಗಳುಳ್ಳ ಕಾಯಿಯನ್ನುಂಟು ಮಾಡುತ್ತವೆ. ಅದರಲ್ಲಿರುವ ಬೀಜದಲ್ಲಿ ತಾಯಿಗಿಡವನ್ನು ಕೆಲವು ಮಹತ್ವವುಳ್ಳ ಗುಣಧರ್ಮ ಗಳಲ್ಲಿ ತದ್ರೂಪವಾಗಿ ಹೋಲುವ, ಅಂದರೆ ಸಜಾತೀಯವಾದ ಸಸಿಗಳನ್ನು ಹುಟ್ಟಿಸುವ ಶಕ್ತಿಯುಳ್ಳ ಒಂದು ಅಂಕುರವಿರುವದು. ಈ ಶಕ್ತಿಯ ಮೂಲಕ ಗೋದಿಯ ಬೀಜವನ್ನು ಬಿತ್ತಿ ಮೊಳೆಯುವದಕ್ಕೆ ಅವಶ್ಯವಾದ ಅನುಕೂಲತೆಗಳನ್ನು ಅದಕ್ಕೆ ಒದಗಿಸಿ ಕೊಟ್ಟರೆ ಅದರಿಂದ ಒಂದು ಗೋದಿಯ ಸಸಿಯು ಹುಟ್ಟುವದುಂಟು. ಹುಟ್ಟಿದ ಮೇಲೆ ಅದು ಕೆಲವು ದಿವಸಗಳ ವರೆಗೆ ಬೆಳೆಯುಹತ್ತಿ ಹೂಕಾಯಿಗಳನ್ನು ಧರಿಸಿ ಕಡೆಗೆ ಸತ್ತು ಹೋಗುವದು. ಎಲ್ಲ ವನಸ್ಪತಿಗಳನ್ನು ಪರೀಕ್ಷಿಸಿ ನೋಡಿದರೆ ಅವುಗಳಿಗೆ ಪ್ರಾಣಿಗಳಂತೆ ಜನನ-ವೃದ್ಧಿ-ಮರಣಗಳೆಂಬ ಮೂರೂ ಅವಸ್ಥೆಗಳಿರುವದು ನಮಗೆ ಗೊತ್ತಾಗುವದು. ಅಂದರೆ ವನಸ್ಪತಿಗಳು ಸಜೀವವಸ್ತುಗಳೆಂಬ ಸಂಗತಿಯು ನಮ್ಮ ನಿದರ್ಶನಕ್ಕೆ ಬರುವದು.

ವನಸ್ಪತಿಗಳಿಗೆ ಜೀವವಿರುವದರಿಂದ ಇತರ ಪ್ರಾಣಿಗಳಂತೆ ಅವುಗಳಿಗಾದರೂ ಒಂದು ಪ್ರಕಾರದ ಆಹಾರವೂ ಹವೆಯೂ ನೀರೂ ಸಮಶೀತೋಷ್ಣತೆಯೂ ಅವಶ್ಯವಾಗಿ ಬೇಕಾಗುವವು. ನಾವು ಯೋಗ್ಯವಾದ ರೀತಿಯಿಂದ ವನಸ್ಪತಿಗಳನ್ನು ಪರೀಕ್ಷಿಸದಿದ್ದರೆ ಅವುಗಳ ಆಹಾರವನ್ನು ತೆಗೆದುಕೊಳ್ಳುವ, ಉಸುರಾಡಿಸುವ, ಬೆಳೆಯುವ ವ್ಯಾಪಾರಗಳು ನಮ್ಮ ನಿದರ್ಶನಕ್ಕೆ ಬರುವದಿಲ್ಲ. ವನಸ್ಪತಿಶಾಸ್ತ್ರಾಭ್ಯಾಸವನ್ನು ಪ್ರಾರಂಭಿಸುವದಕ್ಕಿಂತ ಮೊದಲು ತಕ್ಕ ರೀತಿಯಿಂದ ಅವುಗಳನ್ನು ನಿರೀಕ್ಷಿಸುವ ಶಕ್ತಿಯು ನಮ್ಮಲ್ಲಿ ಬರುವಂತೆ ಮಾಡಿಕೊಳ್ಳಬೇಕಾಗುವದು. ವನಸ್ಪತಿಗಳಿಗೆ ಯೋಗ್ಯ ರೀತಿಯಿಂದ ಪ್ರಶ್ನ ಮಾಡಿದರೆ ಅವು ನಮಗೆ ಬೋಧವಾಗುವಂತೆ ಪ್ರತ್ಯುತ್ತರಗಳನ್ನು ಕೊಡುವವೆಂಬದಕ್ಕೆ ತಿಲಮಾತ್ರವಾದರೂ ಸಂದೇಹವಿಲ್ಲ.

ನಾವು ಹೊಲದೋಟಗಳಲ್ಲಿ ನಮ್ಮ ಉಪಯೋಗಕ್ಕಾಗಿ ಬೆಳೆಯಿಸುವ ವನಸ್ಪತಿಗಳೆಲ್ಲ ಒಂದಾನೊಂದು ಕಾಲದಲ್ಲಿ ಕಾಡುಸ್ಥಿತಿಯಲ್ಲಿಯೇ ಇದ್ದವು. ಮನುಷ್ಯಪ್ರಾಣಿಯು ಸುಧಾರಣೆಯನ್ನು ಹೊಂದುತ್ತ ವನಚರವೃತ್ತಿ

ಯನ್ನು ಬಿಟ್ಟುಕೊಟ್ಟು, ಒಕ್ಕಲತನವನ್ನು ಕೈಕೊಂಡ ಕೂಡಲೆ ಕಾಡುಸ್ಥಿತಿ ಯಲ್ಲಿ ತಮ್ಮಷ್ಟಕ್ಕೆ ತಾವೇ ಬೆಳೆಯುವ ವನಸ್ಪತಿಗಳನ್ನು ಪರೀಕ್ಷಿಸಿ ಅವುಗಳಲ್ಲಿ ತುಸು ಅವಧಿಯಲ್ಲಿಯೇ ಫಲವನ್ನೀಯುವ ಕೆಲವು ವನಸ್ಪತಿಗಳನ್ನು ತನ್ನ ಆಹಾರವಿಹಾರಗಳಿಗೋಸುಗ ಆರಿಸಿಕೊಂಡು ಇವುಗಳ ಬೆಳವಣಿಗಿಗೆ ಅನುಕೂಲವಾದ ಭೂಮಿ, ಗೊಬ್ಬರ, ಸೂರ್ಯನ ಬಿಸಿಲು ನೀರು ಮೊದಲಾದವುಗಳನ್ನು ಒದಗಿಸಿ ಕೊಟ್ಟು ಬೆಳಿಸಹತ್ತಿದನು. ಈ ಕೃತ್ರಿಮ ರೀತಿಯಿಂದ ಆ ವನಸ್ಪತಿಗಳಲ್ಲಿ ಸ್ವಭಾವತಃ ಇದ್ದ ಕೆಲವು ಶಕ್ತಿಗಳೂ ಗುಣಗಳೂ ನಷ್ಟವಾಗುತ್ತ ಹೋಗಿ, ಸದ್ಯಕ್ಕೆ ಅವು ಪರಾವಲಂಬಿಗಳಾಗಿವೆ. ಅಡವಿಯಲ್ಲಿ ತಮ್ಮಷ್ಟಕ್ಕೆ ತಾವೇ ಬೆಳೆದಿರುವ ವನಸ್ಪತಿಗಳನ್ನು ಲಕ್ಷಗೊಟ್ಟು ನೋಡಿದರೆ ಅವುಗಳಲ್ಲಿ ಎಡೆಬಿಡದೆ ನಡೆದಿರುವ ಜೀವನಕಲಹದ ಕುರುಹುಗಳು ನಮಗೆ ಅಲ್ಲಲ್ಲಿ ಕಾಣಬರುವವು. ಕೆಲವು ವನಸ್ಪತಿಗಳು ಕಲ್ಲಿನಂತೆ ಗಟ್ಟಿಯಾದ ಭೂಮಿಯಲ್ಲಿ ತಮ್ಮನ್ನು ಗಟ್ಟಿಯಾಗಿ ಊರಿಕೊಳ್ಳುವದಕ್ಕಾಗಿಯೂ ಆಹಾರವನ್ನು ದೊರಕಿಸುವದಕ್ಕಾಗಿಯೂ ಹೆಜ್ಜೆಜ್ಜಿಗೆ ಎಷ್ಟು ಪ್ರತಿಬಂಧಗಳು ಬಂದಾಗ್ಯೂ ಅವುಗಳಿಗೆ ಎದುರಾಗಿ ನಿಂತು, ಎಲ್ಲ ಕಡೆಯಲ್ಲಿಯೂ ತಮ್ಮ ಬೇರುಗಳನ್ನು ಪಸರಿಸುತ್ತಿರುವದು ನಮಗೆ ದೃಷ್ಟಿಗೋಚರವಾಗುವದು. ಬೇರೆ ಕೆಲವು ವನಸ್ಪತಿಗಳು ದೊಡ್ಡ ವೃಕ್ಷಗಳ ದಟ್ಟಾದ ಛಾಯೆಯಲ್ಲಿ ಹುಟ್ಟಿ ಬೆಳೆದು, ಸೂರ್ಯನ ಬಿಸಿಲಿದ್ದ ಕಡೆಗೆ ತಲೆಯೆತ್ತಿ ಹೋಗಲು ಯತ್ನಿಸುತ್ತಿರುವದು ನಮ್ಮ ಕಣ್ಣಿಗೆ ಬೀಳುವದು. ಇನ್ನು ಕೆಲವು ಆತ್ಮಸಂರಕ್ಷಣೆಗಾಗಿ ಇಲ್ಲವೆ ಆಧಾರಕ್ಕಾಗಿ ತಮ್ಮ ಅವಯವಗಳ ರೂಪಾಂತರ ಮಾಡಿ ಮುಳ್ಳು, ಕಸಿ ಮೊದಲಾದವುಗಳನ್ನುಂಟು ಮಾಡುತ್ತಿರುವದು ನಮ್ಮ ದೃಷ್ಟಿಗೆ ಬೀಳುವದು. ಈ ರೀತಿಯಿಂದ ಅಡವಿಯಲ್ಲಿ ಬೆಳೆಯುವ ವನಸ್ಪತಿಗಳು ತಮಗೆ ಪ್ರತಿಕೂಲವಾದ ಪರಿಸ್ಥಿತಿಯನ್ನು ತೆಗೆದು ಹಾಕಲಿಕ್ಕೆ ಇಲ್ಲವೆ ಆ ಪರಿಸ್ಥಿತಿಯ ದುಷ್ಪರಿಣಾಮಗಳು ಆಗಗೊಡದಂತೆ ತಮ್ಮ ಅವಯವಗಳ ರೂಪಾಂತರ ಮಾಡಲಿಕ್ಕೆ ಯತ್ನಿಸುತ್ತಿರುತ್ತವೆಂಬುದು ಮುಳ್ಳುಗಳ್ಳಿಯನ್ನು ನಿರೀಕ್ಷಿಸಿದರೆ ನಮಗೆ ಸಹಜ ಗೊತ್ತಾಗುವದು. ಈ ವನಸ್ಪತಿಯು ನಿರ್ಜಲ ಪ್ರದೇಶಗಳಲ್ಲಿಯೂ ಉಸುಬಿನ ಬೈಲುಗಳಲ್ಲಿಯೂ ಕೂಡ ಬೆಳೆಯುವದುಂಟು. ಅಂಥ ಸ್ಥಳಗಳಲ್ಲಿರುವ ಅಸಹ್ಯವಾದ ಉಷ್ಣತೆಯಿಂದ ಇತರ ವನಸ್ಪತಿಗಳು ಹುರುಪ

ಳಿಸಿ ಹೋಗುವವು. ಮುಳ್ಳುಗಳ್ಳಿಯು ಮಾತ್ರ ತನ್ನ ಅವಯವಗಳ ರೂಪಾಂತರ ಮಾಡಿಕೊಂಡು ಅಂಥ ಸ್ಥಳಗಳಲ್ಲಿಯೇ ಭರದಿಂದ ಬೆಳೆಯು ವದು. ಈ ವನಸ್ಪತಿಗೆ ಉಳಿದ ವನಸ್ಪತಿಗಳಿಗಿರುವಂಥ ಎಲೆ, ದೇಟು ಮೊದಲಾದವುಗಳಿರದೆ ದಪ್ಪಾದ ಹಸರು ಬಣ್ಣದ ಎಲೆಯಾಕಾರದ ದೇಟೂ ಆ ದೇಟಿನ ಮೇಲೆ ಮುಳ್ಳಿನಾಕಾರದ ಎಲೆಗಳೂ ಇರುವವು. ಈ ರಚನೆ ಯಿಂದ ಅದರ ಜೀವನವ್ಯಾಪಾರಗಳಿಗೆ ಬಹಳ ಅನುಕೂಲವಾಗಿರುತ್ತದೆಂ ಬದು ಕ್ರಮೇಣ ನಮಗೆ ಗೊತ್ತಾಗುವದು. ಪರಿಸ್ಥಿತಿಯು ತಮಗೆ ಅನು ಕೂಲವಾಗುವಂತೆ ಮಾಡಿಕೊಳ್ಳುವ ವನಸ್ಪತಿಗಳ ಸಾಮರ್ಥ್ಯವು ಅವು ಸಜೀವ ವಸ್ತುಗಳೆಂದು ಸಿದ್ಧ ಮಾಡಿ ತೋರಿಸುವ ಒಂದು ಮಹತ್ವವುಳ್ಳ ಸಾಧನವಾಗಿದೆ.

ಪ್ರಾಣಿಗಳಿಗೆ ಕೈ, ಕಾಲು, ಕಣ್ಣು, ಕಿವಿ ಮೊದಲಾದ ಅವಯವಗಳಿ ರುವಂತೆ ವನಸ್ಪತಿಗಳಿಗಾದರೂ ಬೇರು, ದೇಟು, ಎಲೆ, ಹೂಗಳೆಂಬ ಅವಯವಗಳಿರುವವು. ತನ್ನ ಕೆಲಸಗಳನ್ನು ತಪ್ಪದೆ ಮಾಡುವಂಥ, ಎರಡ ನೆಯವುಗಳು ಮಾಡತಕ್ಕ ಕೆಲಸಗಳಲ್ಲಿ ಕೈಹಾಕದಂಥ ಪ್ರಾಣಿಯ ಇಲ್ಲವೆ ವನಸ್ಪತಿಯ ಭಾಗಕ್ಕೆ ಅವಯವವೆಂಬ ಸಂಜ್ಞೆಯು. ವನಸ್ಪತಿಯ ಅವಯವಗಳು ಯಾವ ಯಾವ ಕೆಲಸಮಾಡುತ್ತವೆಂಬದನ್ನು ಮುಂದಿನ ಅಧ್ಯಾಯಗಳಲ್ಲಿ ವಿವರಿಸುವೆವು. ವನಸ್ಪತಿಗಳಿಗೆ ಜೀವವಿರುವದರಿಂದ ಜೀವನವ್ಯಾಪಾರಗಳ ಲಕ್ಷಣಗಳನ್ನು ಕಂಡು ಹಿಡಿಯಲು ಯತ್ನಿಸುವಾ.

೨ನೇ ಅಧ್ಯಾಯವು.

ಸಜೀವ ವಸ್ತುಗಳ ಲಕ್ಷಣಗಳು.

ಪ್ರಾಣಿಗಳಿಗೆ ಜೀವವಿರುತ್ತದೆಂದು ಯಾವ ಸಂಗತಿಗಳಿಂದ ತಿಳಿದು ಕೊಳ್ಳುವಿರಿ? ಎಂದು ಸಾಮಾನ್ಯ ಜನರಿಗೆ ನಾವು ಪ್ರಶ್ನ ಮಾಡಿದರೆ ವಾಡಿಕೆ ಯಾಗಿ ಪ್ರಾಣಿಗಳು ಉಸುರಾಡಿಸುತ್ತಿರುವದರಿಂದ, ಆಹಾರವನ್ನು ತಿನ್ನುತ್ತಿ ರುವದರಿಂದ, ಬೆಳೆಯುತ್ತಿರುವದರಿಂದ ಹಾಗೂ ಒಂದು ಸ್ಥಳದಿಂದ ಮ ತ್ತೊಂದು ಸ್ಥಳಕ್ಕೆ ಮನಬಂದಂತೆ ಚಲಿಸುತ್ತಿರುವದರಿಂದ ಅವುಗಳಿಗೆ ಜೀ ವ ಉಂಟೆಂದು ತಾವು ನಂಬಿರುವರೆಂದು ಅವರು ಹೇಳುವರು. ಹಾಗಾ

ದರೆ ವನಸ್ಪತಿಗಳು ನೀವು ಹೇಳಿದ ವ್ಯಾಪಾರಗಳಲ್ಲಿ ಯಾವ ವ್ಯಾಪಾರಗಳನ್ನು ಮಾಡುತ್ತಿರುವದು ನಿಮ್ಮ ನಿದರ್ಶನಕ್ಕೆ ಬಂದಿದೆ? ಎಂದು ಅವರಿಗೆ ಪುನಃ ಪ್ರಶ್ನ ಮಾಡಿದರೆ, ವನಸ್ಪತಿಗಳು ಬೆಳೆಯುತ್ತವೆ; ಹೊರತು ಉಳಿದ ಕಾರ್ಯಗಳು ಅವುಗಳಿಂದ ಜರಗಲಾರವೆಂದು ಅವರು ಉತ್ತರ ಕೊಡುವರು. ಆದರೆ ಮೇಲೆ ಕಾಣಿಸಿದ ಎಲ್ಲ ವ್ಯಾಪಾರಗಳನ್ನು ವನಸ್ಪತಿಗಳಾದರೂ ಮಾಡುತ್ತಿರುತ್ತವೆಂದು ಅವರು ಹೇಳಿದ್ದಾದರೆ, ಸರಿಯಾದ ಉತ್ತರ ಕೊಟ್ಟಂತಾಗುತ್ತಿತ್ತು. ಯಾಕಂದರೆ, ಪ್ರಾಣಿಗಳಂತೆ ವನಸ್ಪತಿಗಳಾದರೂ ಉಸುರಾಡಿಸುತ್ತಿರುತ್ತವೆ, ತಿನ್ನುತ್ತಿರುತ್ತವೆ, ಬೆಳೆಯುತ್ತಿರುತ್ತವೆ, ಹಾಗೂ ಕೆಲವು ಪ್ರಸಂಗಗಳಲ್ಲಿ ಸ್ಥಲಾಂತರ ಮಾಡುತ್ತಿರುತ್ತವೆ. ಅವುಗಳ ವ್ಯಾಪಾರಗಳನ್ನು ನಿರೀಕ್ಷಿಸಿ ಕಂಡುಹಿಡಿಯುವಷ್ಟು ಕುಶಲತೆಯು ಮಾತ್ರ ನಮ್ಮಲ್ಲಿರಬೇಕಾಗುವದು.

ಪ್ರಾಣಿಗಳಿಗೆ ಜೀವವಿರುವದೆಂಬದನ್ನು ಸಾಮಾನ್ಯ ಜನರು ಅವು ಉಸುರಾಡಿಸುತ್ತಿರುವದನ್ನು ನೋಡಿ ತಿಳಿದುಕೊಳ್ಳುವದರಿಂದ ಈ ವ್ಯಾಪಾರವು ವನಸ್ಪತಿಗಳಲ್ಲಿಯೂ ನಡೆಯುತ್ತಿರುವದೋ ಹ್ಯಾಗೆ? ಎಂಬ ಬಗ್ಗೆ ಒಂದು ಪ್ರಯೋಗ ಮಾಡುವಾ:—ವನಸ್ಪತಿಗಳ ಬೀಜಗಳಲ್ಲಿ ಜೀವವಿರುವದೆಂಬದು ನಮಗೆ ಒಮ್ಮೆಲೇ ಗೊತ್ತಾಗುವದಿಲ್ಲ. ಬೀಜಗಳಿಗೆ ಹವೆಯೂ, ಆರ್ದ್ರತೆಯೂ ತಗಲದಂತೆ ಇಟ್ಟರೆ, ಅವುಗಳಲ್ಲಿ ಅಡಗಿಕೊಂಡಿರುವ ಅಂಕುರವು ಮಲಗಿ ನಿದ್ದೆ ಮಾಡುತ್ತಿರುವದು. ನಿದ್ದೆಗೆಯ್ಯುತ್ತಿರುವಾಗ ಅದರ ಶರೀರದ ವ್ಯಾಪಾರಗಳು ಕಟ್ಟಾಗಿರುವದರಿಂದ ಅದಕ್ಕೆ ಆಹಾರದ ಅವಶ್ಯಕತೆಯು ಎಷ್ಟು ಮಾತ್ರವೂ ಇರುವದಿಲ್ಲ. ಸಮಾಧಿಸ್ಥಿತಿಯನ್ನು ಹೊಂದಿದ ಕ್ರಿಮಿಗಳನ್ನು ಪರೀಕ್ಷಿಸಿ ನೋಡಿದರೆ ಸಜೀವ ವಸ್ತುಗಳು ಹೀಗೆ ಆಹಾರವಿಲ್ಲದೆ ಕೆಲವು ದಿವಸಗಳ ವರೆಗೆ ಬದುಕಿರುವದು ಸಂಭವನೀಯವೆಂಬದು ನಮಗೆ ಗೊತ್ತಾಗುವದು. ಮಲಗಿ ನಿದ್ದೆ ಮಾಡುತ್ತಿರುವ ಬೀಜಾಂಕುರಗಳಿಗೆ ಸಮಶೀತೋಷ್ಣತೆಯೂ, ಹವೆಯೂ ಆರ್ದ್ರತೆಯೂ ದೊರೆತದ್ದಾದರೆ ಅವು ಎಚ್ಚತ್ತು ಉಸುರಾಡಿಸಹತ್ತಿ ಚಟವಟಿಕೆಯನ್ನು ತೋರಿಸ ಹತ್ತುವವು. ಹೀಗೆ ಅನುಕೂಲವಾದ ಪರಿಸ್ಥಿತಿಯುಂಟಾದ ಸಮಯದಲ್ಲಿಯೂ ಕೂಡ ಕಲ್ಲು, ಮಣ್ಣು ಮೊದಲಾದವು ಜೀವನವ್ಯಾಪಾರಗಳ ಕುರುಹುಗಳನ್ನು ನಮಗೆ ವ್ಯಕ್ತ ಪಡಿಸದಿದ್ದದರಿಂದ ನಾವು ಅವು ನಿರ್ಜೀವಿಗಳೆಂದೆನ್ನು

ತ್ತೇವೆ. ವನಸ್ಪತಿಗಳು ನಮ್ಮಂತೆ ಉಸುರಾಡಿಸುತ್ತಿರುತ್ತವೆಂಬದನ್ನು ತೋರಿಸಲಿಕ್ಕೆ ಚನ್ನಾಗಿ ಬಲಿತು ಪುಷ್ಟವಾಗಿರುವ ಕಡಲೆಯ ಇಲ್ಲವೆ ಅವರಿಯ ಬೀಜಗಳನ್ನು ಹತ್ತೆಂಟು ತೆಗೆದುಕೊಂಡು, ನೀರಿನಿಂದ ತೊಯಿಸಿದ ಕಟ್ಟಿಗೆಯ ಹುಡಿಯಲ್ಲಿ ಹವೆಯು ಸೇರುವಂತೆ ಅವುಗಳನ್ನು ಹೂಳಿ, ಆ ಹುಡಿಯನ್ನು ಹಾಕಿಟ್ಟ ಹರಿವಾಣವನ್ನು ಸಾಧಾರಣ ಬೆಚ್ಚಗಿರುವ ಸ್ಥಳದಲ್ಲಿಟ್ಟರೆ ೩|೪ ದಿವಸಗಳಲ್ಲಿ ಆ ಬೀಜಗಳು ಮೊಳೆಯ ಹತ್ತುವವು. ಆ ಮೇಲೆ ಅವುಗಳನ್ನು ಆರಿಸಿ ತೆಗೆದು ಒಂದು ಅಗಲ ಬಾಯಿಯುಳ್ಳ ಸೀಸೆಯ ತಳದಲ್ಲಿ ನೀರಲ್ಲಿ ತೋಯಿಸಿದ ಒತ್ತು ಕಾಗದವನ್ನು ಹಾಕಿ, ಅದರ ಮೇಲೆ ಆ ಮೊಳೆತ ಬೀಜಗಳನ್ನಿರಿಸಿ, ಸೀಸೆಯ ಬಾಯಿಗೆ ಚಿತ್ರದಲ್ಲಿ ತೋರಿಸಿದಂತೆ ಒಂದು ವಕ್ರನಳಿಕೆಯನ್ನು ಸೇರಿಸಿದ ಬೆಣೆಯನ್ನು ಹಾಕುವಾ. (ಆಕೃ ೧) ಆ ವಕ್ರ ನಳಿಕೆಯ ಎರಡನೇ ತುದಿಯು, ನೀರು ಹಾಕಿಟ್ಟ ಬೇರೊಂದು ಕಾಜಿನ ಪಾತ್ರೆಯ ತಳದವರೆಗೆ ಹೋಗುವಂತೆ ಸೀಸೆಯನ್ನು ಒಂದು ಆಧಾರದ ಮೇಲಿರಿಸುವಾ. ಒಂದೆರಡು ದಿವಸಗಳಾದಮೇಲೆ ಆ ವಕ್ರ ನಳಿಕೆಯಲ್ಲಿ ನೀರು ಏರಿದ್ದು ಕಂಡು ಬರುವದು. ಪ್ರತಿದಿನ ಆ ನಳಿಕೆಯಲ್ಲಿ ಏರಿದ ನೀರಿನ ಕಂಬದ ಎತ್ತರವನ್ನು ಗುರ್ತುಮಾಡಿ ಅಳೆಯುತ್ತ ಹೋದರೆ ದಿನೇ ದಿನೇ ಆ ಕಂಬದ ಎತ್ತರವು ಹೆಚ್ಚುತ್ತ ಹೋಗುವದು. ಇದರಿಂದ ಆ ಸೀಸೆಯಲ್ಲಿದ್ದ ವಾಯುವಿನ ಪ್ರಮಾಣವು ಕಡಿಮೆಯಾಗಿರುತ್ತದೆನ್ನಲಿಕ್ಕೆ ಸಂದೇಹವಿಲ್ಲ. ಇನ್ನು ಹೀಗಾಗುವದರ ಕಾರಣವನ್ನು ಶೋಧಿಸಲು ಯತ್ನಿಸುವಾ. ಪ್ರಾಣಿಗಳು ನಡಿಸಿರುವ ಶ್ವಾಸೋಚ್ಛ್ವಾಸವೆಂಬ ವ್ಯಾಪಾರದಲ್ಲಿ ಶ್ವಾಸ, ಉಚ್ಛ್ವಾಸ ಎಂಬೆರಡು ಪ್ರಕಾರಗಳಿರುವವು. ನಾವು ಶ್ವಾಸವಾಡಿಸುವಾಗ ಹವೆಯೊಳಗಿನ ಆಕ್ಸಿಜನವೆಂಬ ವಾಯುವು ನಮ್ಮ ಫುಪ್ಫುಸಗಳಲ್ಲಿ ಸೇರಿ, ರಕ್ತವಾಹಿನಿಗಳಲ್ಲಿರುವ ರಕ್ತಗೋಲಕಗಳಿಂದ ಶೋಷಿಸಲ್ಪಡುವದು. ಉಚ್ಛ್ವಾಸದಿಂದ ರಕ್ತದಲ್ಲಿ ಬೆರೆತುಗೊಂಡಿರುವ ಅಂಗಾರಾಮ್ಲವಾಯುವು, (Carbonic acid gas) ಫುಪ್ಫುಸಗಳ ದ್ವಾರದಿಂದ ಹೊರಗೆ ಹಾಕಲ್ಪಡುವದು. ಈ ವಾಯುವು ಸುಣ್ಣದ ಸಂಗಡ ಬೆರೆತುಕೊಂಡರೆ ಖಡುವಾಗುವದುಂಟು. ಒಂದು ಕಾಜಿನ ಪಾತ್ರೆಯಲ್ಲಿ ಸುಣ್ಣದ ತಿಳಿ ನೀರುತುಂಬಿ ಒಂದು ಆರಪಾರಾದ ಕಾಜಿನ ಸಣ್ಣ ಕೊಳವಿಯೊಳಗಿಂದ ಆ ಸುಣ್ಣದ ತಿಳಿ ನೀರೊಳಗೆ ಉಸುರು ಬಿಡುತ್ತಹೋದರೆ, ತುಸು ಹೊತ್ತಿನಲ್ಲಿ ಆ ನೀರು

ಹಾಲಿನಂತೆ ಬೆಳ್ಳಗಾಗಿ ಖಡುವಿನ ಸಣ್ಣ ಸಣ್ಣ ಕಣಗಳು ಆ ಪಾತ್ರೆಯ ಬುಡದಲ್ಲಿ ಕೂಡಬೀಳ ಹತ್ತುವವು. ಇದರಿಂದ ನಾವು ಉಚ್ಛ್ವಾಸದಿಂದ ಹವೆಗೆ ಬಿಟ್ಟುಕೊಡುವ ವಾಯುಗಳಲ್ಲಿ ಅಂಗಾರಾಮ್ಲ ವಾಯುವಿನ ಪ್ರಮಾಣವು ಹೆಚ್ಚಾಗಿರುತ್ತದೆಂಬದು ನಮಗೆ ಗೊತ್ತಾಗುವದು. ಅಂಗಾರಾಮ್ಲ ವಾಯುವು ನೀರಿನಲ್ಲಿ ದೊಡ್ಡ ಪ್ರಮಾಣದಿಂದ ಬೆರೆತುಕೊಳ್ಳುವ ಗುಣವುಳ್ಳ ವಾಯುವು.

ಮೇಲಿನ ಪ್ರಯೋಗದಲ್ಲಿ ಸೀಸೆಯೊಳಗಿದ್ದ ಹವೆಯೊಳಗಿನ ಆಕ್ಸಿಜನವನ್ನು ಬೀಜಾಂಕುರಗಳು ಪ್ರಾಣಿಗಳಂತೆ ತಮ್ಮ ಶ್ವಾಸದಲ್ಲಿ ತೆಗೆದುಕೊಂಡದರಿಂದ ತೆರವಾದ ಸ್ಥಳವನ್ನು ವ್ಯಾಪಿಸುವದಕ್ಕಾಗಿ ನೀರು ವಕ್ರನಳಿಕೆಯಲ್ಲಿ ಏರಹತ್ತಿತು. ಪ್ರಾಣಿಗಳಂತೆ ಅವು ಉಚ್ಛ್ವಾಸದಿಂದ ಅಂಗಾರಾಮ್ಲ ವಾಯುವನ್ನು ಹೊರಗೆ ಹಾಕುತ್ತವೆಂಬದನ್ನು ತೋರಿಸುವದಾದಲ್ಲಿ ಮೇಲಿನ ಪ್ರಯೋಗದಲ್ಲಿ ತುಸು ಹೆಚ್ಚುಕಡಿಮೆ ಮಾಡಬೇಕಾಗುವದು. ವಕ್ರನಳಿಕೆಯನ್ನು ಸೇರಿಸಿದ ಬೆಣೆಯನ್ನು ತೆಗೆದುಹಾಕಿ, ಮೊಳೆತ ಬೀಜಗಳನ್ನು ಹಾಕಿಟ್ಟ ಸೀಸೆಯ ಬಾಯಿಗೆ ಬೇರೊಂದು ಗಟ್ಟಿ ಬೆಣೆಯನ್ನು ಕೂಡ್ರಿಸಿ ಅದನ್ನು ಹಾಗೇ ಒಂದೆರಡು ದಿವಸಗಳವರೆಗೆ ಇಟ್ಟುಬಿಟ್ಟರೆ, ಆ ಅವಧಿಯಲ್ಲಿ ಬೀಜಾಂಕುರಗಳು ಉಚ್ಛ್ವಾಸದಿಂದ ಬಿಟ್ಟ ಅಂಗಾರಾಮ್ಲ ವಾಯುವು ಆ ಸೀಸೆಯಲ್ಲಿ ಕೂಡಬಿದ್ದಿರುವದು. (ಆಕೃ. ೨). ಇಷ್ಟಾದಮೇಲೆ ಆ ಸೀಸೆಗೆ ಹಾಕಿದ ಬೆಣೆಯನ್ನು ತೆಗೆದು ಅದರಲ್ಲಿ ಸುಣ್ಣದ ತಿಳಿನೀರು ಹಾಕಿ ಗಲ್ಲಿಸಿದರೆ, ಅದರ ಬಣ್ಣವು ಹಾಲಿನಂತೆ ಬೆಳ್ಳಗಾಗುವದು. ಇದರಿಂದ ಆ ಸೀಸೆಯಲ್ಲಿ ಕೂಡಿಬಿದ್ದ ವಾಯುವು ಅಂಗಾರಾಮ್ಲ ವಾಯುವೆಂದು ಗೊತ್ತಾಗುವದು. ಮೇಲೆ ವಿವರಿಸಿದ ಸಂಗತಿಗಳಿಂದ ವನಸ್ಪತಿಗಳಾದರೂ ಪ್ರಾಣಿಗಳಂತೆ ಉಸುರಾಡಿಸುತ್ತವೆಂಬದು ಸಿದ್ಧವಾಯಿತು. ವನಸ್ಪತಿಗಳು ಬೆಳೆಯುವದನ್ನು ಎಲ್ಲರೂ ನೋಡಿರುವರು. ಅವು ಆಹಾರವನ್ನು ಹ್ಯಾಗೆ ತಿನ್ನುತ್ತವೆ? ಆ ಆಹಾರವನ್ನು ದೊರಕಿಸುವದರ ಸಲುವಾಗಿ ಒಂದು ಸ್ಥಳದಿಂದ ಮತ್ತೊಂದು ಸ್ಥಳಕ್ಕೆ ಹ್ಯಾಗೆ ಹೋಗುತ್ತವೆ? ಎಂಬದನ್ನು ಮುಂದಿನ ಅಧ್ಯಾಯಗಳಲ್ಲಿ ಕ್ರಮದಿಂದ ವಿವರಿಸುವೆವು.

೩ನೇ ಅಧ್ಯಾಯ.

—(೦):—

ಬೀಜಗಳೂ ಅವು ಮೊಳೆಯುವ ಕ್ರಮವೂ

ವನಸ್ಪತಿಗಳ ಜೀವನ ವ್ಯಾಪಾರಗಳನ್ನು ನಿರೀಕ್ಷಿಸುವದಾದಲ್ಲಿ ಅವುಗಳ ಬೀಜಗಳು ಮೊಳೆಯುವ ಕ್ರಮವನ್ನು ಮೊದಲು ಪರೀಕ್ಷಿಸಿನೋಡುವದು ಒಳ್ಳೇದು. ಈ ಕೆಲಸಕ್ಕೆ ಬೇಕಾದ ಬೀಜಗಳು ಬರುವವು. ಆದರೂ ಬೀಜಗಳ ಎಲ್ಲ ಭಾಗಗಳು ಸುಲಭವಾಗಿ ಕಾಣುವಂಥ ದೊಡ್ಡ ಬೀಜಗಳನ್ನು ತೆಗೆದುಕೊಂಡು ಪ್ರಯೋಗಮಾಡಿ ನೋಡುವದು ಹೆಚ್ಚು ಒಳ್ಳೇದು. ಇದಕ್ಕಾಗಿ ಪುಷ್ಟವಾದ ಅವರಿ ಇಲ್ಲವೆ ನೆಲಗಡಲೆಯ ಬೀಜವನ್ನು ಆರಿಸಿ ತೆಗೆದುಕೊಂಡು ಅದರ ಭಾವಚಿತ್ರವನ್ನು ಒಂದು ಕಾಗದದಮೇಲೆ ತೆಗೆದು, ಆ ಮೇಲೆ ಅದನ್ನು ನೀರಿನಲ್ಲಿ ಚಲ್ಲಿ ನೋಡುತ್ತ ಕುಳಿತುಕೊಂಡರೆ ೨-೩ ತಾಸುಗಳಲ್ಲಿ ಅದರ ಮೇಲಿರುವ ಸಿಪ್ಪೆಯು ನಿರಿಗೆಗಟ್ಟಿದ್ದು ಕಂಡು ಬರುವದು. ಹೀಗಾಗುವ ಕಾರಣವೇನಂದರೆ ಸಿಪ್ಪೆಗೆ ಮೊದಲು ನೀರು ತಗಲಲು ಅದು ನೀರು ಹೀರಿಕೊಂಡು ಉಬ್ಬ ಹತ್ತಿತು. ಸಿಪ್ಪೆಯಿಂದ ಮುಚ್ಚಲ್ಪಟ್ಟ ಭಾಗಕ್ಕೆ ಅಷ್ಟು ನೀರು ಹೋಗಿಮುಟ್ಟದ ಕಾರಣ ಅದು ಅಷ್ಟು ಉಬ್ಬಲಿಲ್ಲ. ಆದರೆ ಆ ಬೀಜವನ್ನು ತುಸು ಹೆಚ್ಚು ಹೊತ್ತಿನವರೆಗೆ ನೀರಿನಲ್ಲಿ ಹಾಗೇ ಬಿಟ್ಟರೆ ಒಳಗಿನ ಭಾಗವೂ ಸರಿಯಾಗಿ ಉಬ್ಬಿಕೊಳ್ಳುವದರಿಂದ ಮೇಲಿನ ಸಿಪ್ಪೆಯು ಬಿಗಿಯಾಗಿ ಕೂತುಕೊಂಡು ಮಿರಿ ಮಿರಿ ಮಿಂಚ ಹತ್ತುವದು. ಸಾಕಷ್ಟು ನೀರನ್ನು ಹೀರಿಕೊಂಡಮೇಲೆ ಅದರ ಆಕಾರಮಾನವು ಚಿತ್ರದಲ್ಲಿ(ಕ) ಅಕ್ಷರದಿಂದ ತೋರಿಸಿದಂತೆ ಬೆಳೆಯುವದು(ಆಕೃತಿ ೩). ಆ ಉಬ್ಬಿದ ಬೀಜವನ್ನು ಕೈಯಲ್ಲಿ ತೆಗೆದುಕೊಂಡು ಅದರ ಭಾಗಗಳನ್ನು ಪರೀಕ್ಷಿಸುವಾ. ಬೀಜವು ಕಾಯಿಯಲ್ಲಿದ್ದಾಗ ಅದು ಕಾಯಿಯ ಸಿಪ್ಪಿಗೆ ಒಂದು ಹುರಿಯಿಂದ ಅಂಟಿಕೊಂಡಿತ್ತು. ಆ ಹುರಿಯು ಹರಿದು ಹೋಗಲಾಗಿ ಬೀಜದಮೇಲೆ ಒಂದು ತ್ರಿಕೋಣಾಕೃತಿಯ ಕಪ್ಪು ಬಣ್ಣದ ಕ್ಷತವು ಉಳಿಯಿತು (ಆಕೃತಿ ಳ). ಬೀಜದ ಮೇಲಿನ ಸಿಪ್ಪೆಯನ್ನುಒಳ್ಳೇ ಜಾಗರೂಕತೆಯಿಂದ ಸುಲಿದು ನೋಡಿದರೆ ಆ ಸಿಪ್ಪೆಯಲ್ಲಿ ಹೊರಪದರು ಒಳಪದರು ಎಂಬೆರಡು ಭಾಗಗಳಿದ್ದದ್ದು ನಮಗೆ ಕಂಡು ಬರುವದು. ಈ ಪದರುಗಳಿಂದ ಬೀಜದೊಳಗಿನ ಉಳಿದ ಭಾಗಗಳು ರಕ್ಷಿಸಲ್ಪಡುವವು.

ಸಿಪ್ಪೆಯನ್ನು ಸುಲಿದಕೂಡಲೆ ದಪ್ಪಾದ ೨ ಬೀಜದಳಗಳು ಒಂದರಿಂದೊಂದು ಸುಲಭವಾಗಿ ಬೇರೆಯಾಗುವವು. ಆ ಬೀಜಗಳು ಒಂದಕ್ಕೊಂದು ಹತ್ತಿಕೊಂಡಿರುವ ಸ್ಥಳದಲ್ಲಿ ಒಂದು ಅಂಕುರವಿರುವದು. ಬೀಜದಳಗಳಿಗೂ ಅಂಕುರಕ್ಕೂ ಪ್ರತ್ಯಕ್ಷ ಸಂಬಂಧವಿರುವದರಿಂದ ಅಂಕುರದಿಂದ ಹರಿದು ತೆಗೆದ ಬೀಜದಳದ ಮೇಲೆ ಒಂದು ಕ್ಷತವುಂಟಾಗುವದು. ವಸ್ತುತಃ ದಪ್ಪಾದ ಬೀಜದಳಗಳು ಆ ಅಂಕುರದ ಮೊದಲನೇ ಜೋಡೆಲೆಗಳೆನ್ನಬಹುದು. ಇವುಗಳಿಗೆ ದಾಯಿ-ಎಲೆಗಳೆಂದೆನ್ನುವದು ಹೆಚ್ಚು ಸಮಂಜಸವಾಗಿ ತೋರುತ್ತದೆ. ಯಾಕೆಂದರೆ, ಅಂಕುರವು ಮೊಳೆತು ಅದು ತನ್ನ ಆಹಾರವನ್ನು ಸರಿಯಾಗಿ ತಾನೇ ದೊರಕಿಸಿಕೊಳ್ಳುವವರೆಗೆ ಈ ದಾಯಿ-ಎಲೆಗಳು * ಅದಕ್ಕೆ ಪಾಲನ್ನುಣಿಸುತ್ತಿರುವವು. ವಸ್ತುತಃ ಬೀಜಗಳಲ್ಲಿರುವ ಆಹಾರದ ಪದಾರ್ಥಗಳೆಂದರೆ, ತಾಯಿಗಿಡವು ತನ್ನ ಸಿಸುಗಳು ಪರಾವಲಂಬಿಗಳಾಗಿರುವಾಗ ಅವುಗಳ ಉಪಯೋಗಕ್ಕಾಗಿ ಕಟ್ಟಿಕೊಟ್ಟ ಬುತ್ತಿಯು. ಆ ಬುತ್ತಿಯು ಬಹುಬೇಗ ತೀರಿ ಹೋಗುವಕಾರಣ, ಅದು ತೀರುವದರೊಳಗಾಗಿ ಅಂಕುರವು ತನ್ನ ಬೇರನ್ನು ನೆಲದಲ್ಲಿ ಊರಿ, ಹಸರೆಲೆಗಳನ್ನು ಧರಿಸಿ, ಅವುಗಳ ಸಹಾಯದಿಂದ ತನಗೆ ಬೇಕಾಗುವ ಆಹಾರವನ್ನು ತಾನೇ ದೊರಕಿಸಿಕೊಳ್ಳ ಹತ್ತುವದು.

ಎಲ್ಲ ಜಾತಿಯ ಬೀಜಗಳಿಗೆ ಎರಡೆರಡು ಬೀಜದಳಗಳಿರುವದಿಲ್ಲ. ಬತ್ತ, ಗೋದಿ, ಜೋಳ, ಮುಸುಕಿನಜೋಳ ಮೊದಲಾದವುಗಳ ಬೀಜಗಳಿಗೆ ಒಂದೊಂದೇ ಬೀಜದಳವಿರುವದು. ಈ ತರದ ಬೀಜಗಳಲ್ಲಿ ಸಸಿಯಾಗತಕ್ಕ ಅಂಕುರವು ಮಧ್ಯದಲ್ಲಿದ್ದುಕೊಂಡು ಅದರ ಸುತ್ತಲೂ ಅಂಕುರವು ಪರಾವಲಂಬಿಯಾಗಿರುವಾಗ ಅದಕ್ಕೆ ಬೇಕಾಗುವ ಆಹಾರವನ್ನು ಪೂರೈಸಿ ಕೊಡುವ ಒಂದು ಬಗೆಯ ಪದಾರ್ಥವಿರುವದು.

ಮೇಲಿನ ವಿವರಣೆಯಿಂದ ಪ್ರತಿಯೊಂದು ಬಲಿತ ಬೀಜದಲ್ಲಿ ಸಜೀವ ನಿರ್ಜೀವ ಭಾಗಗಳೆಂಬ ಎರಡು ಭಾಗಗಳಿರುವವೆಂಬದು ನಮಗೆ ಗೊತ್ತಾಯಿತು. ಅನುಕೂಲವಾದ ಪರಿಸ್ಥಿತಿಯುಂಟಾದರೆ ಸಜೀವ ಭಾಗಕ್ಕೆ ಚೇತನವುಂಟಾಗಿ ಬೀಜಕವಚವನ್ನು ಹರಿದು ಒಂದು ಸಣ್ಣ ಸಸಿಯು ಹೊರಬೀಳುವದು. ಆ ಸಸಿಯು ತನ್ನ ಆಹಾರವನ್ನು ದೊರಕಿಸಿಕೊಳ್ಳು

* Cotyledons Nurse leaves.

ವಷ್ಟು ಸಾಮರ್ಥ್ಯವು ಅದಕ್ಕೆ ಬರುವವರೆಗೆ ನಿರ್ಜೀವ ಭಾಗದಲ್ಲಿರುವ ಪದಾರ್ಥಗಳು ಅದರ ಆಹಾರದಂತೆ ಉಪಯೋಗಿಸಲ್ಪಡುವವು. ಬೀಜವು ಮೊಳೆಯ ಬೇಕಾದರೆ ಸಮಶೀತೋಷ್ಣತೆ, ಹವೆ, ನೀರು ಇವು ಅವಶ್ಯವಾಗಿ ಬೇಕೆಂದು ಹಿಂದಿನ ಅಧ್ಯಾಯದಲ್ಲಿ ಹೇಳಿದ್ದೇವೆ. ಇವುಗಳ ಅವಶ್ಯಕತೆಯು ಯಾಕಿರುವದೆಂಬದನ್ನು ಕುರಿತು ಈಗ ತುಸು ವಿಚಾರ ಮಾಡುವಾ. ಎಲ್ಲ ಸಜೀವವಸ್ತುಗಳಲ್ಲಿ "ಪ್ರೋಟೋಪ್ಲಾಜಮ್" (Protoplasm) ಎಂಬ ಜೀವನರಸವು ಇದ್ದೇ ಇರುತ್ತದೆ. ನೈಟ್ರೋಜನವು ಆ ರಸದ ಮುಖ್ಯಘಟಕವು. ಬರ್ಫು ಕರಗಿ ನೀರಾಗುವ, ಅಂದರೆ ಸೆಂಟಿಗ್ರೇಡ ಶೂನ್ಯಾಂಶ ಉಷ್ಣಮಾನಕ್ಕಿಂತ ಅತಿ ಹೆಚ್ಚಾದಂಥ ಹಾಗೂ ನೀರು ಕುದಿದು ಉಗಿಯಾಗುವ, ಅಂದರೆ ಸೆಂಟಿಗ್ರೇಡ ೧೦೦ ಅಂಶ ಉಷ್ಣಮಾನಕ್ಕಿಂತ ಅತಿ ಕಡಿಮೆಯಾದಂಥ, ಅಂದರೆ, ಸಮಶೀತೋಷ್ಣತೆಯಲ್ಲಿ ಆ ಜೀವನ ರಸಕ್ಕೆ ಜೀವನ ವ್ಯಾಪಾರಗಳನ್ನು ನಡಿಸುವ ಶಕ್ತಿಯಿರುವದು. ಉಷ್ಣಮಾನದಲ್ಲಿ ತೀರ ಹೆಚ್ಚು ಕಡಿಮೆಯಾದರೆ ಆ ಸಜೀವಪದಾರ್ಥವು ಸತ್ತು ಹೋಗುವದು. ಬೀಜಗಳನ್ನು ಒಂದೆರಡು ತಾಸು ಬರ್ಫಿನಲ್ಲಿ ಹುಗಿದಿಟ್ಟರೆ, ಇಲ್ಲವೆ ತುಸು ಹೊತ್ತಿನವರೆಗೆ ಅವುಗಳನ್ನು ಕುದಿಯುವ ನೀರಿನಲ್ಲಿ ಹಾಕಿ ಕುದಿಸಿದರೆ ಅವುಗಳ ಸಜೀವ ಭಾಗವಾದ ಅಂಕುರಗಳು ಸತ್ತು ಹೋಗುವವು. ಅದರಿಂದ ಅವು ಮೊಳೆತು ಸಸಿಗಳಾಗುವದು ಕಟ್ಟಾಗುವದು. ಈ ಸಂಗತಿಯಿಂದ, ಬೀಜಗಳು ಮೊಳೆಯುವ ಕ್ರಮದಲ್ಲಿ ಸಮಶೀತೋಷ್ಣತೆಯು ಅವಶ್ಯಕತೆಯು ಎಷ್ಟಿರುವದೆಂಬದು ನಮಗೆ ಮನವರಿಕೆಯಾಗುವದು.

ಇನ್ನು ಆ ಕೆಲಸಕ್ಕೆ ನೀರಿನ ಅವಶ್ಯವು ಯಾಕೆ? ಎಂಬದನ್ನು ಪರೀಕ್ಷಿಸುವಾ. ಪ್ರವಾಹಿ ಹಾಗೂ ವಾಯುರೂಪದಲ್ಲಿರುವ ಪದಾರ್ಥಗಳನ್ನೆಲ್ಲ ವನಸ್ಪತಿಗಳು ತಮ್ಮ ಆಹಾರದಂತೆ ಉಪಯೋಗಿಸಿಕೊಳ್ಳುತ್ತವಲ್ಲದೆ ಘನರೂಪದಲ್ಲಿರುವ ಆಹಾರದ ಉಪಯೋಗವನ್ನು ಅವು ಎಷ್ಟು ಮಾತ್ರಕ್ಕೂ ಮಾಡಿಕೊಳ್ಳಲಾರವು. ಮಳೆಯಾಗದಿದ್ದರೆ ಬೆಳೆಗಳು ಒಣಗಿ ಹೋಗುವದನ್ನು ಎಲ್ಲರೂ ನೋಡಿರುವರು. ಪ್ರವಾಹಿ ಹಾಗೂ ವಾಯುರೂಪದಲ್ಲಿರುವ ಯಾವ ಯಾವ ಪದಾರ್ಥಗಳು ವನಸ್ಪತಿಗಳಿಗೆ ಎಲ್ಲಿಂದ ಹ್ಯಾಗೆ ದೊರಕುತ್ತವೆಂಬದನ್ನು ಸಪ್ರಯೋಗವಾಗಿ ಮುಂದಿನ ಅಧ್ಯಾಯಗಳಲ್ಲಿ

ವಿವರಿಸುವೆವು. ಸದ್ಯಕ್ಕೆ ಘನರೂಪದಲ್ಲಿರುವ ಪದಾರ್ಥಗಳು ವನಸ್ಪತಿಗಳ ಆಹಾರಕ್ಕಾಗಿ ಉಪಯೋಗಿಸಲ್ಪಡಲಾರವೆಂಬ ಸಂಗತಿಯು ನಮಗೆ ಗೊತ್ತಾದರೆ ಸಾಕು.

ಬೀಜದಳದಲ್ಲಿ ತಾಯಿಗಿಡವು ತನ್ನ ಶಿಶುವಿನಗೋಸುಗ ಇಟ್ಟ ಬುತ್ತಿಯು ಕೆಲವೊಂದು ವಿಶಿಷ್ಟಕಾರ್ಯದಿಂದ ನೀರಿನಲ್ಲಿ ಕರಗುವಂತಾಗಲು, ಅದರಿಂಧ ಒಂದು ಬಗೆಯು ದುಗ್ಧರಸವನ್ನುಂಟು ಮಾಡಿ, ಆ ಪೋಷಕ ಪದಾರ್ಥವು ಅಣುರೂಪದಲ್ಲಿರುವ ಸಸಿಗೆ ಮುಟ್ಟುವಂತೆ ಮಾಡುವದೇ ಬೀಜವು ಮೊಳೆಯುವ ಕ್ರಮದಲ್ಲಿ ನೀರಿನ ಆದ್ಯಕರ್ತವ್ಯವು.

ಬೀಜದಳದಲ್ಲಿರುವ ಘನಪದಾರ್ಥವು ನೀರಿನಲ್ಲಿ ಕರಗುವಂತೆ ಮಾಡಲಿಕ್ಕೆ ಹವೆಯು ಅವಶ್ಯವಾಗಿ ಬೇಕಾಗುವದು. ಒಂದು ನಿರ್ವಾತಪ್ರದೇಶವನ್ನುಂಟು ಮಾಡಿ ಅದರಲ್ಲಿ ನೀರಿನಲ್ಲಿ ತೋಯಿಸಿದ ಬೀಜಗಳನ್ನು ಎಷ್ಟು ದಿವಸಗಳತನಕ ಇಟ್ಟರೂ ಅವು ಮೊಳೆಯುವದಿಲ್ಲ. ಇನ್ನು ಹವೆಯಿಂದ ಯಾವ ಕಾರ್ಯಗಳಾಗುತ್ತವೆಂಬದನ್ನು ಪರೀಕ್ಷಿಸಿ ನೋಡುವಾ. ಬೀಜದ ನಿರ್ಜೀವ ಭಾಗದಲ್ಲಿ ಸಕ್ಕರೆ, ಗಂಜೀಹಿಟ್ಟು (Starch), ಗಿಣ್ಣ, ಅಂಟು, ಲೋಳೆ, ಸರೀಸು ಮೊದಲಾದ ಪದಾರ್ಥಗಳಿರುವವು. ಅವುಗಳಲ್ಲಿ ಸಕ್ಕರೆ, ಅಂಟು ಮೊದಲಾದವು ಬಹು ಬೇಗ ನೀರಿನಲ್ಲಿ ಕರಗುವವು. ಗಂಜೀಹಿಟ್ಟು ಹಾಗೂ ಗಿಣ್ಣ ಲೋಳೆ ಮೊದಲಾದ ಸಾರಜನಕ, ಅಂದರೆ ಮಾಂಸವನ್ನುಂಟು ಮಾಡುವ ಪದಾರ್ಥಗಳು ನೀರಿನಲ್ಲಿ ಕರಗುವದಿಲ್ಲ. ಅವು ಕರಗುವಂತೆ

---

* ರಸಾಯನಶಾಸ್ತ್ರದ ಜ್ಞಾನವು ತಕ್ಕಮಟ್ಟಿಗೆ ಇದ್ದ ಹೊರತು ಬೀಜದಳದಲ್ಲಿ ನಡೆಯುವ ರಾಸಾಯನಿಕ ಅದಲುಬದಲುಗಳನ್ನು ತಿಳಿದುಕೊಳ್ಳುವದು ಅಸಾಧ್ಯವು. ಆ ಅದಲುಬದಲುಗಳನ್ನು ಇಲ್ಲಿ ಸ್ಥೂಲಮಾನದಿಂದ ಹೇಳಿದ್ದೇವೆ. ಬೀಜದಳದಲ್ಲಿರುವ ಗಂಜೀಹಿಟ್ಟನ್ನು (starch) ಪರೀಕ್ಷಿಸಬೇಕಾದರೆ ಅದನ್ನು ಕುಟ್ಟಿ ಪುಡಿ ಮಾಡಿ ಒಂದು ಪರೀಕ್ಷಾನಲಿಕೆ (Test tube) ಯಲ್ಲಿ ಹಾಕಿ ಅದರ ಮೇಲೆ ನೀರಿನಲ್ಲಿ ಬೆರಸಿದ "ಅಯೋಡಾಯಿನ್"ದ ಮಿಶ್ರಣವನ್ನು ಸುರಿವಿದರೆ ಅದಕ್ಕೆ ಊದಿಮಿಶ್ರಿತವಾದ ನೀಲವರ್ಣ ಬರುವದು. ನಾವು ತಿನ್ನುವ ರೊಟ್ಟಿ, ಬಟಾಟೆ, ಅಕ್ಕೀಅನ್ನದ ಮೇಲೆ ಆ ಅಯೋಡಾಯಿನದ ಮಿಶ್ರಣವನ್ನು ಸುರುವಿದರೆ ಅವುಗಳ ಬಣ್ಣ ವಾದರೂ ಊದೀಮಿಶ್ರಿತವಾದ ನೀಲವಾಗುವದು. ಇದರಿಂದ ಬೀಜಾಂಕುರವು ನಾವು ತಿನ್ನುವಂಥ ಪದಾರ್ಥಗಳನ್ನೇ ತಿನ್ನುತ್ತದೆಂಬದು ಸ್ಪಷ್ಟವು.

ಆಗಬೇಕಾದರೆ ಅವುಗಳ ಮೇಲೆ ಹವೆಯ ವ್ಯಾಪಾರವು ಅವಶ್ಯವಾಗಿ ನಡೆಯು ಬೇಕಾಗುವದು. ಬೀಜಕ್ಕೆ ನೀರು ಇಲ್ಲವೆ ಹವೆಯೊಳಗಿನ ಆರ್ದ್ರತೆಯು ತಗಲಿದರೆ ಅದು ಉಬ್ಬ ಹತ್ತುವದು. ಅದರಿಂದ ಆ ಬೀಜದ ಮೇಲಿರುವ ಕವಚದಲ್ಲಿರುವ ಛಿದ್ರಗಳ ಬಾಯಿಯು ಅಗಲಾಗಲು ಹವೆಯು ಆ ಛಿದ್ರಗಳೊಳಗೆ ಹಾಯಿದು ಬೀಜದಲ್ಲಿರುವ ನಿರ್ಜೀವಭಾಗಕ್ಕೆ ಹೋಗಿ ಮುಟ್ಟುವದು.

೧೦೦ ಪಾಲು ಹವೆಯಲ್ಲಿ ಸುಮಾರು ೨೦ ಪಾಲು ಆಕ್ಸಿಜನವೆಂಬ ತೀಕ್ಷ್ಣವಾದ ಗುಣಧರ್ಮಗಳುಳ್ಳ ಒಂದು ವಾಯುವ್ರೂ, .೦೪ ಪಾಲು ಅಂಗಾರಾಮ್ಲವಾಯುವೆಂಬ ವಿಷಕಾರಕವಾಯುವ್ರೂ ಇರುವವು. ಬೀಜದಳದಲ್ಲಿ ಸೇರಿದ ಅಂಗಾರಾಮ್ಲವಾಯುವು ನೀರಿನ ಸಂಗಡ ಮಿಶ್ರವಾಗಲು, ಅಂಗಾರಾಮ್ಲವೆಂಬ ಆಮ್ಲವು ಹುಟ್ಟುವದು. ಬೀಜದಳದಲ್ಲಿರುವ ಗಂಜೀಹಿಟ್ಟಿನ ಮೇಲೆ ಈ ಆಮ್ಲದ ರಸಾಯನವ್ಯಾಪಾರ ನಡೆಯಲು, ಅದರಿಂದ ಸಕ್ಕರೆಯಾಗಿ ನೀರಿನಲ್ಲಿ ಕರಗಿಕೊಳ್ಳುವದು. ಆಕ್ಸಿಜನ್ ಹಾಗೂ ಅಂಗಾರಾಮ್ಲ ಇವುಗಳ ಸಂಯುಕ್ತವ್ಯಾಪಾರವು ಸಾರಜನಕ ಪದಾರ್ಥಗಳ ಮೇಲೆ ನಡೆಯಲು, ಅವಾದರೂ ನೀರಿನಲ್ಲಿ ಕರಗುವಂತೆ ಆಗುವವು. ಈ ರೀತಿಯಿಂದ ಒಂದು ತರದ ದುಗ್ಧರಸವು ಸಿದ್ಧವಾಗಿ ದುಗ್ಧವಾಹಿನಿಗಳ ಸಹಾಯದಿಂದ ಬೀಜಾಂಕುರಕ್ಕೆ ಹೋಗಿ ಮುಟ್ಟುವದು(ಆಕೃತಿ ೫). ಕೂಡಲೆ ಅದು ಎಚ್ಚತ್ತು ಚೇತನ ಹೊಂದಿ, ಬೆಳೆಯ ಹತ್ತುವದು. ಅದು ಬೆಳೆಯುತ್ತ ಹೋದ ಹಾಗೆ ಬೀಜದಳದಲ್ಲಿರುವ ದುಗ್ಧರಸದ ಸಂಗ್ರಹವು ಕಡಿಮೆಯಾಗಹತ್ತುವದು. ಎಲ್ಲ ರಸವು ಶೋಷಿಸಲ್ಪಟ್ಟ ಕೂಡಲೆ ಬೀಜದಳವು ಒಣಗಿ ಉದುರಿ ಬೀಳುವದು.

ಬೀಜವು ಮೊಳೆತ ಮೇಲೆ ಅಂಕುರವು ಹ್ಯಾಗೆ ಹೆಚ್ಚು ಹೆಚ್ಚು ಬೆಳೆಯುತ್ತದೆಂಬದನ್ನು ಮುಂದಿನ ಅಧ್ಯಾಯದಲ್ಲಿ ವಿವರಿಸುವೆವು.

೪ನೇ ಅಧ್ಯಾಯ.

——(೦)——

ವನಸ್ಪತಿಗಳು ಬೆಳೆಯುವ ಕ್ರಮವು.

ಬೀಜಗಳು ಮೊಳೆಯುವದಕ್ಕೆ ಅವಶ್ಯವಾದ ಸಮಶೀತೋಷ್ಣತೆ, ಹವೆ, ನೀರು ಮೊದಲಾದವು ದೊರೆತರೆ, ಬೀಜದಳದಲ್ಲಿ ದುಗ್ಧರಸವು ಸಿದ್ಧವಾಗಿ, ದುಗ್ಧವಾಹಿನಿಗಳ ಮುಖಾಂತರವಾಗಿ ಅಂಕುರಕ್ಕೆ ಹೋಗಿ ಮಟ್ಟಿದ ಕೂಡಲೆ ಅದಕ್ಕೆ ಚೇತನವುಂಟಾಗಿ, ಅದು ಭರದಿಂದ ಬೆಳೆಯಹತ್ತುತ್ತದೆಂಬದು ಈ ಮೊದಲು ನಮಗೆ ಗೊತ್ತಾಗಿದೆ. ಮುಂದೆ ಅದು ಬೆಳೆಯುವ ಕ್ರಮವನ್ನು ಪರೀಕ್ಷಿಸಿ ನೋಡುವಾ:—

ನೀರಿನಿಂದ ತೋಯಿಸಿದ ಕಟ್ಟಿಗೆಯ ಪುಡಿಯಲ್ಲಿ ಅವರಿಯ ಹತ್ತೆಂಟು ಬೀಜಗಳನ್ನು ಹಾಕಿಟ್ಟರೆ, ಒಂದೆರಡು ದಿವಸಗಳಲ್ಲಿ ಅವು ಮೊಳೆಯಹತ್ತುವವು. ಆ ಮೇಲೆ ಅವುಗಳಲ್ಲೊಂದನ್ನು ಕೈಯಲ್ಲಿ ತೆಗೆದುಕೊಂಡು ನೋಡಿದರೆ ಅದರಲ್ಲಿ ಒಂದು ನಿಯಮಿತ ಛಿದ್ರವಿದ್ದು, ಅಂಕುರದ ಬೇರು ಅದರೊಳಗೆ ಹಾಯ್ದು ಎಲ್ಲಕ್ಕೂ ಮೊದಲು ಹೊರಗೆ ಕಂಡು ಬರುವದು. (ಆಕೃತಿ ೬ *)

ಬೀಜದೊಳಗಿಂದ ಬೇರೆಯಾಗುವ ಭಾಗವು ಹೊರಬಿದ್ದ ನಂತರ ಕೆಲವು ಹೊತ್ತಿನ ಮೇಲೆ ಕಾಂಡವಾಗುವ ಭಾಗವು ಹೊರಬೀಳುವದುಂಟು. ಅಂಕುರದ ಇವೆರಡು ಮುಖ್ಯಾಂಗಗಳು ಬೆಳೆಯುವ ದಿಕ್ಕುಗಳು ಮಾತ್ರ ಒಂದಕ್ಕೊಂದು ತೀರ ವಿರುದ್ಧವಾಗಿರುವವು. ಬೇರಿಗೆ ಸೂರ್ಯನ ಪ್ರಕಾಶವು ಸಹನವಾಗದಿರುವದರಿಂದ ಅದಷ್ಟು ಲಗುಬಗೆಯಿಂದ ಅದು ಸೂರ್ಯನ ಪ್ರಕಾಶದಿಂದ ದೂರ ಹೋಗಲು ಯತ್ನಯಿಸುವದು. ಈ ಪ್ರಯತ್ನವು ನಡೆ

---

* ಹೀಗಾಗುವಕಾರಣವೇನಂದರೆ, ರಜಃಕಣದ ಸಂಯೋಗದಿಂದ ಅಂಡಾಶಯದಲ್ಲಿರುವ ಅಂಡಕಗಳು ಬೀಜಗಳಾಗುವಾಗ, ರಜಃಕಣದಿಂದ ಹೊರಡುವ ಸೂಕ್ಷ್ಮವಾದ ತಂತುಗಳು ಪ್ರತಿಯೊಂದು ಅಂಡಕವನ್ನು ಅದರಲ್ಲಿರುವ ಕೆಲವೊಂದು ನಿಯಮಿತ ಛಿದ್ರದಲ್ಲಿ ಹಾಯ್ದು ಪ್ರವೇಶಿಸಿ ಅದರಲ್ಲಿ ಜೀವಕಳೆಯನ್ನು ತುಂಬುವವು. ಈ ವ್ಯಾಪಾರದಲ್ಲಿ ಅಂಕುರದ ಬೇರಾಗುವ ಭಾಗವು ಅಂಡಕವನ್ನು ಎಲ್ಲಕ್ಕೂ ಕಟ್ಟಕಡೆಗೆ ಪ್ರವೇಶಿಸುವ ಕಾರಣ ಮೊಳೆಯುವ ಕ್ರಮದಲ್ಲಿ ಅದೇ ಭಾಗವು ಎಲ್ಲಕ್ಕೂ ಮೊದಲು ಹೊರಬೀಳುವದು.

ದಿರುವಾಗ ಅದಕ್ಕೆ ಪ್ರೋತ್ಸಾಹದ ಭೂಮಿಯು ದೊರೆತರೆ, ಆ ಬೇರು ಭೂಮಿಯಲ್ಲಿ ತನ್ನನ್ನು ಊರಿಕೊಂಡು ಕ್ರಮೇಣ ಅದರಲ್ಲಿ ಹಬ್ಬಿಕೊಳ್ಳಹತ್ತುವದು. ಬೇರೂ ದೇಟೂ ಬೀಜದಿಂದ ಹೊರಬಿದ್ದ ದಿವಸವೇ ಆ ಸಸಿಯ ತದ್ರೂಪವಾದ ಚಿತ್ರವನ್ನು ಒಂದು ಕಾಗದದ ಮೇಲೆ ಬರೆದಿಟ್ಟು ದಿನ ದಿನಕ್ಕೆ ಅದು ಬೆಳೆಯುತ್ತ ಹೋದ ಹಾಗೆ ಅದರ ಆಕಾರಮಾನವನ್ನು ಮೊದಲು ಬರೆದಿಟ್ಟ ಚಿತ್ರಕ್ಕೆ ಹೋಲಿಸಿ ನೋಡಹತ್ತಿದರೆ, ಅದು ಭರದಿಂದ ಬೆಳೆಯುತ್ತಿರುವದು ನಮ್ಮ ನಿದರ್ಶನಕ್ಕೆ ಬರುವದು. ಇಲ್ಲವೆ, ಸಸಿಯು ಹುಟ್ಟಿದ ಮೊದಲನೇ ದಿವಸವೇ ಅದರ ಬೇರು ಹಾಗೂ ದೇಟಿನ ಅಗ್ರಭಾಗ ಇವುಗಳ ಮೇಲೆ ಒಂದೊಂದು ಕಪ್ಪು ಮಸಿಯ ಗುರ್ತು ಮಾಡಿಟ್ಟು ಮರು ದಿವಸ ಆ ಸಸಿಯನ್ನು ಕೈಯಲ್ಲಿ ತೆಗೆದುಕೊಂಡು ನೋಡಿದರೆ ಒಂದು ದಿವಸದ ಅವಧಿಯಲ್ಲಿ ಅವೆರಡೂ ಅವಯವಗಳು ಬೆಳೆದದ್ದು ಕಂಡು ಬರುವದು. ಪ್ರತಿ ದಿವಸ ನಾವು ಮಾಡುವ ನಿರೀಕ್ಷಣದಿಂದ ಆ ಅವಯವಗಳ ಅಗ್ರಭಾಗಗಳ ಬೆಳವಣಿಗೆಯು ಹೆಚ್ಚು ಕಸುವಿನಿಂದ ನಡೆಯುತ್ತಿರುತ್ತದೆಂಬದು ನಮಗೆ ಗೊತ್ತಾಗುವದು. ಈ ಸಂಗತಿಯಿಂದ ವನಸ್ಪತಿಯ ಬೆಳವಣಿಗೆಯೆಂದರೆ ಕೇವಲ ಅದರ ಅವಯವಗಳ ಸಾಮಾನ್ಯವಿಸ್ತಾರವಿರದೆ, ಆ ಬೆಳವಣಿಗೆಯ ಮೂಲಕ ಆ ವನಸ್ಪತಿಯ ಕೆಲವೊಂದು ವಿವಕ್ಷಿತ ಭಾಗದಲ್ಲಿ ಅದರ ಚಟುವಟಿಕೆಯ ಕುರುಹುಗಳು ವ್ಯಕ್ತವಾಗುತ್ತವೆಂಬದು ನಮಗೆ ಮನವರಿಕೆಯಾಗುವದು.

ಇನ್ನು, ಬೇರು ಭೂಮಿಯ ಕಡೆಗೆ ಮಣಿಯುವದರ ವಿಷಯವಾಗಿ ತುಸು ವಿಚಾರ ಮಾಡಿ ನೋಡುವಾ. ಒಂದು ದೊಡ್ಡ ಮೊಳೆತ ಅವರೆಯ ಬೀಜವನ್ನು ಕೈಯಲ್ಲಿ ತೆಗೆದುಕೊಂಡು ಅದರ ಬೇರಿನ ಬೆಳೆಯುವ ಭಾಗದ ತುದಿಯ ಮೇಲೆ ಕಪ್ಪು ಬಣ್ಣದಿಂದ ಒಂದು ಗೆರೆ ಹಾಕಿ, ಅದನ್ನು ನೀರಿನಿಂದ ತೋಯಿಸಿದ ಕಟ್ಟಿಗೆಯ ಹುಡಿಯ ಮೇಲೆ ಅಡ್ಡವಾಗಿಟ್ಟು, ಮರು ದಿವಸ ನೋಡಿದರೆ ಬೇರು ಬೆಳವಣಿಗೆಯುಳ್ಳ ಭಾಗದಲ್ಲಿ ಮಣಿದು ಕಟ್ಟಿಗೆಯ ಹುಡಿಯಲ್ಲಿ ಸೇರಿಕೊಂಡಿರುವದು ಕಂಡು ಬರುವದು.

ವನಸ್ಪತಿಯ ಬೇರು ಮಾಡತಕ್ಕ ಕರ್ತವ್ಯಗಳಲ್ಲಿ ಆ ವನಸ್ಪತಿಯು ಸ್ಥಿರವಾಗಿ ನಿಲ್ಲುವಂತೆ ಮಾಡುವದು ಒಂದು ಮುಖ್ಯಕರ್ತವ್ಯವಾಗಿದೆ. ಯಾವದೊಂದು ಪದಾರ್ಥಕ್ಕೆ ಸ್ಥೈರ್ಯವುಂಟಾಗಬೇಕಾದರೆ, ಅದರ ಗುರುತ್ವಮಧ್ಯ ಬಿಂದುವಿನಿಂದ ತೆಗೆದ ಲಂಬರೇಷೆಯು, ಅಂದರೆ ಓಲಂಬ ಗುಂಡಿ

ನ ರೇಷೆಯು (Plumb line) ಅದರ ತಳದೊಳಗೆ ಹಾಯ ಬೇಕಾಗುವದೆಂಬುದು ಪದಾರ್ಥವಿಜ್ಞಾನಶಾಸ್ತ್ರದಿಂದ ನಮಗೆ ಗೊತ್ತಾಗುವದು. ಈ ನಿಯಮವನ್ನು ಅನುಸರಿಸಿ ವನಸ್ಪತಿಯು ಸ್ವಭಾವತಃ ನೆಟ್ಟನೆ ನಿಲ್ಲಲಿಕ್ಕೆ ಯತ್ನಮಾಡುತ್ತಿರುವದು. ಈ ಪ್ರಯತ್ನದಲ್ಲಿ ಅದಕ್ಕೆ ಯಾವದೊಂದು ವ್ಯತ್ಯಯ ಉಂಟಾದರೆ ಅದರ ಜ್ಞಾನವು ಬೇರಿನ ಕೆಲವೊಂದು ಭಾಗಕ್ಕೆ ಆಗಿ, ಆ ಭಾಗವು ಆ ವನಸ್ಪತಿಯು ಪುನಃ ನೆಟ್ಟನೆ ನಿಲ್ಲುವಂತೆ ಮಾಡುವದು. ಬೇರಿನ ಆ ಭಾಗವು ಯಾವದೆಂಬ ಬಗ್ಗೆ ಕೆಲವು ಪ್ರಯೋಗಗಳನ್ನು ಮಾಡಿನೋಡುವಾ:—

ಪೂರ್ಣವಾಗಿ ಒಳೆತು ನೀರಿನಿಂದ ತೋಯಿಸಿದ ಕಟ್ಟಿಗೆಯ ಹುಡಿಯ ಥರದಲ್ಲಿ ತನ್ನ ಉದ್ದವಾದ ಬೇರು ನೆಟ್ಟನೆ ಕೆಳಗಿಳಿಯುವಂತೆ ಮಾಡಿದ ಸಸಿಯನ್ನು ಬಹು ಎಚ್ಚರಿಕೆಯಿಂದ ಕಿತ್ತಿ, ಕೂಡಲೆ ಬೆಳವಣಿಗೆಯು ಕಸುವಿನಿಂದ ನಡೆಯುವ ಅಗ್ರಭಾಗವನ್ನು ಹದನವಾದ ಚಾಕುವಿನಿಂದ ಸುಮಾರು ಎರಡು ಮಿಲಿ ಮಿಟರ*ದಷ್ಟು ಕೊಯ್ದು ೭ ನೆಯ ಆಕೃತಿಯಲ್ಲಿ

---

* ಫ್ರೆಂಚ ಪದ್ಧತಿಯಲ್ಲಿ ಉದ್ದಳತೆಯನ್ನಳೆಯುವದಕ್ಕಾಗಿ ಮಿಟರವನ್ನು ಉಪಯೋಗಿಸುವರು. ೧ ಮಿಟರ=೩೯.೩೭ ಇಂಚುಗಳು. ಒಂದು ಮಿಟರದಲ್ಲಿ ಹತ್ತುಸಮಭಾಗಗಳನ್ನು ಮಾಡಿ ಆ ಪ್ರತಿಯೊಂದು ಭಾಗಕ್ಕೆ ಡೆಸಿಮಿಟರ ಎಂಬ ಹೆಸರು ಕೊಟ್ಟಿರುವರು. ಆದ್ದರಿಂದ ೧ ಡೆಸಿ ಮಿಟರವು=೩.೯.೩೭ ಇಂಚುಗಳು. ಮಿಟರದನೂರನೇ ಭಾಗಕ್ಕೆ "ಸೆಂಟಿಮಿಟರ" ಎಂಬ ಹೆಸರು. ಆದ್ದರಿಂದ ೧ ಸೆಂಟಿಮಿಟರ ಅಂದರೆ ೩೯.೩೭ ಇಂಚುಗಳು. ಮಿಟರದ ಸಾವಿರನೆಯ ಭಾಗಕ್ಕೆ "ಮಿಲಿಮಿಟರ" ಎಂಬ ಹೆಸರು. ಆದ್ದರಿಂದ ೧ ಮಿಲಿಮಿಟರ=.೦೩೯೩೭ ಇಂಚುಗಳು.

ಡೆಕಾಮಿಟರ	=	೧೦ ಮಿಟರಗಳು.
ಹೆಕ್ಟೋಮಿಟರ	=	೧೦೦ "
ಕಿಲೋಮಿಟರ	=	೧೦೦೦ "
ಸ್ಥೂಲಮಾನದಿಂದ ೧೦ ಸೆಂಟಿಮಿಟರ	=	೪ "
೨೫ ಮಿಲಿ "	=	೧ "
೧೬ ಕಿಲೋ "	=	೧೦ ಮೈಲುಗಳು (ಇಂಗ್ಲಿಷ)

ಭಟ್ಟಿಗೆ ಹಾಕಿ ಶುದ್ಧ ಮಾಡಿದ ಸೆಂಟಿಗ್ರೇಡ ೪° ಉಷ್ಣಮಾನವುಳ್ಳ ಒಂದು ಘನ ಸೆಂಟಿಮಿಟರ ಆಕಾರವುಳ್ಳ ನೀರಿನ ತೂಕಕ್ಕೆ ೧ ಗ್ರ್ಯಾಮ ಅನ್ನುವರು.

ತೋರಿಸಿದಂತೆ ಅದನ್ನು ಕಟ್ಟಿಗೆಯ ಹುಡಿಯ ಮೇಲೆ ಅಡ್ಡ ಮಲಗಿಸಿ ಮರು ದಿವಸ ಆ ಕೊಯ್ದ ಭಾಗವನ್ನು ನಿರೀಕ್ಷಿಸಿ ನೋಡಿದರೆ, ಆ ಭಾಗವು ಹೆಚ್ಚು ಉದ್ದವಾಗಿ ಬೆಳೆದಿರುವದೆ ಹೊರತು ಎಲ್ಲಿಯೂ ಮಣಿದಂತೆ ಕಾಣುವದಿಲ್ಲ.

ಮೇಲಿನ ಪ್ರಯೋಗದಲ್ಲಿ ತೆಗೆದುಕೊಂಡಂಥ ಬೇರೊಂದು ಅಣುಸಸಿಯನ್ನು ಕಟ್ಟಿಗೆಯ ಹುಡಿಯಿಂದ ಕಿತ್ತು ತೆಗೆದು ಅದನ್ನು ಆ ಹುಡಿಯ ಮೇಲೆ ಒಂದೆರಡು ತಾಸುಗಳ ವರೆಗೆ ಅಡ್ಡ ಮಲಗಿಸಿ, ಆ ಮೇಲೆ ಮೇಲಿನ ಪ್ರಯೋಗದಲ್ಲಿ ಕತ್ತರಿಸಿದಂತೆ ಬೇರಿನ ಅಗ್ರಭಾಗವನ್ನು ಸುಮಾರು ೨ ಮಿಲಿಮಿಟರದಷ್ಟು ಕತ್ತರಿಸಿ ಪುನಃ ಆ ಸಸಿಯನ್ನು ಅಡ್ಡ ಮಲಿಗಿಸಿ ಮರು ದಿವಸ ಪರೀಕ್ಷಿಸಿ ನೋಡಿದರೆ, ಕತ್ತರಿಸಿದ ಭಾಗದ ಹತ್ತಿರ ಬೇರು ಮಣಿದು ಅದರ ಬೆಳೆದ ಭಾಗವು ಹುಡಿಯಲ್ಲಿ ಸೇರಿಕೊಂಡಿರುವದು ನಮ್ಮ ನಿದರ್ಶನಕ್ಕೆ ಬರುವದು. (ಆಕೃತಿ ೮.)

ಎರಡನೇ ಪ್ರಯೋಗದಲ್ಲಿ ಮಾಡಿದಂತೆ ಎಲ್ಲ ವ್ಯವಸ್ಥೆ ಮಾಡಿ, ಬೇರಿನ ಬೆಳೆಯುವ ಭಾಗವನ್ನು ಮಾತ್ರ ಕತ್ತರಿಸದೆ ಹಾಗೇ ಬಿಟ್ಟರೆ ಮರು ದಿವಸ ಆ ಸಸಿಯು ತನ್ನ ಬೇರನ್ನು ಅಗ್ರಭಾಗದ ತುಸು ಹಿಂದುಗಡೆ ಮಣಿಸಿ ಕಟ್ಟಿಗೆಯ ಹುಡಿಯಲ್ಲಿ ಸೇರಿಸಿರುವದು ನಮಗೆ ಕಂಡು ಬರುವದು. (ಆಕೃತಿ ೯.)

ಇನ್ನೊಂದು ಅಣುಸಸಿಯನ್ನು ತೆಗೆದುಕೊಂಡು ಅದನ್ನು ಇಡೀ ರಾತ್ರಿ ಕಟ್ಟಿಗೆಯ ಹುಡಿಯ ಮೇಲೆ ಅಡ್ಡ ಮಲಗಿಸಿ ಬಿಟ್ಟು ಮರು ದಿವಸ ಅದರ ಬೇರಿನ ಮಣಿದ ಭಾಗದಿಂದ ತುಸು ಅಂತರದ ಮೇಲಿರುವ ಅಗ್ರಭಾಗವನ್ನು ಕತ್ತರಿಸಿ ಆ ಸಸಿಯನ್ನು (೧೦ನೆಯ ಆಕೃತಿಯಲ್ಲಿ) ತೋರಿಸಿದಂತೆ ನೆಟ್ಟಗೆ ಕಟ್ಟಿಗೆಯ ಹುಡಿಯಲ್ಲಿ ಹೂಳಿಟ್ಟರೆ ಅದರ ಬೇರು ಕೆಲವು ದಿವಸಗಳ ವರೆಗೆ ಹಾಗೇ ಬೆಳೆಯ ಹತ್ತಿ ಅದಕ್ಕೆ ಹೊಸ ತುದಿಯು ಹುಟ್ಟುವ

---

೧ ಗ್ರ್ಯಾಮು =೧೫.೪ ಗ್ರೇನುಗಳು. ಒಂದು ಘನ ಡೆಸ್ಸಿಮಿಟರಕ್ಕೆ "ಲೀವರ" ಎಂಬ ಹೆಸರು. ಒಂದು ಲೀವರ ಆಕಾರವುಳ್ಳ ಮೇಲೆ ಹೇಳಿದಂಥ ಶುದ್ಧ ನೀರಿನ ತೂಕವು ಸುಮಾರು ೨⅕ ಪೌಂಡು ಅಥವಾ ಅಳತೆಯಿಂದ ೧.೮ ಪಾಯಿಂಟ ಆಗುವದು.

R. M. Mahishi.

(ಮೊದಲಿನ ೮ನೇ ಪುಟದಿಂದ ಮುಂದೆ ಸಾಗಿದ್ದು.)

ಜನಸಂಖ್ಯೆಯ ಮಾನದಿಂದ ನೂರಕ್ಕೆ ಕನಿಷ್ಟ ೪ ವಿದ್ಯಾರ್ಥಿಗಳು ಶಾಲೆಯಲ್ಲಿ ರದಿದ್ದರೆ, ಆ ಊರಲ್ಲಿ ಶಿಕ್ಷಣವು ಸಖ್ತಿಯಿಂದ ಅಮಲಿನಲ್ಲಿ ತರಲ್ಪಡುತ್ತದೆ. ೭ರಿಂದ ೧೨ ವರ್ಷದ ವಯಸ್ಸಿನ ವರೆಗಿನ ಗಂಡು ಹುಡುಗರೂ ೭ರಿಂದ ೧೦ ವರ್ಷದ ವರೆಗಿನ ಹೆಣ್ಣು ಮಕ್ಕಳೂ ಶಾಲೆಗಳಿಗೆ ಹೋಗಲೇ ಬೇಕೆಂಬ ನಿಯಮ ಉಂಟು. ಈ ನಿಯಮಕ್ಕನುಸಾರವಾಗಿ ತಮ್ಮ ಮಕ್ಕಳನ್ನು ಸಾಲೆಗೆ ಕಳುಹದ ಪಾಲಕರಿಗೆ ೨ ಆಣೆಯಿಂದ ೨ ರೂಪಾಯಿಯ ವರೆಗೆ ದಂಡ ಮಾಡಲ್ಪಡುತ್ತದೆ. ಸಂಸ್ಥಾನಗಳ ಶಾಲೆಗಳ ಇಮಾರತುಗಳೂ ವ್ಯವಸ್ಥೆಯೂ ಚೆನ್ನಾಗಿರುತ್ತವೆ. ಆದರೆ ಮಾಸ್ತರರ ಪಗಾರದ ಸಂಬಂಧದಿಂದ ಮಾತ್ರ ಕೃಪಣತನ ಕಂಡು ಬರುವದು. ಶಾಲಾಮಾಸ್ತರರ ಪಗಾರದ ಸಂಬಂಧ ದಿಂದ ಕುರಂದವಾಡ ಸಂಸ್ಥಾನದ ಕಿಗ್ಗಳತನವಂತೂ ನಾಣ್ಣುಡಿಯಾಗಿದೆ.

ಫೀಯನ್ನು ಕೊಡಬೇಕಾಗುತ್ತಿದ್ದ ಬ್ರಿಟಿಶ್ ಹದ್ದಿನಲ್ಲಿರುವ ಶಾಲೆಗಳಲ್ಲಿ ಹುಡುಗರ ಸಂಖ್ಯೆಯು ನೂರಕ್ಕೆ ೧೩ ರಂತೆ ಬೆಳೆದಿರುತ್ತದೆ; ಫೀ ಮಾಫೀ ಇದ್ದ ಸಂಸ್ಥಾನಗಳ ಶಾಲೆಗಳಲ್ಲಿ ಹುಡುಗರ ಸಂಖ್ಯೆಯು ನೂರಕ್ಕೆ ೨೦ ರಂತೆ ಬೆಳೆದಿರುತ್ತದೆ.

ಸರಕಾರದಿಂದ ಸಹಾಯ ಹೊಂದುವ ಖಾಸಗೀ ಶಾಲೆಗಳು:— ಈ ವರ್ಷ ಖಾಸಗೀ ಶಾಲೆಗಳ ಬಡ ವಿದ್ಯಾರ್ಥಿಗಳಿಗೆ ಪುಸ್ತಕಗಳು ಸ್ಲೇಟುಗಳು ಮುಂತಾದವುಗಳನ್ನು ಕೊಡುವ ವ್ಯವಸ್ಥೆಯು ಮಾಡಲ್ಪಟ್ಟಿತು. ದಕ್ಷಿಣ ಭಾಗದ ಬ್ರಿಟಿಶ್ ಹದ್ದಿನಲ್ಲಿ ಇಂಥ ಶಾಲೆಗಳು ೪೧೭ ಹಾಗೂ ಮುನಶಿಪಲ್ ಹದ್ದಿನಲ್ಲಿ ೬೦ ಇರುವವು. ಹಿಂದಿನ ವರ್ಷಕ್ಕಿಂತ ಈ ಸಂಖ್ಯೆ ಸ್ವಲ್ಪ ಕಡಿಮೆ ಇರುವದು.

ರಾತ್ರಿಯ ಶಾಲೆಗಳು:–ದಕ್ಷಿಣ ಭಾಗದಲ್ಲಿ ಇಂಥ ಶಾಲೆಗಳು ಕುಲಾಬಾ ಜಿಲ್ಹೆಯಲ್ಲಿ ಎರಡು ಮಾತ್ರ ಉಂಟು. ಅವೆರಡು ಶಾಲೆಗಳಲ್ಲಿ ಕೂಡಿ ೬೩ ವಿದ್ಯಾರ್ಥಿಗಳಿದ್ದರು. ಹುಬ್ಬಳ್ಳಿಯಲ್ಲಿಯೂ ಇಂಥದೊಂದು ಶಾಲೆಯು ಸ್ಥಾಪಿಸಲ್ಪಟ್ಟಿರುತ್ತದೆ.

ಸರಕಾರದ ಸಹಾಯ ಪಡೆಯದಂಥ ಖಾಸಗೀ ಶಾಲೆಗಳು:— ದಕ್ಷಿಣ ಭಾಗದಲ್ಲಿದ್ದ ಇಂಥ ಖಾಸಗೀ ಶಾಲೆಗಳಲ್ಲಿ ೭೩ ಶಾಲೆಗಳು ಕುರಾಣ ಕಲಿಸುವ ಶಾಲೆಗಳಿರುತ್ತವೆ. ಈ ಶಾಲೆಗಳಲ್ಲಿ ಕೆಲವು ಶಾಲೆಗಳ ಮಾಸ್ತ

ರರಿಗೆ ಸ್ಪೆಶಲ್ ಮಹಮಡನ್ ಡಿಪುಟಿ ಎಜ್ಯುಕೇಶನಲ್ ಇನಸ್ಪೆಕ್ಟರರವರು ಉರ್ದುವನ್ನೂ ಕಲಿಸುವದಕ್ಕೆ ಉಪದೇಶ ಮಾಡಿ ತಮ್ಮ ಶಾಲೆಗಳನ್ನು ರಜಿಷ್ಟರ ಮಾಡಿಸಿಕೊಳ್ಳಲಿಕ್ಕೆ ಅವರ ಮನಸು ಒಲಿಸಿದ್ದಾರೆ.

ಹೆಣ್ಣು ಹುಡುಗರ ಶಾಲೆಗಳು:—ಈ ಶಾಲೆಗಳು ೧,೦೫೦ ರಿಂದ ೧,೧೦೪ ಆದವು, ಮತ್ತು ಹುಡುಗೆಯರ ಸಂಖ್ಯೆಯು ೭೦,೯೬ ರಿಂದ ೭೪,೯೩೬ ಆಯಿತು. ಪ್ರಾಥಮಿಕ ಶಾಲೆಗಳಲ್ಲಿ ಕಲಿಯುತ್ತಿದ್ದ ಹುಡುಗೆಯರ ಒಟ್ಟು ಸಂಖ್ಯೆಯು ೧,೦೧,೫೩೮ ರಿಂದ ೧,೦೯,೬೦೬ ಆಯಿತು. ಪುಣೆಯ ಹೆಣ್ಣು ಮಕ್ಕಳ ಪ್ರಾಕ್ಟಿಸಿಂಗಸ್ಕೂಲಿನಲ್ಲಿ ಹೆಣ್ಣು ಮಕ್ಕಳ ಸಂಖ್ಯೆ ೩೩೬ ಆಗಿದ್ದದರಿಂದ ಬಹಳ ದಟ್ಟಣೆಯಾಗಿರುತ್ತದೆ. ಅಹಮದನಗರ ಮುನಸಿಪಾಲಿಟಿಯುವರು ಲಗ್ನವಾದ ಹೆಣ್ಣು ಮಕ್ಕಳಿಗೆ ಅವರವರ ಮನೆಯಲ್ಲಿ ಕಲಿಸುವ ಬಗ್ಗೆ ಮಾಡಿದ ವ್ಯವಸ್ಥೆಯು ಇನ್ನೂ ನಡೆದಿರುತ್ತದೆ. ಕಳೆದ ೫ ವರ್ಷಗಳಲ್ಲಿ ಈ ಕ್ಲಾಸುಗಳಲ್ಲಿ ಒಟ್ಟು ೩೭೧ ವಿದ್ಯಾರ್ಥಿನಿಯರು ಕಲಿತರು. ದಕ್ಷಿಣಭಾಗದಲ್ಲಿ ಧಾರವಾಡದ ಹೆಣ್ಣು ಮಕ್ಕಳ ಟ್ರೇನಿಂಗ ಕಾಲೇಜದ ಪ್ರಾಕ್ಟಿಸಿಂಗಸ್ಕೂಲಿನಲ್ಲಿ ಮಿಸ್ ನ್ಯೂಲಂಡ ಮತ್ತು ಅವರ ತಂಗಿಯುವರ ಪ್ರಯತ್ನದಿಂದ ಹುಡುಗೆಯರ ಸಂಖ್ಯೆಯು ೧೬೬ ಆಗಿದ್ದು, ಶಾಲೆಯ ಸ್ಥಿತಿಯು ಬಹಳ ಸಮಾಧಾನಕರವಾಗಿ ಸುಧಾರಿಸಿರುತ್ತದೆ. ಈ ಬಗ್ಗೆ ಮಿಸ್ ನ್ಯೂಲಂಡ ಮತ್ತು ಅವರ ತಂಗಿಯುವರು ಆಭಾರಕ್ಕೆ ಪಾತ್ರರಿದ್ದಾರೆ. ಶಾಲೆಗೆ ಬರುವ ಹುಡುಗೆಯರ ಮುಖವನ್ನು ತೊಳೆಯಿಸುವ ಹಾಗೂ ಅವರ ಹೆಳಲು ಹಾಕಿಸುವ ವ್ಯವಸ್ಥೆಯು ಶಾಲೆಯಲ್ಲಿ ಮಾಡಿಸಲ್ಪಟ್ಟಿರುತ್ತದೆ. ದಕ್ಷಿಣಭಾಗದಲ್ಲಿ ಲೋಕಲಬೋರ್ಡ ಶಾಲೆಗಳು ೧೦೩ ರಿಂದ ೧೧೬ ಆದವು. ಶಿಕ್ಷಕಿಯರ ಕೆಲಸವನ್ನು ವಹಿಸುವದಕ್ಕೋಸ್ಕರ ಟ್ರೇಂಡರಾಗುವದಕ್ಕೆ ವಿದ್ಯಾರ್ಥಿನಿಯರಿಗೆ ಸ್ಕಾಲರಶಿಪ್ಪುಗಳ ರೂಪದಿಂದ ಉತ್ತೇಜನವು ಕೊಡಲ್ಪಡುತ್ತದೆ. ಆದರೂ ಟ್ರೇನಿಂಗ ಕಾಲೇಜಕ್ಕೆ ವಿದ್ಯಾರ್ಥಿನಿಯರನ್ನು ದೊರಕಿಸುವದು ಇನ್ನೂ ಕಠಿಣವಾಗಿರುತ್ತದೆ. ಮುನಸಿಪಾಲಿಟಿಯ ಶಾಲೆಗಳು ಹಿಂದಿನ ವರ್ಷದಷ್ಟೇ ಅಂದರೆ ೫೭ ಇರುತ್ತವೆ. ಧಾರವಾಡ ಮುನಶಿಪಾಲಿಟಿಯುವರು "ಮಾಡೆಲ್ ಇನ್‌ಫಂಟಸ್ಕೂಲ" ಅಂದರೆ ಬಾಲಕಿಯರ ಮಾದರಿಯ ಶಾಲೆಯನ್ನು ಸ್ಥಾಪಿಸಿದ್ದಾರೆ.

ಸಾಮಾನ್ಯ ವಿಚಾರಗಳು:- ಈ ವರ್ಷದ ಮಹತ್ವದ ಸಂಗತಿಗಳು ಕೆಳಗೆ ಬರೆದ ಪ್ರಕಾರ ಇರುತ್ತವೆ:—

ಸರಕಾರದಿಂದ ದೊರೆತ ೧,೧೪,೦೦೦ ರೂಪಾಯಿಯ ಸ್ಪೇಶಲ್ ಗ್ರ್ಯಾಂಟನಿಂದ ೫೭೩ ಹೊಸ ಶಾಳೆಗಳು ಸ್ಥಾಪಿಸಲ್ಪಟ್ಟವು. ಸರಕಾರದಿಂದ ಮತ್ತೆ ದೊರೆತ ೧,೪೪,೦೦೦ ರೂಪಾಯಿಯ ಸ್ಪೇಶಲ್ ಗ್ರ್ಯಾಂಟನಿಂದ ಮಾಸ್ತರರ ಪಗಾರವು ಹೆಚ್ಚಿಸಲ್ಪಟ್ಟಿತು; ಶಿಕ್ಷಕರ ಕನಿಷ್ಠ ಪಗಾರ ೯ ರೂಪಾಯಿ ಈ ಮೊದಲೇ ಮಾಡಲ್ಪಟ್ಟಿತ್ತಷ್ಟೇ. ಹೊಸ ಗ್ರ್ಯಾಂಟನಿಂದ ೫ ವರ್ಷದ ನೌಕರಿಯುಳ್ಳವರಿಗೆ ೧೦ ರೂಪಾಯಿ ಸಂಬಳವನ್ನು ಕೊಡುವದಕ್ಕೂ, ಟ್ರೇಂಡ ಹೆಡ್ ಮಾಸ್ತರರ ಕನಿಷ್ಠ ಪಗಾರವನ್ನು ೧೨ ರೂಪಾಯಿ ಮಾಡುವದಕ್ಕೂ, ಟ್ರೇಂಡ ಅಸಿಷ್ಟಂಟರ ಹಾಗೂ ಅನ್ ಟ್ರೇಂಡ ಹೆಡ್ ಮಾಸ್ತರರ ಕನಿಷ್ಠ ಪಗಾರವನ್ನು ೧೧ ರೂಪಾಯಿ ಮಾಡುವದಕ್ಕೂ, ಕೆಲವು ಟ್ರೇಂಡ ಮಾಸ್ತರರಿಗೆ ಅವರ ಸರ್ಟಿಫಿಕೇಟಿನಷ್ಟು ಪಗಾರ ಕೊಡುವದಕ್ಕೂ ಅನುಕೂಲವಾಯಿತು. ಕೆಲವು ಪ್ರಸಕ್ತಿಗಳಲ್ಲಿ ಮಾಸ್ತರರ ಪಗಾರವನ್ನು ಹೆಚ್ಚು ಮಾಡಿದ್ದರಿಂದ ಅವರ ನೌಕರಿಯು ಪೆನ್ಶನಕ್ಕೆ ಪಾತ್ರವಾಗಿ ಅವರ ಸ್ಥಿತಿಯು ಮೊದಲಿನದಕ್ಕಿಂತ ಬಹಳ ಗೌರವವುಳ್ಳದ್ದಾಯಿತು.

ಈ ಸುಧಾರಣೆಗಳಿಂದ ಎಲ್ಲರಿಗೂ ಆನಂದವಾಗಿರುವದು ಸರಿ. ಆದರೂ ಈ ಸುಧಾರಣೆಗಳನ್ನು ಇನ್ನೂ ಹೆಚ್ಚಾಗಿ ಮುಂದೆ ಸಾಗಿಸುವದಕ್ಕೆ ಹಣದ ಅನುಕೂಲತೆಯಾಗುವದೆಂದು ಆಶಿಸುತ್ತೇವೆ.

ನಾಲ್ಕು ವರ್ಷ ನೌಕರಿಯುಳ್ಳ ಮಾಸ್ತರರಿಗೆ ಅವರ ಸರ್ಟಿಫಿಕೇಟಿನಂತೆ ಪಗಾರ ಕೊಟ್ಟ ಕೂಡಲೆ ಅವರು ಅವರಷ್ಟೇ ಸರ್ಟಿಫಿಕೇಟುಗಳಿದ್ದು ೧೦ ವರ್ಷ ನೌಕರಿಯುಳ್ಳ ಮಾಸ್ತರರ ಜೊತೆಗೆ ಬಂದಿದ್ದಾರೆ. ಆದಕಾರಣ, ಹೆಚ್ಚು ನೌಕರಿಯುಳ್ಳ ಶಿಕ್ಷಕರು ತಮಗೆ ಕೋಡಿನಂತೆ ಪಗಾರವು ಎಂದು ಸಿಗುವದೆಂದು ಕೇಳುವದು ಸ್ವಾಭಾವಿಕವಾಗಿದೆ. ಕಳೆದ ವರ್ಷ ಮಾಡಿದ ಲೆಕ್ಕದಿಂದ ನೋಡಿದರೆ, ಕೋಡಿನಂತೆ ಎಲ್ಲ ಮಾಸ್ತರರಿಗೂ ಪಗಾರ ಕೊಡುವದಕ್ಕೆ ೫೩ ಲಕ್ಷ ರೂಪಾಯಿಗಳು ಬೇಕಾಗುತ್ತವೆಂದು ಕಂಡು ಬಂದಿರುತ್ತದೆ. ಕನಿಷ್ಠ ಪಕ್ಷಕ್ಕೆ ಇದರ ಅರ್ಧದಷ್ಟು ಹಣ ದೊರೆದರೂ ಬಹುಶಃ ವಾಸ್ತವಿಕವಾದ ತಕರಾರುಗಳೆಲ್ಲ ನಿವಾರಣೆಯಾಗಬಹುದು.

ಶಾಲಾ ಮಾಸ್ತರರು ಬಹುಶಃ ಪೆನ್ಶನದ ಮುದ್ದತ್ತು ಆಗುವದರೊಳಗೆ

ತೀರಿಕೊಳ್ಳುವದರಿಂದ ಅವರಿಗೋಸ್ಕರ ಪೇನ್ಶನ್ ಫಂಡನ್ನು ತುಂಬುವದು ಹಣವನ್ನು ವ್ಯರ್ಥ ಖರ್ಚು ಮಾಡಿದಂತಾಗುತ್ತದೆಂದು ಕಳೆದ ವರ್ಷ ಕೆಲವರ ಅಭಿಪ್ರಾಯವಿದ್ದದರಿಂದ ಈ ಸಂಬಂಧದ ಚೌಕಶಿ ಮಾಡಲಾಗಿ ಈ ಅಭಿಪ್ರಾಯವು ಅತಿಶಯೋಕ್ತಿಯುಳ್ಳದ್ದಿರುವದೆಂದು ತೋರಿಬಂತು.

ಹೊಲಗಳಲ್ಲಿ ಕೆಲಸ ನಡಿಯುವ ಹಂಗಾಮುದಲ್ಲಿ ಒಕ್ಕಲತನ ಮಾಡುವವರ ಹುಡುಗರಿಗೆ ಹೊಲಗಳಲ್ಲಿ ಕೆಲಸ ಮಾಡುವದಕ್ಕೆ ಅನುಕೂಲವಾಗಬೇಕೆಂದು ಆ ಪ್ರಕಾರ ಶಾಲೆನಡಿಯುವ ತಾಸುಗಳನ್ನು ಬದಲಿಸಿ ಅನುಭವ ತಕ್ಕೊಂಡು ನೋಡಬೇಕೆಂದು ಸರಕಾರದ ಅಪ್ಪಣೆಯಾದ ಮೇರೆಗೆ ಅನುಭವ ತಕ್ಕೊಂಡು ನೋಡಿತು. ಮಧ್ಯಭಾಗದಲ್ಲಿ ಈ ಪ್ರಕಾರದ ವ್ಯವಸ್ಥೆಯ ಉಪಯೋಗವನ್ನು ಜನರು ಕ್ವಚಿತ್ತಾಗಿ ಮಾಡಿಕೊಂಡರು. ಹಾಗೂ ಈ ಪ್ರಯೋಗದ ಉದ್ದೇಶವು ಊರವರಿಗಾಗಲಿ ಶಾಲಾ ಮಾಸ್ತರರಿಗಾಗಲಿ ಚನ್ನಾಗಿ ತಿಳಿದಂತೆ ಕಂಡು ಬರಲಿಲ್ಲ. ನಾಸಿಕ ಜಿಲ್ಹೆಯಲ್ಲಿ ಈ ವ್ಯವಸ್ಥೆಗೆ ತಕ್ಕಮಟ್ಟಿಗೆ ಯಶಸ್ಸು ಬಂತು. ಅಲ್ಲಿ ಶಾಲೆಯನ್ನು ಮುಂಜಾನೆ ಒಪ್ಪತ್ತು ಮಾತ್ರ ಮಾಡುತ್ತಿದ್ದರು. ಕೆಲಕೆಲವು ಕಡೆಗೆ ಊರವರ ಇಚ್ಛೆಯ ಪ್ರಕಾರ ಶಾಲೆಯು ೧೧ ಘಂಟೆಯಿಂದ ಸಂಜೆಯ ೫ ಘಂಟೆಯವರೆಗೆ (ನಡುವೆ ೧ ತಾಸು ಸೂಟೀ ಬಿಟ್ಟು) ಮಾಡಲ್ಪಟ್ಟಿತು. ಉತ್ತರಭಾಗದ ಪ್ರತಿ ಒಂದು ಜಿಲ್ಹೆಯಲ್ಲಿ ಈ ಅನುಭವವು ತೆಗೆದುಕೊಳ್ಳಲ್ಪಟ್ಟಿತು. ಆದರೆ ಯಾವ ಜಿಲ್ಹೆಯಲ್ಲಿಯೂ ಅದಕ್ಕೆ ಯಶಸ್ಸು ಬರಲಿಲ್ಲ. ದಕ್ಷಿಣಭಾಗದಲ್ಲಿ ರತ್ನಾಗಿರಿ ಜಿಲ್ಹೆಯಲ್ಲಿ ಮಾತ್ರ ಈ ಅನುಭವವು ತೆಗೆದುಕೊಳ್ಳಲ್ಪಟ್ಟಿತು. ಅಲ್ಲಿ ಮಳೆಗಾಲದಲ್ಲಿ ಶಾಲೆಯನ್ನು ೧೧ ಘಂಟೆಯಿಂದ ೫ ಘಂಟೆಯ ವರೆಗೆ ಮಾಡಿದ್ದರಿಂದ ಹುಡುಗರು ಗಾಳಿ ಮಳೆಗಳಲ್ಲಿ ಹಳ್ಳಕೊಳ್ಳಗಳೊಳಗಿಂದ ದಿನಾಲು ಎರಡು ಸಾರೆ ಶಾಲೆಗೆ ಹೋಗಿ ಬರುವದು ತಪ್ಪಿದ ಕಾರಣ ಈ ವ್ಯವಸ್ಥೆಯು ತಕ್ಕಮಟ್ಟಿಗೆ ಜನರ ಮನಸ್ಸಿಗೆ ಬಂತು.

ವಿದ್ಯಾಖಾತೆಯ ನೋಟೀಸುಗಳು.

——(೦)——

ಮುಂಬಯಿ ಇಲಾಖೆಯ ಪ್ರಾಥಮಿಕ ಶಾಲೆಗಳಲ್ಲಿ ಉಪಯೋಗಿಸಲಿಕ್ಕೆ ಮಂಜೂರಾದ ಪುಸ್ತಕ, ಚಿತ್ರ, ಪಟ ಮೊದಲಾದವುಗಳ ಪಟ್ಟಿಯಿಂ

ಕೆಳಗೆ ಬರೆದಂಥ ಪುಣೆಯ ಚಿತ್ರಶಾಲಾ ಪ್ರೆಸ್ಸಿನಲ್ಲಿ ಮುದ್ರಿತವಾಗಿ ಪ್ರಕಾಶ ಹೊಂದಿದ ಚಿತ್ರ, ಪಟ ಮೊದಲಾದವು ತೆಗೆದು ಹಾಕಲ್ಪಟ್ಟವೆ:—

ಮರಾಠಿ.

ಬಾಲಬೋಧ ಅಕ್ಷರ ಪಟ.	ಬಣ್ಣದ ಪಟ.
ಆಕೃತಿಯ ಪಟ.	ಆಕಾರದ ಪಟ (Form chart)
ಅಪೂರ್ಣಾಂಕಗಳಪಟ (ಅಪೂರ್ಣಾಂಕ ಪೆಟ್ಟಿಗೆ ಸಹಿತ)	ಮೋಡೀ ಅಕ್ಷರಗಳ ಪಟ.
ಹತ್ತಿಯ ಚಿತ್ರ	ಉಣ್ಣೆಯ ಚಿತ್ರ
ಧನುಸ್ಯದ ಚಿತ್ರ	ಎಲೆಗಳ ಚಿತ್ರ
ಬೆಕ್ಕಿನ ಚಿತ್ರ	ಹುಲಿಯ ಚಿತ್ರ
ಕೋಳಿಯ ಚಿತ್ರ	ಆನೆಯ ಚಿತ್ರ
ಮೊಲದ ಚಿತ್ರ	ತೊಗಲಬಾವಲಿಯ ಚಿತ್ರ
ಗಿಳಿಯ ಚಿತ್ರ	ಸಿಂಹದ ಚಿತ್ರ
ಕಾಗಿ ಗುಬ್ಬಿಗಳ ಚಿತ್ರ	ಬಾಲಕರ ವರ್ಗಕ್ಕೆ ತಯಾರಿಸಿದ ಸುಲಭವಾದ ಡ್ರಾಯಿಂಗ ಆಕೃತಿಗಳ ಚಿತ್ರ
ಬೇರೆ ಕುಲಗಳ ಜನರ ಚಿತ್ರ	ಮೋಡೀ ಬಾರಾಖಡಿಯ ಚಿತ್ರ

ವನಸ್ಪತಿಗಳ ಎಲೆಗಳನ್ನು ತೋರಿಸುವ ಎರಡು ಚಿತ್ರಗಳು
ಅಸ್ಥಿ ಪಂಜರದ ಚಿತ್ರ
ಬ್ರಿಟಿಶ ಸಾಮ್ರಾಜ್ಯದ ನಿಶಾನೆಗಳನ್ನು ತೋರಿಸುವ ಚಿತ್ರ

ಗುಜರಾಥೀ.

ಸಿಂಹದ ಚಿತ್ರ	ಒಂಟೆಯ ಚಿತ್ರ
ಮೊಲದ ಚಿತ್ರ	ಇಂಡಿಯನ್ ಎಲೆಗಳ ಚಿತ್ರ.
ಇಚತಿಯ ಚಿತ್ರ	ಹುಲಿಯ ಚಿತ್ರ
ಕೋಣನ ಚಿತ್ರ	ಆನೆಯ ಚಿತ್ರ
ತೋಳನ ಚಿತ್ರ	ಹುಂಜದ ಹಾಗು ಕೋಳಿಗಳ ಚಿತ್ರ
ನವಿಲ ಚಿತ್ರ	ನೂಲಿನ ಕಾರಖಾನೆಯ ಚಿತ್ರ.
ಉಣ್ಣೆಯ ಚಿತ್ರ	ಅಪೂರ್ಣಾಂಕಗಳ ಪಟ.
ಆಕೃತಿಗಳ ಪಟ	ಬೇರೆ ಬೇರೆ ಕುಲಗಳ ಜನರ ಪಟ
ಬಣ್ಣದ ಪಟ	೧೦ ಅಂಕಿಗಳನ್ನು ಕಲಿಸುವ ಪಟ

Office of the Director of Public Instruction Poona, 12th Dec. 1910 } (*Sd*). W. H Sharp, *Director of Public Instruction.*

ಜಾಹೀರಾತು.

ಮುಂಬಯಿ ಇಲಾಖೆಯಲ್ಲಿಯ ಪ್ರಾಥಮಿಕ ಶಾಲೆಗಳ ಹಾಗೂ ಅಂಗ್ಲೋ ವ್ಹರ್ನ್ಯಾಕ್ಯುಲರ ಶಾಲೆಗಳ ಪುಸ್ತಕಾಲಯಗಳ ಉಪಯೋಗಕ್ಕೋಸ್ಕರ ಮಂಜೂರು ಮಾಡಿದ ಆರ್. ಜೆ. ಗೋಖಲೆ ಬಿ. ಎ. ಇವರಿಂದ ರಚಿಸಲ್ಪಟ್ಟ "ವಕ್ತೃಪಾಠಮಾಲಾ" ಮೊದಲನೆಯ ಭಾಗ ಎಂಬ ಮರಾಠೀ ಪುಸ್ತಕವನ್ನೂ, ಪುಸ್ತಕಾಲಯಗಳ ಉಪಯೋಗಕ್ಕೂ, ಇನಾಮವಾಗಿ ಕೊಡುವದಕ್ಕೂ ಮಂಜೂರುಮಾಡಿದ ಕೆ. ಎಸ್. ಚಿಪಳೂಣಕರ ಇವರಿಂದ ರಚಿತವಾದ "ರಾಸೆಲಾಸ್" ಎಂಬ ಮರಾಠೀ ಪುಸ್ತಕವನ್ನೂ ಮಂಜೂರು ಮಾಡಿದ ಪುಸ್ತಕಗಳ ಪಟ್ಟಿಯಿಂದ ತೆಗೆದು ಹಾಕಿರುತ್ತದೆ.

Office of the Director of Public Instruction Poona, 19th Dec. 1910.

(*Sd*) W. H. Sharp.
Director of Public Instruction.

ಪ್ರಾಥಮಿಕ ಶಾಲೆಗಳಲ್ಲಿ ಉಪಯೋಗಿಸುವದಕ್ಕೋಸ್ಕರ ಈ ಮೊದಲು ಸರಕಾರದಿಂದ ಮಂಜೂರಾಗಿದ್ದಂಥ ಕೆಳಗೆ ಕಾಣಿಸಿದ ಮರಾಠೀ ಪುಸ್ತಕಗಳನ್ನು ಮಂಜೂರಾದ ಪುಸ್ತಕಗಳ ಪಟ್ಟಿಯೊಳಗಿಂದ ಸರಕಾರದ ಜಾಹೀರ ನೋಟೀಸ ನ. ೨೬೮೯ರಿನ ಮೇರೆಗೆ ತೆಗೆದು ಹಾಕಿರುತ್ತದೆ:—

ಪುಸ್ತಕದ ಹೆಸರು.	ಯಾವ ನೋಟೀಸಿನಲ್ಲಿ ಮಂಜೂರಾಗಿತ್ತು.
के. व्ही. फाटक कृत हिंदुस्थानचा ऐतिहासिक नकाशा. (Historical Map of India)	ನಂ. ೧೫೯೪ ತಾ॥ ೧ ಜೂನ ೧೯೦೮.
म्यानेजर चित्रशाळा स्टीमप्रेस— शिक्षणोपयोगी मानसशास्त्र.	ನಂ. ೫೫೪ ತಾ॥ ೯ ಮಾರ್ಚ ೧೯೦೯

ಜಾಹೀರಾತು.

—:o:—

ಕೇ. ಎಸ್. ಚಿಪಳೂಣಕರ ಎಂಬವರಿಂದ ರಚಿತವಾದ साक्रेतीसाचे चरित्र ಎಂಬ ಮರಾಠೀ ಪುಸ್ತಕವು ಮರಾಠೀ ಪ್ರಾಥಮಿಕ ಶಾಲೆಗಳಿಗೂ ಅಂಗ್ಲೋವ್ಹರ್ನ್ಯಾಕ್ಯುಲರ ಶಾಲೆಗಳಿಗೂ ಇನಾಮಿಗೋಸ್ಕರ ಮಂಜೂರು ಮಾಡಿದ ಪುಸ್ತಕಗಳ ಪಟ್ಟಿಯೊಳಗಿಂದ ತೆಗೆದು ಹಾಕಿರುತ್ತದೆ.

Office of the Director of Public Instruction Poona 11th January 1911.	}	P. WREN, *For Director of Public Instruction.*

ನೋಟೀಸು.

ಯಾವತ್ತರಿಗೂ ಈ ನೋಟೀಸಿನಿಂದ ತಿಳಿಸುವದೇನಂದರೆ:—

ಕನ್ನಡದಲ್ಲಿ ಆಗತಕ್ಕ ವರ್ಥಮಾನಪತ್ರಿಯ ಪರೀಕ್ಷೆಯು ೧೯೧೧ನೇ ಇಸ್ವಿಯ ಡಿಶಂಬರ ತಿಂಗಳ ೧೧ನೇ ತಾರೀಖು ಸೋಮವಾರ ದಿವಸದಿಂದ, ಕೆಳಗೆ ಸಹಿ ಮಾಡಿದವರ ಕಡೆಯಿಂದ ೧೯೧೧ ಇಸ್ವಿಯ ಫೇಬ್ರುವರಿ ತಿಂಗಳ ಕನ್ನಡ ಶಾಲಾಪತ್ರಕದಲ್ಲಿ ೩೯-೪೦ ಪಾನುಗಳಲ್ಲಿ ಪ್ರಕಟಿಸಿದ ನಿಯಮಗಳಿಗೆ ಅನುಸರಿಸಿ, ಧಾರವಾಡ ಟ್ರೇನಿಂಗಕಾಲೇಜದಲ್ಲಿ ತೆಗೆದುಕೊಳ್ಳಲಾದೀತು. ಸದರೀ ಪರೀಕ್ಷೆಯಲ್ಲಿ ೪೦ ರೂಪಾಯಿಯ ಬಕ್ಷೀಸು ಒಂದು, ಮತ್ತು ೩೦ ರೂಪಾಯಿಯ ಬಕ್ಷೀಸು ಒಂದು ಹೀಗೆ ಎರಡು ಬಕ್ಷೀಸುಗಳಿರುವವು. ಪರೀಕ್ಷೆಗೆ ಬರತಕ್ಕ ಉಮೇದವಾರರು ತಮ್ಮ ತಮ್ಮ ಅರ್ಜಿಗಳನ್ನು ಕೆಳಗೆ ಸಹಿ ಮಾಡಿದವರ ಕಡೆಗೆ ತೀರ ತಡಮಾಡಿ, ಅಂದರೆ ೧೯೧೧ನೇ ನವಂಬರ ೩೦ನೇ ತಾರೀಖಿಗಾಗಲಿ, ಅಥವಾ ಅದರ ಪೂರ್ವದಲ್ಲಿಯಾಗಲಿ ಮುಟ್ಟುವಂತೆ ತಪ್ಪದೆ ಕಳಿಸಬೇಕು. ಪರೀಕ್ಷೆಗೆ ಪ್ರಾತಃಕಾಲದ ಹನ್ನೊಂದು ಘಂಟೆಗೆ ಪ್ರಾರಂಭವಾಗುವದು.

R. B. KARANDIKAR.
Educational Inspector, S. D.

ಜಾಹೀರಾತು.

ಪ್ರಾಥಮಿಕ ಶಾಲೆಗಳಲ್ಲಿ ಉಪಯೋಗಿಸಲಿಕ್ಕೆ ಮಂಜೂರು ಮಾಡಿದ ಪುಸ್ತಕ ಮೊದಲಾದವುಗಳ ಪಟ್ಟಿಯನ್ನು ಎಲ್ಲರ ಮಾಹಿತಿಗೋಸ್ಕರ ಕೆಳಗೆ ಕೊಟ್ಟದೆ.

ನಂಬರು	ಪುಸ್ತಕ ಮೊದಲಾದವುಗಳ ಹೆಸರು	ಪುಸ್ತಕದ ಭಾಷೆ.	ಯಾವ ಉಪಯೋಗಕ್ಕೋಸ್ಕರ ಪುಸ್ತಕ ಮೊದಲಾದವುಗಳು ಮಂಜೂರಾಗಿವೆ.	ಬೆಲೆ ರು.	ಬೆಲೆ ಆ.	ಬೆಲೆ ಪೈ	ಶರಾ.
೧	ನ. ನಾ. ದಾತಾರಕೃತ— ಬೆಳಗಾಂವ ಜಿಲ್ಹೆಯ ಮನೆಯೊಳಗೆ ಉಪಯೋಗಿಸುವ ನಕಾಶ	ಕನ್ನಡ	ಶಾಲೆಗಳಲ್ಲಿ ಉಪಯೋಗಿಸಲಿಕ್ಕೂ ಇನಾಮಾಗಿ ಕೊಡಲಿಕ್ಕೂ	...	೨ ೩ ೫		ಕಾಗದ ಅರಿವೆಗೆ ಹಚ್ಚಿದ್ದು. ಅರಿವೆಗೆ ಹಚ್ಚಿದ್ದು ಸುತ್ತಿಡುವದಕ್ಕೆ ಮೇಲೆ ಕೆಳಗೆ ಕಟ್ಟಿಗೆಯನ್ನು ಹಾಕಿದ್ದು.
೨	ಮುಂಬಯಿ ಕರ್ನಾಟಕದ ಗೋಡೆಗೆ ಹಾಕುವ ನಕಾಶ	ಸದರ	ಶಾಲೆಗಳಲ್ಲಿ ಉಪಯೋಗಿಸಲಿಕ್ಕೆ	೩			
೩	ವ. ಸ. ಹುಲಿಕೃತ:— ಕನ್ನಡ ಅಂಕಗಣಿತ ಭಾ. ೨....	ಸದರ	ಪುಸ್ತಕಾಲಯಗಳ ಉಪಯೋಗಕ್ಕೆ....	೧	೬		
೪	ಗ. ನ. ಸಂಗಮ:— ಶ್ರೀಶಂಕರ ಚರಿತ್ರವು.	ಸದರ	ಇನಾಮಾಗಿ ಕೊಡಲಿಕ್ಕೂ, ಪುಸ್ತಕಾಲಯಗಳ ಉಪಯೋಗಕ್ಕೂ		೮		
೫	ಗ. ವ. ಗೋರೆ:— ಡಾ|| ಜಾನಸನ್ನನ ರಾಸೆಲಾಸ ಗ್ರಂಥದ ಕನ್ನಡ ಭಾಷಾಂತರ.	ಸದರ	ಸದರ	೧			

Office of the Director of Public Instruction
POONA 28 NOV 1910

P. WREN.
Asstt. Director of Public Instruction.

ಸಿದ್ಧನಾಥ ವಾಚನ ಮಂದಿರ.
ಧಾ. ರ. ಸ. - ಸ.

ಶಾಲಾಪತ್ರಿಕೆ

ಪದ್ಯಂ

ಪ್ರಿಂಟಿವಿದ್ಯಾಗುರುವರ್ಯರುನ್ನತಿಕೆಯಂ ಸಚ್ಛಿಷ್ಯಶಿಕ್ಷಾಕ್ರಮಂ
ಬಯಸುತ್ತಂ ಪ್ರತಿಮಾಸದಾದಿಗೊಳ್ಳವಿಂದೀ ಪತ್ರಮಂ ಮುದ್ರಿಸಿ ||
ನಯದಿಂದಿತ್ತಪೆವೀದುವರ್ಗೆ ಸುಗುಣಂದೋರಿತ್ತು ಕೈಕೊಂಬುದೈ
ದಯೆಯಿಂ ಪೋಷವತಿಪ್ಪವೇಳ್ಪುದು ಬುಧರ್ ಜ್ಞಾನಾಭಿವೃದ್ಧಿಪ್ರಿಯರ್

ಪುಸ್ತಕ ೪೭ { ಫೆಬ್ರುವರಿ ೧೯೧೧. { ಸಂಚಿಕೆ ೨.

ವಿದ್ಯಾಸುಧಾರಣಾಸಂಬಂಧದ ವೃತ್ತಾಂತಗಳು.

ಧಾರವಾಡ ಜಿಲ್ಲೆಯ ವರ್ಣನೆಯು.

(ರಾ. ರಾ. ಫ. ನ. ಮುಗದಾಳ, ಬಿ. ಎ. ಇವರು ಬರೆದದ್ದು.)

(೧)

೧ನೇ ಪ್ರಕರಣ.

ಉಪೋದ್ಘಾತ:—ಯಾವದೊಂದು ಪ್ರದೇಶದ ಭೂಗೋಲವನ್ನು ಅಭ್ಯಾಸಿಸುವದಾದರೆ ಆ ಪ್ರದೇಶದ ನಕಾಶವನ್ನು ಮನನ ಮಾಡಿಕೊಳ್ಳುವದೇ ಮೇಲಾದ ಉಪಾಯವು. ನಕಾಶಗಳು ಮುಖ್ಯವಾಗಿ ಎರಡು ತರದವಿರುತ್ತವೆ: ಪ್ರಾಕೃತಿಕನಕಾಶಗಳು, ರಾಜಕೀಯನಕಾಶಗಳು. ಸಾಮಾನ್ಯವಾಗಿ ಸಾಲೆಯಲ್ಲಿರುವ ನಕಾಶಗಳು, ರಾಜಕೀಯನಕಾಶಗಳಿರುತ್ತವೆ. ಅವುಗಳಲ್ಲಿ ಮನುಷ್ಯನು ರಾಜ್ಯಕಾರಭಾರದ ಸೌಕರ್ಯಕ್ಕೋಸ್ಕರ ಮಾಡಿದ ವಿಭಾಗಗಳು ತೋರಿಸಲ್ಪಟ್ಟಿರುವವು. ಪ್ರಾಕೃತಿಕನಕಾಶಗಳಲ್ಲಿ ಭೂಮಿಯ ಪೃಷ್ಠಭಾಗದ ರಚನೆ, ಅಂದರೆ ಅಲ್ಲಿ ಹಬ್ಬಿರುವ ಪರ್ವತಗಳು, ಗುಡ್ಡಗಳು, ಬೈಲುಗಳು, ಭೂಮಿಯ ಪರೀಕ್ಷಗಳು. ನದಿಗಳು, ಸರೋವರಗಳು. ಅರಣ್ಯಗಳು ಇವೇ ಮೊದಲಾದವುಗಳ ಉಲ್ಲೇಖವಿರುತ್ತದೆ. ಮನುಷ್ಯನು ಯಾವದೊಂದು ಪ್ರದೇಶದಲ್ಲಿ ಎಷ್ಟು ವಿಭಾಗಗಳನ್ನು ಮಾಡಿಕೊಂಡಿರುವನೆಂಬದನ್ನು ಅರಿಯುವದಕ್ಕಿಂತ, ಸೃಷ್ಟಿಯು ಅಂದರೆ, ಪರ್ವತಗಳು, ಕೆರೆಹಳ್ಳಕೊಳ್ಳಗಳು, ಉಷ್ಣತೆ, ಹವೆ, ಮಳೆ, ಭೂಮಿಯ ಗುಣ ಇವೆಲ್ಲವುಗಳೂ ಆ ದೇಶದ ಜನರಿಗೆ ಯಾವ

ಅನುಕೂಲತೆಗಳನ್ನೆಂಟು ಮಾಡಿರುವವೆಂಬದನ್ನೂ, ಅಲ್ಲಿರುವ ಜನರು ಅವುಗಳನ್ನು ಎಷ್ಟು ಮಟ್ಟಿಗೆ ಉಪಯೋಗಿಸಿಕೊಂಡಿರುವರೆಂಬದನ್ನೂ, ತಿಳಿದುಕೊಳ್ಳುವದು ಹೆಚ್ಚು ಮಹತ್ವವುಳ್ಳದ್ದು. ಒಂದು ಪ್ರದೇಶದ ಪ್ರಾಕೃತಿಕ ಸ್ವರೂಪವನ್ನು ಲಕ್ಷ್ಯಪೂರ್ವಕವಾಗಿ ಅಭ್ಯಾಸಿಸುವದರಿಂದ ಆ ಪ್ರದೇಶದ ಯಾವ ಭಾಗಗಳು ಅಲ್ಲಿಯ ಜನರಿಗೆ ಬಹಳ ಉಪಯೋಗವುಳ್ಳವು? ತಮಗೆ ಬೇಕಾದ ಬೇರೆ ಬೇರೆ ಪೈರುಗಳನ್ನು ಅವರು ಯಾವ ಭಾಗದಲ್ಲಿ ಬೆಳಿಸಿಕೊಳ್ಳಬಹುದು? ಯಾವ ಭಾಗದಲ್ಲಿ ನದಿಗಳಿಂದ ಕಾಲುವೆಗಳ ಮಾರ್ಗವಾಗಿ ನೀರನ್ನು ತಂದು ಹೊಲಗಳಿಗೆ ಹಾಯಿಸಿಕೊಳ್ಳಬಹುದು? ಯಾವ ಭಾಗಗಳಲ್ಲಿ ದೊಡ್ಡ ದೊಡ್ಡ ಪಟ್ಟಣಗಳುಂಟಾಗಲಿಕ್ಕೆ ಅನುಕೂಲತೆಗಳಿರುವವು? ಇವೇ ಮೊದಲಾದ ಪ್ರಶ್ನಗಳಿಗೆ ಉತ್ತರವು ದೊರೆಯುವದು.

ಆದ್ದರಿಂದ ಭೂಗೋಲದಲ್ಲಿ, ಮೊದಲು, ನಾವು ಅಭ್ಯಾಸಿಸಬೇಕಾದ ಪ್ರದೇಶದ ಪ್ರಾಕೃತಿಕಸ್ವರೂಪವು ಹುಡುಗರ ಕಣ್ಣು ಮುಂದೆ ಕಟ್ಟಿದಂತಿರುವದು ಅವಶ್ಯವಾದದ್ದು. ಇದಕ್ಕೆ ಪ್ರಾಕೃತಿಕನಕಾಶಗಳನ್ನು ಮೇಲಿಂದ ಮೇಲೆ ನೋಡುವದೇ ಮೇಲಾದ ಉಪಾಯವು. ಭೂಗೋಲದ ಪಾಠವು ನಡೆದಾಗ ಮಾತ್ರ ಎಂದಾದರೊಮ್ಮೆ ಈ ತರದ ನಕಾಶಗಳನ್ನು ನೋಡಿದರೆ ತೀರದು. ತಾಲೂಕಿನ, ಜಿಲ್ಹೆಯ, ಹಾಗೂ ಪ್ರಾಂತದ ಪ್ರಾಕೃತಿಕನಕಾಶಗಳನ್ನು ಎಲ್ಲ ಹುಡುಗರೂ ಸುಲಭವಾಗಿ ನೋಡಿಕೊಳ್ಳುವದಕ್ಕೆ ಅನುಕೂಲವಾದ ಸ್ಥಳದಲ್ಲಿ ತೂಗಹಾಕಿರಬೇಕು. ಪ್ರತಿದಿವಸ ಹುಡುಗರು ಒಂದೆರಡು ಸಾರೆ ಅವುಗಳನ್ನು ತುಸು ಹೊತ್ತು ನಿರೀಕ್ಷಿಸಿ ನೋಡಿದರೆ, ಸ್ವಲ್ಪ ದಿವಸಗಳಲ್ಲಿಯೇ ಆ ಪ್ರದೇಶಗಳ ಸ್ವರೂಪವು ಅವರ ಮನಸಿನಲ್ಲಿ ಬಿಂಬಿಸುವದು. ಇದರಿಂದ ಅವರ ಮುಂದಿನ ಅಭ್ಯಾಸಕ್ಕೆ ಒಳ್ಳೇ ಸಹಾಯವಾಗುವದು.

ನಕಾಶಗಳನ್ನು ಮೇಲಿಂದ ಮೇಲೆ ತೆಗಿಸುವ ರೂಢಿಯನ್ನು ಇಟ್ಟು ಭೂಗೋಲವನ್ನು ಅಭ್ಯಾಸಿಸುವದಂತೂ ಇದಕ್ಕೂ ಮೇಲ್ತರದ ಉಪಾಯವು. ಮೊದಲು ಮೊದಲು ಹುಡುಗರು ನಕಲು ಮಾಡಿ ನಕಾಶಗಳನ್ನು ತೆಗೆಯಬಹುದು. ತರುವಾಯ ಅವರಿಗೆ ನೆನಪಿನಿಂದಲೇ ಇವುಗಳನ್ನು ರಚಿಸಲಿಕ್ಕೆ ಬರತಕ್ಕದ್ದು. ಭೂಗೋಲಪಾಠವು ಇರುವ ದಿವಸ ಬೇರೆ ಬೇರೆ ಬಾಹ್ಯರೇಖಾನಕಾಶಗಳನ್ನು ಹುಡುಗರ ಕೈಯಲ್ಲಿ ಕೊಡಬಹುದು; ಇಲ್ಲವೆ, ಅವರಿಗೇ ತೆಗೆದುಕೊಂಡು ಬರಲಿಕ್ಕೆ ಹೇಳಬಹುದು. ಮಾಸ್ತರರು

ಪುಸ್ತಕವನ್ನು ಉಪಯೋಗಿಸದೆ ಹುಡುಗರಿಗೆ ಪ್ರಶ್ನೆಗಳನ್ನು ಕೇಳಬೇಕು. ಹುಡುಗರು ದೊಡ್ಡ ನಕಾಶಗಳನ್ನು ನೋಡಿ, ಇವುಗಳಿಗೆ ಉತ್ತರಗಳನ್ನು ಹೇಳಬೇಕು. ಈ ಉತ್ತರಗಳು ಸರಿಯಿದ್ದರೆ, ಅವುಗಳನ್ನು ಸ್ವೀಕರಿಸಬೇಕು. ಹಾಗೂ ಪಾಠವು ಸಾಗಿದಂತೆ ಮಾಸ್ತರನು ಕರೇಹಲಿಗೆಯ ಮೇಲೆ ತಾನು ತೆಗೆದ ಬಾಹ್ಯರೇಷೆಯ ನಕಾಶದಲ್ಲಿ ಇವುಗಳನ್ನು ತೋರಿಸಿ, ಹುಡುಗರಲ್ಲಿದ್ದ ಬಾಹ್ಯರೇಖಾನಕಾಶಗಳಲ್ಲಿ ತುಂಬಲಿಕ್ಕೆ ಅವರಿಗೆ ಹೇಳಬೇಕು.

ಆದರೆ ಯಾವದೊಂದು ಪ್ರದೇಶದ ಭೂಮಿಯ ಸ್ವರೂಪವನ್ನು ಮನದಟ್ಟಾಗುವಂತೆ ಅಭ್ಯಾಸಿಸಬೇಕಾದರೆ, ಆ ಪ್ರದೇಶದ ಮಾಡೆಲವನ್ನು ಅಂದರೆ ಮಾದರಿಯನ್ನು ಮಾಡುವದು ಎಲ್ಲಕ್ಕೂ ಮೇಲಾದ ಉಪಾಯವು. ಇವುಗಳನ್ನು ಮಾಡುವಾಗ ಹುಡುಗರ ಕಣ್ಣುಗಳೂ ಕೈಗಳೂ ಕೂಡಿಯೇ ಆ ಕೆಲಸದಲ್ಲಿ ತೊಡಗುವದರಿಂದ ಈ ಸಮಯದಲ್ಲುಂಟಾದ ಜ್ಞಾನವು ಸುಲಭವಾಗಿ ಹಾರಿ ಹೋಗುವದಿಲ್ಲ. ಅದ್ದರಿಂದ ಹುಡುಗರ ಕಡೆಯಿಂದ ಮೇಲಿಂದ ಮೇಲೆ ಈ ತರದ ಮಾಡೆಲಗಳನ್ನು ಮಾಡಿಸುವದು ಅತ್ಯುಪಯುಕ್ತವಾದದ್ದು.

ಭೂಗೋಲದಲ್ಲಿ ಯಾವ ಸಂಗತಿಗಳ ಜ್ಞಾನವು ಮಹತ್ವವುಳ್ಳದ್ದು! ಹುಡುಗರಿಗೆ ಜಿಲ್ಹೆಯ ಭೂಗೋಲವನ್ನು ಹೇಳಲಾಂಭಿಸಿದ ಕೂಡಲೆ ಯಾವ ಸಂಗತಿಗಳನ್ನು ಅವರಿಗೆ ಹೇಳಬೇಕು! ಯಾವವನ್ನು ಹೇಳುವ ಕಾರಣವಿಲ್ಲ! ಎಂಬದನ್ನು ಶಿಕ್ಷಕನು ನಿರ್ಣಯಿಸಿ ಕೊಳ್ಳುವದು ಅತ್ಯವಶ್ಯವಿರುವದು. ಕೆಲವು ವರ್ಷಗಳ ಹಿಂದೆ ಭೂಗೋಲಜ್ಞಾನವೆಂದರೆ, ಪರ್ವತ, ಹೊಳೆ, ಹಳ್ಳ, ಕೆರೆ, ಸರೋವರ, ಪಟ್ಟಣ ಮೊದಲಾದವುಗಳ ಪಟ್ಟಿಗಳ ಜ್ಞಾನವಾಗಿತ್ತು. ಇವುಗಳನ್ನು ಬಾಯಿಪಾಠಮಾಡಿಟ್ಟರೆ ಭೂಗೋಲವು ಬಂತೆಂದು ಶಿಕ್ಷಕರೂ ಪರೀಕ್ಷಕರೂ ಸಮಾಧಾನ ಹೊಂದುತ್ತಿದ್ದರು. ಈಗಲೂ ಈ ದೋಷವು ಪೂರ್ಣವಾಗಿ ಹೋಗಿಲ್ಲ. ಜನವಸತಿಯೇ ಇಲ್ಲದಿದ್ದರೆ, ಪಟ್ಟಣಗಳಾಗಲಿ, ಪರ್ವತಗಳಾಗಲಿ, ಹೊಳೆಗಳಾಗಲಿ, ಬೆಳೆ ಬರುವ ಭೂಮಿಗಳಾಗಲಿ ಎಲ್ಲಿದ್ದರೇನು? ಒಂದು ಪ್ರದೇಶದಲ್ಲಿರುವ ಜನರಿಗೆ ಆ ಪ್ರದೇಶವು ಎಷ್ಟು ಉಪಯುಕ್ತವಾದದ್ದೆಂಬದನ್ನು ಸಕಾರಣವಾಗಿ ವಿವರಿಸುವದೇ ನಿಜವಾದ ಭೂಗೋಲವಾಗಿರುತ್ತದೆ. ಆದ್ದರಿಂದ ಪಟ್ಟಣಗಳ ಇಲ್ಲವೆ ಪರ್ವತಗಳ ಹೆಸರುಗಳನ್ನು ಬಾಯಿಪಾಠ ಮಾಡಿಸುವದರಿಂದ ಏನೂ ಲಾಭವಾಗುವದಿಲ್ಲ. ಭೂಗೋಲದಲ್ಲಿ ಅನೇಕ ಪ್ರಶ್ನೆಗಳಿಗೆ ಉತ್ತರ

ಕೊಡಲ್ಪಟ್ಟಿರುತ್ತದೆ. ಉದಾಹರಣಾರ್ಥವಾಗಿ, ಧಾರವಾಡ ಜಿಲ್ಲೆಯ ಭೂಗೋಲದಲ್ಲಿ ಈ ಜಿಲ್ಲೆಯ ಜನರು ಮುಖ್ಯವಾಗಿ ಹೊಲದ ಕೆಲಸವನ್ನೇ ಯಾಕೆ ಮಾಡುತ್ತಾರೆ? ಒಂದು ಭಾಗದಲ್ಲಿ ಅಕ್ಕಿಯನ್ನೂ ಮತ್ತೊಂದರಲ್ಲಿ ಹತ್ತಿ-ಗೋದಿಗಳನ್ನೂ ಹೆಚ್ಚಾಗಿ ಯಾಕೆ ಬೆಳಸುತ್ತಾರೆ? ಭೂಮಿ-ಹವೆ-ಮಳೆಗಳು, ಇದಕ್ಕೆ ಹ್ಯಾಗೆ ಅನುಕೂಲತೆಯನ್ನುಂಟು ಮಾಡಿವೆ? ಕೆಲವು ಭಾಗದ ಭೂಮಿಗಳು ಬೆಳೆಯುಳ್ಳವೂ, ಕೆಲವು ಭೂಮಿಗಳು ಬೆಳೆ ಬಾರದಂಥವೂ ಇರುವ ಕಾರಣವೇನು? ಕೆಲವು ಭಾಗಗಳಲ್ಲಿ ಹೆಚ್ಚು ಜನಸಂಖ್ಯೆಯೂ ಕೆಲವೆಡೆಯಲ್ಲಿ ಕಡಿಮೆ ಜನರೂ ಇರುವ ಕಾರಣವೇನು! ಕೆಲವು ಪಟ್ಟಣಗಳು ಮಾತ್ರ ವಿಶೇಷವಾಗಿ ವೃದ್ಧಿ ಹೊಂದಲು ಕಾರಣಗಳೇನು? ಈ ಪ್ರದೇಶದ ಭೂಗೋಲವನ್ನು ಯೋಗ್ಯವಾಗಿ ಅಭ್ಯಾಸಿಸಿದರೆ, ಇಂಥ ಕೆಲವು ಉಪಯುಕ್ತವಾದ ಪ್ರಶ್ನೆಗಳಿಗೆ ಸಮರ್ಪಕವಾದ ಉತ್ತರಗಳನ್ನು ಕೊಡಬಹುದು. ಮುಂದೆ ಬೇರೆ ದೇಶಗಳ ಜನರ ಬಗ್ಗೆ ಓದಿದರೆ, ಅವರು ಬೇರೆ ರೀತಿಯಿಂದ ಯಾಕೆ ಉಪಜೀವಿಸುವರೆಂಬುದೂ, ನಮಗೂ ಅವರಿಗೂ ಇಷ್ಟು ವ್ಯತ್ಯಾಸಗಳಾಗಲಿಕ್ಕೆ ಯಾವ ಕಾರಣಗಳುಂಟೆಂಬುದೂ ನಮಗೆ ಗೊತ್ತಾಗುವದು. ಆದ್ದರಿಂದ ಹುರುಳಿಲ್ಲದ ಸಂಗತಿಗಳನ್ನು ಹುಡುಗರಿಗೆ ಪಾಠಮಾಡಹಚ್ಚಿ ಅವರ ಜಿಜ್ಞಾಸೆಯನ್ನು ಅಣಗಿಸದೆ, ಉಪಯುಕ್ತವಾದಂಥ ಸಂಗತಿಗಳನ್ನು ಮಾತ್ರ ಅವರಿಗೆ ಮನೋಹರವಾಗುವಂತೆ ಹೇಳುವದು ನಮ್ಮ ಕರ್ತವ್ಯವಿರುತ್ತದೆ. ಅಪ್ರಯೋಜಕ ಸಂಗತಿಗಳ ಜ್ಞಾನವನ್ನು ಮಾಡಿಕೊಡುವದು ನಮ್ಮ ಉದ್ದೇಶವಿರುವದಿಲ್ಲ; ಹುಡುಗರು ವಿಚಾರಮಾಡಿ ಕೆಲವು ಸ್ಥೂಲ ಸಂಗತಿಗಳ ಕಾರ್ಯಕಾರಣಭಾವವನ್ನು ಹುಡುಕಿತೆಗೆಯುವಂತೆ ಮಾಡುವದು ನಮ್ಮ ಮುಖ್ಯ ಉದ್ದೇಶವಿರುವದು. ಭೂಗೋಲ ಕಲಿಸುವ ಉದ್ದೇಶದ ಬಗ್ಗೆ ತಪ್ಪಾದ ಕಲ್ಪನೆಯು ನಮ್ಮಲ್ಲಿ ಬಹು ದಿವಸದಿಂದ ನೆಲೆಗೊಂಡಿರುವದರಿಂದ, ಉಪಯುಕ್ತ ಜ್ಞಾನವನ್ನು ಮಾತ್ರ ಹುಡುಗರಿಗೆ ಮಾಡಿಕೊಡಬೇಕೆಂಬುದನ್ನು ಸದ್ಯದ ಶಿಕ್ಷಕರು ಲಕ್ಷ್ಯದಲ್ಲಿಡಬೇಕು. ಕೇವಲ ಶಾಬ್ದಿಕಜ್ಞಾನವೇ ನಿಜವಾದ ಜ್ಞಾನವೆಂದು ನಾವು ಬಹಳ ವರ್ಷಗಳವರೆಗೆ ನಂಬಿರುವದರಿಂದ, ನಮ್ಮ ಹುಡುಗರಿಗೆ ಯಥಾರ್ಥಜ್ಞಾನವಾಗುವ ಬಗ್ಗೆ ನಾವು ಎಚ್ಚರದಿಂದಿರಬೇಕು. ಈ ನಿಜವಾದ ಜ್ಞಾನಕ್ಕೆ ಪ್ರಾಕೃತಿಕನಕಾಶಗಳೂ, ನಮೂನೆಗಳೂ, ಚಿತ್ರಗಳೂ, ಭಾವ

ಚಿತ್ರಗಳೂ ಶಿಕ್ಷಕನ ಪ್ರಶ್ನಕ್ರಮವೂ, ವರ್ಣನಾಚಾತುರ್ಯವೂ ಸಾಧನಗಳಾಗಿವೆ. ಸಾಲೆಯಲ್ಲಿ ಕಲಿಸುವ ಎಲ್ಲ ವಿಷಯಗಳಲ್ಲಿ ಇದೇ ಬಹಳ ದುರ್ಲಕ್ಷಿಸಲ್ಪಡುವದರಿಂದ ಹುಡುಗರಿಗೆ ಬೇಸರವಾಗದೆ ಮನೋರಂಜನವಾಗುವಂತೆ ವಿಷಯವನ್ನು ಹೇಳತಕ್ಕದ್ದು.

ಯಾವ ಸಂಗತಿಗಳನ್ನು ಹೇಳಬೇಕು? ಯಾವ ಪದ್ಧತಿಯಿಂದ ಹೇಳಬೇಕು? ಎಂಬ ಪ್ರಶ್ನೆಗಳ ಬಗ್ಗೆ ಮೇಲೆ ಸಂಕ್ಷಿಪ್ತವಾಗಿ ಬರೆದಿದ್ದೇವೆ. ಇನ್ನು ಈ ವಿಷಯದಲ್ಲಿ ಅನುಸರಿಸತಕ್ಕ ಸಾಮ್ಯವೈಷಮ್ಯಪದ್ಧತಿಯನ್ನು ಕುರಿತು ಒಂದೆರಡು ಮಾತುಗಳನ್ನು ಬರೆಯುವೆವು. ವಿದ್ಯಾರ್ಥಿಗಳಿಗೆ ಗೊತ್ತಿದ್ದದ್ದಕ್ಕೆ ಗೊತ್ತಿಲ್ಲದ್ದನ್ನು ಮಿಶ್ರಮಾಡಿದರೆ ಮಾತ್ರ ಯಥಾರ್ಥವಾದ ಹೊಸ ಜ್ಞಾನವಾಗುವದು. ಶಾಬ್ದಿಕಜ್ಞಾನವು ಈ ನಿಯಮವನ್ನನುಸರಿಸುವದಿಲ್ಲ. ಆದ್ದರಿಂದ ಶಾಬ್ದಿಕಜ್ಞಾನದಿಂದ ಏನೂ ಪ್ರಯೋಜನವಾಗದು. ಧಾರವಾಡ ಪಟ್ಟಣವೆಂದರೆ, ಅನೇಕ ಹುಡುಗರು ನಕಾಶದ ಮೇಲಿರುವ ಪೂಜಿಯೆಂದು ತಿಳಿಯುವರು. ಇದು ಶಾಬ್ದಿಕಜ್ಞಾನವು. ಆದರೆ, ಧಾರವಾಡ ಪಟ್ಟಣವೆಂದ ಕೂಡಲೆ ಈ ಪಟ್ಟಣದ ಹಲವು ಭಾಗಗಳು, ಅಲ್ಲಿಯ ಜನರ ಉದ್ಯೋಗಗಳು. ಅಲ್ಲಿಯ ಜನರಿಗಿರುವ ಅನುಕೂಲ-ಪ್ರತಿಕೂಲಗಳು ಇತ್ಯಾದಿ ಸಂಗತಿಗಳು ಅವರ ಮನಸಿನಲ್ಲಿ ಬಂದರೆ, ಅವರಿಗೆ ಈ ಪಟ್ಟಣದ ಬಗ್ಗೆ ಯಥಾರ್ಥಜ್ಞಾನವಾದಂತಾಗುವದು. ಭೂಗೋಲದಲ್ಲಿ ಬಹುಶಃ ಎಲ್ಲ ಸಂಗತಿಗಳನ್ನು ಕಲ್ಪನಾಶಕ್ತಿಯಿಂದಲೇ ತಿಳಿದುಕೊಳ್ಳಬೇಕಾಗುವದರಿಂದ ಎಲ್ಲ ಹೊಸ ಸಂಗತಿಗಳಿಗೂ ಹುಡುಗರಿಗೆ ಗೊತ್ತಿದ್ದ ಸಂಗತಿಗೆ ಸಾಮ್ಯವನ್ನಾಗಲಿ, ಕೆಲವೆಡೆಯಲ್ಲಿ ವೈಷಮ್ಯವನ್ನಾಗಲಿ ತೋರಿಸಿಕೊಟ್ಟು ಹೊಸ ಜ್ಞಾನವನ್ನು ಮಾಡಿಕೊಡುವದು ಅವಶ್ಯವಾದದ್ದು. ಈ ಪದ್ಧತಿಯನ್ನು ಅನುಸರಿಸುವದರಿಂದ ಹುಡುಗರ ಸ್ಮರಣ ಶಕ್ತಿಯೂ ಬಲಪಡುವದು. ಹುಡುಗರಿಂದಲೇ ಸಾಮ್ಯ ವೈಷಮ್ಯಗಳನ್ನು ಹೊರಡಿಸುವದಾದರೆ, ಅವರ ಬುದ್ಧಿಗೆ ತೋರುವಂಥ ಸಾಮ್ಯವೈಷಮ್ಯಗಳ ಬಗ್ಗೆಯೇ ಅವರಿಗೆ ಪ್ರಶ್ನ ಮಾಡಬೇಕು.

ಪ್ರಾಕೃತಿಕ ನಕಾಶಗಳನ್ನು ಶಿಕ್ಷಕನು ಸುಲಭವಾಗಿ ತೆಗೆಯ ಬಹುದು. ಇವುಗಳಲ್ಲಿ ಪ್ರದೇಶದ ಎತ್ತರವನ್ನು ಬೇರೆ ಬೇರೆ ಬಣ್ಣಗಳಿಂದ ತೋರಿಸಬೇಕು. ಸಮುದ್ರದ ಪಾತಳಿಯಿಂದ ೬೦೦ ಫೂಟುಗಳ ವರೆಗೆ ಎತ್ತರದಲ್ಲಿರುವ ಭಾಗವನ್ನು ನಸು ಹಸರು ಬಣ್ಣದಿಂದಲೂ, ೬೦೦ ರಿಂದ

೧೨೦೦ರ ವರೆಗೆ ಇದ್ದಂಥ ಭಾಗವನ್ನು ಹಸರು ಬಣ್ಣದಿಂದಲೂ, ೧೨೦೦ರಿಂದ ೨೪೦೦ರ ವರೆಗೆ ಇದ್ದ ಭಾಗವನ್ನು ಹಳದೀ ಬಣ್ಣದಿಂದಲೂ, ಅದಕ್ಕೂ ಹೆಚ್ಚು ಎತ್ತರದಲ್ಲಿರುವ ಭಾಗವನ್ನು, ಅಂದರೆ ಗುಡ್ಡ ಇಲ್ಲವೆ ಪರ್ವತಗಳನ್ನು ಕಪ್ಪು ಬಣ್ಣದಿಂದಲೂ ತೋರಿಸಬಹುದು. ತಾಲೂಕಿನೊಳಗಿನ ಕೆಲವು ಮುಖ್ಯ ಸ್ಥಳಗಳ ಎತ್ತರಗಳನ್ನೂ, ನದಿಗಳ ಗತಿಗಳನ್ನೂ ನೋಡಿಕೊಂಡು ಇಂಥ ನಕಾಶಗಳನ್ನು ಸ್ಥೂಲಮಾನದಿಂದ ಶಿಕ್ಷಕನು ರಚಿಸತಕ್ಕದ್ದು. ಸರ್ವೇ ನಕಾಶಗಳ ಸಹಾಯದಿಂದ ಇಂಥ ನಕಾಶಗಳನ್ನು ರಚಿಸಲಿಕ್ಕೆ ಬಳ್ಳೇ ಅನುಕೂಲವಾಗುತ್ತದೆ. ಶಿಕ್ಷಕನು ತಾನೇ ರಚಿಸುವ ಪ್ರಾಕೃತಿಕ ನಕಾಶಗಳಿಂದ ಮತ್ತೊಂದು ಲಾಭವಾಗುವದು. ಅದೇನಂದರೆ, ತಾನು ಹುಡುಗರಿಗೆ ಹೇಳಬೇಕೆಂದು ಎಣಿಸಿಕೊಂಡ ಸಂಗತಿಗಳನ್ನಷ್ಟೇ ಅವನು ಇವುಗಳಲ್ಲಿ ತೋರಿಸಬಹುದು. ಅಂದರೆ, ಹುಡುಗರು ಅವಶ್ಯವಿಲ್ಲದ ಸಂಗತಿಗಳಿಂದ ನಿಷ್ಕಾರಣವಾಗಿ ಗೊಂದಲದಲ್ಲಿ ಬೀಳುವದಿಲ್ಲ. ತಾಲೂಕಿನ ಹಾಗೂ ಜಿಲ್ಲೆಯ ಅಚ್ಚು ಹಾಕಿದ ಪ್ರಾಕೃತಿಕ ನಕಾಶಗಳು ಇದ್ದರೆ ಬ[illegible] ಶಾಗುತ್ತಿತ್ತು. ಆದರೆ ಇವು ಇಲ್ಲದೆ ಪಾಠವನ್ನು ನಡಿಸುವದಕ್ಕೆ ಎಂದಿಗೂ ಬಾರದಾದ್ದರಿಂದಲೂ, ಸ್ವಲ್ಪ ಶ್ರಮದೊಡನೆ ಇವುಗಳನ್ನು ಪ್ರತಿಯೊ[illegible] ಶಿಕ್ಷಕನು ತಯಾರಿಸಬಹುದಾದ್ದರಿಂದಲೂ, ಶಿಕ್ಷಕರು ಇವುಗಳನ್ನು ಅವ[illegible]ವಾಗಿ ರಚಿಸಿ ಭೂಗೋಲ ಪಾಠಗಳಲ್ಲಿ ಉಪಯೋಗಿಸಬೇಕು.

ಭೂಗೋಲದಲ್ಲಿ ವಿವರಿಸುವ ಪ್ರತಿಯೊಂದು ಸಂಗತಿಯನ್ನು ಸ್ಪಷ್ಟೀಕರಿಸಿ ನಕಾಶಗಳನ್ನು ತೆಗೆಯಬಹುದು. ಇವುಗಳ ಸಹಾಯದಿಂದ ಪಾ[illegible]ವನ್ನು ಸುಲಭವಾಗಿ ಹೇಳಬಹುದು. ಇದರಿಂದ ಹುಡುಗರು ಗೊಂದಲದಲ್ಲಿ ಬೀಳುವ ಅಂಜಿಕೆಯು ದೂರಾಗುವದು. ಆದ್ದರಿಂದ ಪ್ರತಿಯೊಂದು ಕ್ಲಾಸಿನಲ್ಲಿ ಆ ಕ್ಲಾಸಿಗೆ ಹೇಳಬೇಕಾದ ಭೂಗೋಲದ ಭಾಗದ ಹಲ[illegible] ಸಂಗತಿಗಳನ್ನು ಪ್ರತ್ಯೇಕವಾಗಿ ಸ್ಪಷ್ಟೀಕರಿಸುವ ನಕಾಶಗಳನ್ನು ಶಿಕ್ಷಕನು ತಯಾರಿಸಿ ತೂಗಹಾಕಿಡತಕ್ಕದ್ದು. ಉದಾಹರಣಾರ್ಥವಾಗಿ ಧಾರವಾ[illegible] ಜಿಲ್ಲೆಯ ಭೂಗೋಲವನ್ನು ಕಲಿಸುವದಿರುವದೆಂದು ಕಲ್ಪಿಸುವ. ಇದಕ್ಕೆ ಕೆಳಗೆ ಕಾಣಿಸಿದ ನಕಾಶಗಳು ಕ್ಲಾಸಿನಲ್ಲಿ ಅವಶ್ಯವಾಗಿ ಇರಬೇಕು (೧)ಪ್ರಾಕೃತಿಕ ಸ್ವರೂಪ ಅಂದರೆ ಭೂಮಿಯ ಏರಿಳತಗಳು, ನದಿಗಳು. (೨)ಪೇಟೆಗಳು, ಮುಖ್ಯ ಪಟ್ಟಣಗಳು. (೩) ಹುಟ್ಟುವಳಿ. (೪) ಮಾರ್ಗಗಳು

(೫) ವ್ಯಾಪಾರ. (೬) ಜನಸಂಖ್ಯೆ. (೭) ರಾಜಕೀಯ ವಿಭಾಗಗಳು. ಇವು ಗಳನ್ನು ಪ್ರತ್ಯೇಕವಾಗಿ ತೋರಿಸುವ ನಕಾಶಗಳಿರತಕ್ಕದ್ದು.

೨ನೇ ಪ್ರಕರಣ.

ಮೇರೆಗಳು, ಆಕಾರ, ಕ್ಷೇತ್ರ, ಸ್ವಾಭಾವಿಕರಚನೆ.

ಯಾವದಾದರೊಂದು ಪ್ರದೇಶದ ಭೂಗೋಲವನ್ನು ಅಭ್ಯಾಸಿಸಲಿಕ್ಕೆ ಆರಂಭಿಸಿದ ಕೂಡಲೆ ಅದರ ಮೇರೆಗಳು ಯಾವವು ಎಂಬ ಪ್ರಶ್ನವು ಮೊದಲು ಸೂಚಿತವಾಗುತ್ತದೆ. ಮೇರೆಗಳು ಎರಡು ತರದವಿರುತ್ತವೆ:— ಮನುಷ್ಯನು ತನ್ನ ಅನುಕೂಲಕ್ಕೋಸ್ಕರ ಮಾಡಿಕೊಂಡ ಮೇರೆಗಳು ಮೊದಲನೇ ಪ್ರಕಾರದವು. ಇವುಗಳಿಗೆ ರಾಜಕೀಯ ಮೇರೆಗಳೆಂದನ್ನುವ ರುಂಟು. ಎರಡನೆಯವು ಪ್ರಾಕೃತಿಕ ಮೇರೆಗಳು; ಅಂದರೆ, ಹೊಳೆ, ಗುಡ್ಡದ ಸಾಲು, ಪರ್ವತ, ಸಮುದ್ರ ಇವುಗಳಿಂದುಂಟಾದ ಸ್ವಭಾವಸಿದ್ಧ ವಾದ ಮೇರೆಗಳು. ಊರು ಅಥವಾ ತಾಲೂಕಿನಂಥ ಸಣ್ಣ ಪ್ರದೇಶಕ್ಕೆ ಪ್ರಾಕೃತಿಕ ಮೇರೆಗಳು ಬಹುಶಃ ಇರುವದಿಲ್ಲ. ಕೆಲವು ಜಿಲ್ಹೆಗಳಿಗೂ ಪ್ರಾಕೃತಿಕ ಮೇರೆಗಳು ಇರುವದೇ ಇಲ್ಲ. ಇನ್ನು ಇವೆರಡೂ ತರದ ಮೇರೆಗಳನ್ನು ನೆನಪಿನಲ್ಲಿಟ್ಟುಕೊಂಡು ಧಾರವಾಡ ಜಿಲ್ಹೆಯ ಮೇರೆಗಳನ್ನು ಅಭ್ಯಾಸಿಸುವ:—

ಈ ಜಿಲ್ಹೆಯ ವಾಯುವ್ಯದ ಭಾಗಕ್ಕೆ ಅಳಣಾವರದ ಹತ್ತರ ಬೆಳಗಾವಿ ಜಿಲ್ಹೆಯು ಆರಂಭವಾಗುತ್ತದೆ. ಮುಂದೆ ಮಲಪ್ರಭಾ ನದಿಯು ಹತ್ತುವವರೆಗೆ ಆ ಜಿಲ್ಹೆಯೇ ಇದರ ಉತ್ತರಮೇರೆಯಾಗಿರುವದು. ಆ ಮೇಲೆ ಹಿರೇಹಾಳದ ವರೆಗೆ ಮಲಪ್ರಭಾ ನದಿಯೂ, ವಿಜಾಪೂರ ಜಿಲ್ಹೆಯೂ ಇದರ ಉತ್ತರಮೇರೆಗಳಾಗಿವೆ. ಮುಂದೆ ಈಶಾನ್ಯ, ಹಾಗು ಪೂರ್ವ ದಿಕ್ಕುಗಳ ಕಡೆಗೆ ಹೆಸರೂರಿನ ವರೆಗೆ, ಅಂದರೆ, ತುಂಗಭದ್ರಾ ನದಿಯು ಹತ್ತುವ ವರೆಗೆ ನಿಜಾಮನ ರಾಜ್ಯವು ಇದರ ಸುತ್ತಲು ಹಬ್ಬಿರುವದು. ಹೆಸರೂರಿನಿಂದ ಹಿರೇಬಿದರಿಯ ವರೆಗೆ ತುಂಗಭದ್ರಾ ನದಿಯೇ ಇದರ ಮೇರೆಯಾಗಿರುವದು. ತುಂಗಭದ್ರಾ ನದಿಯ ಆಚೆಯ ದಂಡೆಗೆ ಮದ್ರಾಸ ಇಲಾಖೆ ಇರುವದು. ಹಿರೇಬಿದರಿಯಿಂದ ಪಶ್ಚಿಮದಲ್ಲಿ ಕಾನಡಾ ಜಿಲ್ಹೆ ಹತ್ತುವ ವರೆಗೆ ಮೈಸೂರಪ್ರಾಂತವು ಇದರ ದಕ್ಷಿಣಮೇರೆಯಾಗಿರುವದು.

ಪಶ್ಚಿಮದಲ್ಲಿ ಇದಕ್ಕೆ ಕಾನಡಾ ಜಿಲ್ಲೆಯು ಹತ್ತಿರುವದು. ನಿಜಾಮನ ರಾಜ್ಯವೂ, ಮೈಸೂರ ಪ್ರಾಂತವೂ, ಇಂಗ್ಲಿಷರ ವಶದಲ್ಲಿಲ್ಲ; ಇವುಗಳನ್ನು ಈ ದೇಶದ ಅರಸರು ಆಳುತ್ತಾರೆ. ಉಳಿದ ಭಾಗವೆಲ್ಲ ಇಂಗ್ಲಿಷ ಸರಕಾರಕ್ಕೆ ಸೇರಿರುವದು.

ಆಕಾರ ಹಾಗೂ ಕ್ಷೇತ್ರ:—ಧಾರವಾಡ ಜಿಲ್ಲೆಯು ಸ್ಥೂಲಮಾನದಿಂದ ತ್ರಿಕೋಣಾಕೃತಿಯುಳ್ಳದ್ದೆಂದೆನ್ನಬಹುದು. ಇದರ ಕ್ಷೇತ್ರವು ೪೬೦೨ ಚೌ. ಮೈಲು; ಧಾರವಾಡ ತಾಲೂಕಿನ ಸುಮಾರು ೧೧ ಪಟ್ಟು ಇರುವದು. ಕೊಣ್ಣೂರಿನಿಂದ ಹೆಗ್ಗೇರಿಯ ವರೆಗೆ ದಕ್ಷಿಣೋತ್ತರ ಇದರ ಎಲ್ಲಕ್ಕೂ ಹೆಚ್ಚಿನ ಉದ್ದಳತೆಯು ೧೧೬ ಮೈಲು. ಪೂರ್ವ ಪಶ್ಚಿಮದ ಎಲ್ಲಕ್ಕೂ ಹೆಚ್ಚಿನ ಅಗಲವು ಅಳಣಾವರದಿಂದ ಹೆಸರೂರಿನ ವರೆಗೆ ೭೭ ಮೈಲು.

ಸ್ವಾಭಾವಿಕ ಲಕ್ಷಣಗಳು:— ಭೂಗೋಲದಲ್ಲಿ ಯಾವದೊಂದು ಪ್ರದೇಶವನ್ನು ಅಥವಾ ಅದರ ಎತ್ತರವನ್ನು ಫೂಟುಗಳಿಂದ ಹೇಳುವರು. ಒಂದು ಪಟ್ಟಣವು ಅಥವಾ ಪ್ರದೇಶವು ೬೦೦ ಫೂಟು ಎತ್ತರದಲ್ಲಿರುವದೆಂದರೆ, ಅದು ಸಮುದ್ರದ ಪಾತಳಿಯಿಂದ ಅಷ್ಟು ಎತ್ತರದ ಮೇಲಿರುವದೆಂದು ತಿಳಿಯಬೇಕು. ಉದಾಹರಣಾರ್ಥವಾಗಿ ಒಂದು ಗುಡ್ಡವನ್ನು ತೆಗೆದುಕೊಳ್ಳುವ. ಮೈಲಾರಲಿಂಗನ ಗುಡ್ಡವು ಅದರ ಅಡಿಯಿಂದ ಸುಮಾರು ೧೫೦–೨೦೦ ಫೂಟು ಎತ್ತರದಲ್ಲಿರಬಹುದು. ಆದರೆ ಭೂಗೋಲದಲ್ಲಿ ಈ ಗುಡ್ಡವು ಸುಮಾರು ೨೬೦೦ ಫೂಟು ಎತ್ತರದಲ್ಲಿರುವದೆಂದು ಹೇಳುವ ವಾಡಿಕೆಯುಂಟು. ಯಾಕೆಂದರೆ, ಧಾರವಾಡ ಪಟ್ಟಣವೇ ಸಮುದ್ರ ಪಾತಳಿಯಿಂದ ಸುಮಾರು ೨೫೦೦ ಫೂಟು ಎತ್ತರದಲ್ಲಿರುವದು. ಆದ್ದರಿಂದ ಯಾವದೊಂದು ಪ್ರದೇಶದ ಎತ್ತರವನ್ನು ಸಂಖ್ಯೆಯಿಂದ ಹೇಳುವಾಗ ಅದರ ಅರ್ಥವು ನಮಗೆ ಗೊತ್ತಿರತಕ್ಕದ್ದು.

ಇದೇ ಮೇರೆಗೆ ಭೂಗೋಲದಲ್ಲಿ ಸಮುದ್ರದ ಪಾತಳಿಯಿಂದ ೬೦೦ ಫೂಟು ಎತ್ತರದ ವರೆಗೆ ಹಬ್ಬಿದ್ದ ಪ್ರದೇಶಕ್ಕೆ ಬೈಲು ಭೂಮಿಯೆನ್ನುವದುಂಟು. ೬೦೦ ರಿಂದ ೧೨೦೦ ಫೂಟುಗಳ ವರೆಗೆ ಎತ್ತರವಾದ ವಿಸ್ತಾರವಾದ ಭೂಭಾಗಕ್ಕೆ ತಪ್ಪಲು ಭೂಮಿಯೆನ್ನುವರು. ಇದಕ್ಕೆ ತುಸು, ಎತ್ತರವಾದ ಬೈಲು ಭೂಮಿಯೆಂದೂ ಅನ್ನುವದುಂಟು. ೧೨೦೦ ರಿಂದ ೩೦೦೦ ದ ವರೆಗೆ ಎತ್ತರವಿರುವ ಹದವಾದ ಪ್ರದೇಶಕ್ಕೆ ತಪ್ಪಲುಭೂಮಿಯೆನ್ನಬಹುದು. ಇದ

ಷ್ಟು ಎತ್ತರವಾಗಿದ್ದ ವಿಸ್ತೀರ್ಣವಾದ ಪ್ರದೇಶಕ್ಕೆ ಸಹ ಎತ್ತರವಾದ ತಪ್ಪಲುಭೂಮಿಯೆಂದೆನ್ನುವರು. ಇನ್ನು, ಸುತ್ತಲಿನ ಭೂಮಿಯು ವಿಶೇಷ ಎತ್ತರವಿಲ್ಲದೆ ಅದರಲ್ಲಿಯ ಕೆಲವು ಭಾಗಗಳು ಮಾತ್ರ ಎತ್ತರವಾಗಿದ್ದರೆ ಅವುಗಳಿಗೆ ಗುಡ್ಡ, ಬೆಟ್ಟ ಎಂದು ಅನ್ನುವರು. ಇಂಥ ಎತ್ತರವಾದ ಸ್ಥಳಗಳು ಒಂದೇ ಸವನೆ ಹಬ್ಬುತ್ತ ನಡೆದರೆ ಗುಡ್ಡದ ಸಾಲು ಅನ್ನುವರು. ವಿಶೇಷ ಎತ್ತರವಾದ ಪ್ರದೇಶಕ್ಕೆ ಪರ್ವತವೆಂದೆನ್ನುವರು. ಆದರೆ, ಒಂದು ವಿಸ್ತೀರ್ಣವಾದ ತಪ್ಪಲು ಭೂಮಿಯ ಮೇಲೆ ಬೈಲುಗಳೂ, ಗುಡ್ಡಗಳೂ ಇರಬಹುದೆಂಬುದನ್ನು ಲಕ್ಷ್ಯದಲ್ಲಿಡುವಂತೆ ಅದೆ.

ಇನ್ನು, ಧಾರವಾಡ ಜಿಲ್ಹೆಯ ಪ್ರಾಕೃತಿಕಸ್ವರೂಪವನ್ನು ಅಭ್ಯಾಸಿಸಿದರೆ, ಇದು ದಕ್ಷಿಣ ಹಿಂದುಸ್ತಾನದ ಅತಿ ವಿಸ್ತಾರವಾದ ತಪ್ಪಲುಭೂಮಿಯ ಭಾಗವಿರುವದೆಂದು ಗೊತ್ತಾಗಬಹುದು. ಈ ಜಿಲ್ಹೆಯೊಳಗಿನ ಬೇರೆ ಬೇರೆ ಭಾಗಗಳಲ್ಲಿರುವ ಕೆಲವು ಪಟ್ಟಣಗಳ ಎತ್ತರವನ್ನು ನೋಡುವ:— ಪಶ್ಚಿಮದಿಂದ ಆರಂಭಿಸಿದರೆ, ಧಾರವಾಡವು ೨೫೮೦ ಫೂಟಿನ ಮೇಲೆ ಇರುವದು. ತಡಸ ೨೧೪೪ ಫೂಟು, ಹೆಸರೂರು ೧೭೪೦ ಫೂಟು, ಡಂಬಳ ೧೯೨೮ ಫೂಟು, ಗದಗ ೨೧೪೩ ಫೂಟು, ಮಧ್ಯದಲ್ಲಿ ಅಂಣಿಗೇರಿ ೨೦೪೪ ಫೂಟು, ಕುಂದಗೋಳ ೨೧೪೭ ಫೂಟು, ಈ ಪ್ರಕಾರ ಇರುವವು. ಅಂದರೆ, ಈ ಜಿಲ್ಹೆಯ ಸರಾಸರಿ ಎತ್ತರವು ೧೮೦೦ ಫೂಟು ಇರುವದು. ಆದ್ದರಿಂದ ಇದು ತಪ್ಪಲುಭೂಮಿಯಾಗಿದೆ, ಎಂದು ಹೇಳಬಹುದು. ಆದಾಗ್ಯೂ ಈ ಭೂಮಿಯ ಲಕ್ಷಣವು ಎಲ್ಲ ಕಡೆಯಲ್ಲಿ ಒಂದೇ ಪ್ರಕಾರವಿಲ್ಲ. ಸ್ವಾಭಾವಿಕಲಕ್ಷಣಗಳ ದೃಷ್ಟಿಯಿಂದ ಈ ಜಿಲ್ಹೆಯಲ್ಲಿ ಮೂರು ವಿಭಾಗಗಳನ್ನು ಮಾಡಬಹುದು. ಈಶಾನ್ಯದಲ್ಲಿ ನವಲಗುಂದ, ರೋಣ, ಗದಗು ತಾಲೂಕಗಳಲ್ಲಿ ವಿಸ್ತಾರವಾದ ಕರೇಮಣ್ಣಿನ ಬೈಲುಭೂಮಿಯು ಹಬ್ಬಿರುತ್ತದೆ. ಇದು ಈ ಜಿಲ್ಹೆಯಲ್ಲಿ ಬೈಲುಸೀಮೆಯೆಂದು ಹೆಸರಾಗಿರುವದು. ಗದಗು ಪಟ್ಟಣದ ದಕ್ಷಿಣಭಾಗವನ್ನು ಬಿಟ್ಟು ಉಳಿದ ಪ್ರದೇಶದಲ್ಲಿ ಭೂಮಿಯು, ಸವನೆಲವುಳ್ಳದ್ದಾಗಿ ಒಂದೇ ಸವನೆ ಹಬ್ಬಿರುವದು; ಎತ್ತ ನೋಡಿದತ್ತ ಬೈಲೇ ಬೈಲು. ಹೊಗೆಬಂಡಿಯಲ್ಲಿ ಇಲ್ಲವೆ ಬಂಡಿಗಳಲ್ಲಿ ಕುಳಿತು ಪ್ರವಾಸ ಮಾಡುವವನಿಗೆ ಈ ಪ್ರದೇಶವು ತೆರೆಗಳ ಹಾಗೆ ಏರಿಳಿತಗಳುಳ್ಳದ್ದಾಗಿ ತೋರುವದು. ಬೈಲುಸೀಮೆಯ ಭಾಗದ ಕ್ಷೇತ್ರವು ಸರಾಸರಿ ೧೭೦೦

ಮೈಲು (ಚೌರಸ) ಇರುವದು; ಅಂದರೆ, ಧಾರವಾಡ ಜಿಲ್ಹೆಯ ಸುಮಾರು ⅓ ಭಾಗವು ಬೈಲುಸೀಮೆಗೆ ಸೇರಿದಂತಾಯಿತು. ತೇಗೂರಿನಿಂದ ಹರಿಹರ ದವರೆಗೆ ಹೋಗುವ ಪೂಣೆಬೆಂಗಳೂರಿನ ಲೈನದಾರಿಯು ಮಿಕ್ಕ ಪ್ರದೇಶ ವನ್ನು ಎರಡು ಭಾಗಗಳಾಗಿ ಮಾಡುವದು. ಪಶ್ಚಿಮಕ್ಕಿರುವ ಭಾಗದಲ್ಲಿ ಅಲ್ಲಲ್ಲಿ ಗುಡ್ಡದ ಸಾಲುಗಳೂ ಬಿಡಿಗುಡ್ಡಗಳೂ ತಕ್ಕಮಟ್ಟಿಗೆ ಕಣ್ಣಿಗೆ ಬೀಳುವವು. ಈ ಪ್ರದೇಶಕ್ಕೆ ಮಲೆನಾಡು (ಮಲೆ = ಗುಡ್ಡ; ನಾಡು = ದೇಶ) ಎಂದು ಅನ್ನುವದುಂಟು. ದಕ್ಷಿಣದಿಂದುಸ್ತಾನದ ಪ್ರಾಕೃತಿಕನಕಾಶ ವನ್ನು ನೋಡಿದರೆ, ಈ ಭಾಗವು ಸಹ್ಯಾದ್ರಿಘಟ್ಟದ ಅಂಚಿನ ಸೀಮೆ ಯೆಂದು ಕಂಡುಬರುವದು. ಅದ್ದರಿಂದ ಇದಕ್ಕೆ ಮಲ್ಲಾಡದ ಸೆರಗೆಂದು ಅನ್ನಬಹುದು. ಇದಾದರೂ ಕ್ಷೇತ್ರದ ಮಾನದಿಂದ ಬೈಲುಸೀಮೆಯಷ್ಟೇ ಪ್ರದೇಶವಿರುವದು. ಧಾರವಾಡ ಜಿಲ್ಹೆಯಲ್ಲಿ ಕೋಡ, ಹಾನಗಲ್ಲ, ಕಲಘ ಟಗಿ, ಹುಬ್ಬಳ್ಳಿ, ಧಾರವಾಡ ಈ ಐದು ತಾಲೂಕಗಳು ಈ ಭಾಗದಲ್ಲಿ ಸೇರುತ್ತವೆ. ಈ ಭಾಗದಲ್ಲಿ ಸಣ್ಣ ದೊಡ್ಡ ಗುಡ್ಡಗಳು ಬಹುತರ ಎಲ್ಲ ಕಡೆಯಲ್ಲಿ ಇರುವದರಿಂದ ಭೂಮಿಯು ತಗ್ಗುದಿನ್ನೆಯಾಗಿರುವದು. ದಿನ್ನೆ ಗಳಲ್ಲಿ ಗರಸಿನ ನೆಲವೇ ವಿಶೇಷ. ಇಂಥ ನೆಲದ ಮೇಲೆ ಹುಲ್ಲೂ, ಸಣ್ಣ ಕಂಟಿಗಳೂ ಮಾತ್ರ ಬೆಳೆಯುತ್ತವೆ. ಗುಡ್ಡದ ಸಾಲುಗಳ ಮಧ್ಯದಲ್ಲಿಯೂ ಬಿಡಿಗುಡ್ಡಗಳ ಸುತ್ತಲೂ ಇರುವ ತಗ್ಗಿನ ಪ್ರದೇಶಗಳಲ್ಲಿ ಮಾತ್ರ ತಕ್ಕಮ ಟ್ಟಿಗೆ ಕಸವುಳ್ಳಂಥ ಕೆಂಪುಮಣ್ಣಿನ ಭೂಮಿಯು ಅಲ್ಲಲ್ಲಿ ಹಬ್ಬಿರುವದು. ಮಲ್ಲಾಡದಲ್ಲಿ ಈ ಭಾಗಗಳಲ್ಲಿ ಮಾತ್ರ ಒಕ್ಕಲತನವು ನಡೆಯುವದು. ತೀರ ಪಶ್ಚಿಮಕ್ಕೆ ಹೋದಂತೆ ಗುಡ್ಡದ ಸಾಲುಗಳು ಹೆಚ್ಚಾಗುತ್ತವೆ; ಹಾಗು ಅವುಗಳ ಮೇಲೆ ಅಡವಿಗಳು ಹಬ್ಬಿರುತ್ತವೆ. ಮಲ್ಲಾಡದ ಸೆರಗಿಗೂ ಬೈಲುಸೀಮೆಗೂ ಮಧ್ಯದಲ್ಲಿರುವ ಪ್ರದೇಶವನ್ನು ಬೈಲುಸೀಮೆಯೊಳಗೇ ಸೇರಿಸುವ ವಾಡಿಕೆಯುಂಟು. ಆದರೆ ಈ ಭಾಗವು ಇವೆರಡೂ ಪ್ರದೇಶ ಗಳ ಲಕ್ಷಣಗಳಿಂದ ಕೂಡಿರುವದರಿಂದ ಇದಕ್ಕೆ ಗಡಿನಾಡು ಎಂದು ಅನ್ನು ವದು ಹೆಚ್ಚು ಯುಕ್ತವೆನಿಸುತ್ತದೆ. ಇದರ ಕ್ಷೇತ್ರಫಲವು ಸುಮಾರು ೧೨೦೦ ಚೌ. ಮೈಲು ಇರುತ್ತದೆ. ಇದರಲ್ಲಿ ಪಶ್ಚಿಮದ ಕಡೆಗೆ ಕೆಂಪುಮಣ್ಣಿನ ಭೂಮಿಯಿರುವದು. ಪೂರ್ವಕ್ಕೆ ಸಾಗಿದಂತೆ ಬೈಲುಸೀಮೆಯ ಕರೇ ಮಣ್ಣಿನ ಭೂಮಿಯು ದೃಷ್ಟಿಗೆ ಬೀಳುವದು. ಇದಲ್ಲದೆ ಒಂದೇ ಹೊಲ

ದಲ್ಲಿ ಕೆಲವು ಭಾಗ ಕೆಂಪು, ಕೆಲವು ಭಾಗ ಕಪ್ಪು ಇರುವದನ್ನು ಕಾಣು ವದೂ ಅಪರೂಪವಲ್ಲ. ಇಲ್ಲಿ ಬೈಲು ಸೀಮೆಯಂತೆ ಎತ್ತ ನೋಡಿದರೂ ಬೈಲೇ ಬೈಲಾಗಿಲ್ಲ. ಮಲ್ಲಾಡದ ಸೆರಗಿನಂತೆ ಗುಡ್ಡದ ಸಾಲುಗಳೂ ಬೆಟ್ಟ ದಿನ್ನೆಗಳೂ ಅನೇಕವಾಗಿಲ್ಲ. ವಿಸ್ತೀರ್ಣವಾದ ಬೈಲುಪ್ರದೇಶದ ಬೇರೆ ಬೇರೆ ಭಾಗಗಳಲ್ಲಿ ಒಂದಕ್ಕೊಂದು ಅತಿದೂರವಾಗಿ ಬಿಡಿಗುಡ್ಡಗಳು ಒಂಟಿಯಾಗಿ ತಲೆಯೆತ್ತಿಕೊಂಡು ಸುತ್ತಲಿನ ಪ್ರದೇಶವನ್ನು ಎಚ್ಚರದಿಂದ ಕಾಯುತ್ತ ನಿಂತಂತೆ ಕಾಣುತ್ತವೆ. ಮಲ್ಲಾಡದ ಸೆರಗಿನ ನಾಡಿಗೂ ಈ ನಡುವಿನ ನಾಡಿಗೂ ಪುಣೆಬೆಂಗಳೂರು ರಸ್ತೆಯೇ ಮೇರೆಯಾಗಿರುವ ದೆಂದು ಹಿಂದೆ ಹೇಳಿರುವದಷ್ಟೇ; ಧಾರವಾಡದಲ್ಲಿ ಎತ್ತರದ ಸ್ಥಳದ ಮೇಲೆ ನಿಂತು ನೋಡಿದರೆ ಇವೆರಡು ಪ್ರದೇಶಗಳಲ್ಲಿರುವ ವ್ಯತ್ಯಾಸವು ಪ್ರತ್ಯಕ್ಷ ವಾಗಿ ದೃಷ್ಟಿಗೆ ಬೀಳುವದು. ಪಶ್ಚಿಮ-ದಕ್ಷಿಣಗಳ ಕಡೆಗೆ ಎತ್ತ ನೋಡಿ ದರೂ ಗುಡ್ಡದ ಗುಂಪುಗಳೂ, ಸಾಲುಗಳೂ ದೃಷ್ಟಿಗೆ ಬೀಳುತ್ತವೆ. ಆದರೆ, ಪೂರ್ವದ ಕಡೆಗೆ ಮಾತ್ರ ಕ್ಷಿತಿಜದ ವರ್ತುಲವು ಅವಿಚ್ಛಿನ್ನವಾಗಿ ಕಾಣು ವದು. ಅತಿ ದೂರದಲ್ಲಿ ಸಣ್ಣ ದೊಡ್ಡ ಒಂದೆರಡು ಗುಡ್ಡಗಳು ಮಸಕು ಮಸಕಾಗಿ ಕಾಣುವವು.

ಕರ್ಜಗೀ ತಾಲೂಕಿನಲ್ಲಿಯೂ, ಅದರ ದಕ್ಷಿಣಪ್ರದೇಶದಲ್ಲಿಯೂ, ರಾಣೇಬಿನ್ನೂರ ತಾಲೂಕಿನಲ್ಲಿಯೂ ಕೆಂಪುಮಣ್ಣಿನ ಭೂಮಿಯು ಬಹಳ. ಇಲ್ಲಿ ಭೂಮಿಯು ತೆರೆಗಳಂತೆ ಏರಿಳಿತಗಳುಳ್ಳದ್ದಾಗುತ್ತ ಹೋಗುತ್ತದೆ.

ಮೇಲೆ ಹೇಳಿದ ಸಂಗತಿಗಳಿಂದ ಧಾರವಾಡ ಜಿಲ್ಲೆಯು ಪಶ್ಚಿಮದಿಂದ ಪೂರ್ವದ ಕಡೆಗೆ ಇಳುಕಲಾಗಿದೆಯೆಂಬುದು ಸಿದ್ಧವಾಗುವದು. ಇದರ ಜಲವಿಭಾಗವು ನರೇಗಲ್ಲದಿಂದ, ಬೆಟಗೇರಿ-ಮುಳುಗುಂದಗಳ ಮಾರ್ಗವಾಗಿ ಬಂಕಾಪುರ-ಹಾನಗಲ್ಲುಗಳಿಗೆ ಹೋಗುವ ಲೈನಮಾರ್ಗವೇ ಇರುವದೆಂದು ಹಳ್ಳ-ನದಿಗಳ ಗತಿಯಿಂದ ಗೊತ್ತಾಗುವದು. ಅದ್ದರಿಂದ, ಈ ಲೈನಮಾ ರ್ಗದ ಉತ್ತರದಲ್ಲಿ ಧಾರವಾಡ ಜಿಲ್ಲೆಯು ದಕ್ಷಿಣದಿಂದ ಉತ್ತರಕ್ಕೂ, ಇದರ ದಕ್ಷಿಣದಲ್ಲಿ ಉತ್ತರದಿಂದ ದಕ್ಷಿಣಕ್ಕೂ ಇಳುಕಲಾಗಿದೆಯೆಂದು ಗೊತ್ತಾಗುತ್ತದೆ.

ಬುದ್ಧಣಗುಡ್ಡವೆಂಬ ಸಾಲು ಕಲಘಟಗೀ ಹುಬ್ಬಳ್ಳೀತಾಲೂಕಗಳ ನಡುವೆ ದಕ್ಷಿಣೋತ್ತರವಾಗಿ ಸುಮಾರು ೮ ಮೈಲು. ಉದ್ದವಾಗಿ ಹಬ್ಬಿರು

ಮೈಲು (ಚೌರಸ) ಇರುವದು; ಅಂದರೆ, ಧಾರವಾಡ ಜಿಲ್ಲೆಯ ಸುಮಾರು ೧/೩ ಭಾಗವು ಬೈಲುಸೀಮೆಗೆ ಸೇರಿದಂತಾಯಿತು. ತೇಗೂರಿನಿಂದ ಹರಿಹರದವರೆಗೆ ಹೋಗುವ ಪೂನಾಬೆಂಗಳೂರಿನ ಲೈನದಾರಿಯು ಮಿಕ್ಕ ಪ್ರದೇಶವನ್ನು ಎರಡು ಭಾಗಗಳಾಗಿ ಮಾಡುವದು. ಪಶ್ಚಿಮಕ್ಕಿರುವ ಭಾಗದಲ್ಲಿ ಅಲ್ಲಲ್ಲಿ ಗುಡ್ಡದ ಸಾಲುಗಳೂ ಬಿಡಿಗುಡ್ಡಗಳೂ ತಕ್ಕಮಟ್ಟಿಗೆ ಕಣ್ಣಿಗೆ ಬೀಳುವವು. ಈ ಪ್ರದೇಶಕ್ಕೆ ಮಲೆನಾಡು (ಮಲೆ = ಗುಡ್ಡ; ನಾಡು = ದೇಶ) ಎಂದು ಅನ್ನುವದುಂಟು. ದಕ್ಷಿಣಹಿಂದುಸ್ತಾನದ ಪ್ರಾಕೃತಿಕನಕಾಶೆವನ್ನು ನೋಡಿದರೆ, ಈ ಭಾಗವು ಸಹ್ಯಾದ್ರಿಘಟ್ಟದ ಅಂಚಿನ ಸೀಮೆಯೆಂದು ಕಂಡುಬರುವದು. ಆದ್ದರಿಂದ ಇದಕ್ಕೆ ಮಲ್ಲಾಡದ ಸೆರಗೆಂದು ಅನ್ನಬಹುದು. ಇದಾದರೂ ಕ್ಷೇತ್ರದ ಮಾನದಿಂದ ಬೈಲುಸೀಮೆಯಷ್ಟೇ ಪ್ರದೇಶವಿರುವದು. ಧಾರವಾಡ ಜಿಲ್ಲೆಯಲ್ಲಿ ಕೋಡ, ಹಾನಗಲ್ಲ, ಕಲಘಟಗಿ, ಹುಬ್ಬಳ್ಳಿ, ಧಾರವಾಡ ಈ ಐದು ತಾಲೂಕಗಳು ಈ ಭಾಗದಲ್ಲಿ ಸೇರುತ್ತವೆ. ಈ ಭಾಗದಲ್ಲಿ ಸಣ್ಣ ದೊಡ್ಡ ಗುಡ್ಡಗಳು ಬಹುತರ ಎಲ್ಲ ಕಡೆಯಲ್ಲಿ ಇರುವದರಿಂದ ಭೂಮಿಯು ತಗ್ಗುದಿನ್ನೆಯಾಗಿರುವದು. ದಿನ್ನೆಗಳಲ್ಲಿ ಗರಸಿನ ನೆಲವೇ ವಿಶೇಷ. ಇಂಥ ನೆಲದ ಮೇಲೆ ಹುಲ್ಲೂ, ಸಣ್ಣ ಕಂಟಿಗಳೂ ಮಾತ್ರ ಬೆಳೆಯುತ್ತವೆ. ಗುಡ್ಡದ ಸಾಲುಗಳ ಮಧ್ಯದಲ್ಲಿಯೂ ಬಿಡಿಗುಡ್ಡಗಳ ಸುತ್ತಲೂ ಇರುವ ತಗ್ಗಿನ ಪ್ರದೇಶಗಳಲ್ಲಿ ಮಾತ್ರ ತಕ್ಕಮಟ್ಟಿಗೆ ಕಸ.ವುಳ್ಳಂಥ ಕೆಂಪುಮಣ್ಣಿನ ಭೂಮಿಯು ಅಲ್ಲಲ್ಲಿ ಹಬ್ಬಿರುವದು. ಮಲ್ಲಾಡದಲ್ಲಿ ಈ ಭಾಗಗಳಲ್ಲಿ ಮಾತ್ರ ಒಕ್ಕಲತನವು ನಡೆಯುವದು. ತೀರ ಪಶ್ಚಿಮಕ್ಕೆ ಹೋದಂತೆ ಗುಡ್ಡದ ಸಾಲುಗಳು ಹೆಚ್ಚಾಗುತ್ತವೆ; ಹಾಗು ಅವುಗಳ ಮೇಲೆ ಅಡವಿಗಳು ಹಬ್ಬಿರುತ್ತವೆ. ಮಲ್ಲಾಡದ ಸೆರಗಿಗೂ ಬೈಲುಸೀಮೆಗೂ ಮಧ್ಯದಲ್ಲಿರುವ ಪ್ರದೇಶವನ್ನು ಬೈಲುಸೀಮೆಯೊಳಗೇ ಸೇರಿಸುವ ಪಾಡಿಕೆಯುಂಟು. ಆದರೆ ಈ ಭಾಗವು ಇವೆರಡೂ ಪ್ರದೇಶಗಳ ಲಕ್ಷಣಗಳಿಂದ ಕೂಡಿರುವದರಿಂದ ಇದಕ್ಕೆ ಗಡಿನಾಡು ಎಂದು ಅನ್ನುವದು ಹೆಚ್ಚು ಯುಕ್ತವೆನಿಸುತ್ತದೆ. ಇದರ ಕ್ಷೇತ್ರಫಲವು ಸುಮಾರು ೧೨೦೦ ಚೌ. ಮೈಲು ಇರುತ್ತದೆ. ಇದರಲ್ಲಿ ಪಶ್ಚಿಮದ ಕಡೆಗೆ ಕೆಂಪುಮಣ್ಣಿನ ಭೂಮಿಯಿರುವದು. ಪೂರ್ವಕ್ಕೆ ಸಾಗಿದಂತೆ ಬೈಲುಸೀಮೆಯ ಕರೇಮಣ್ಣಿನ ಭೂಮಿಯು ದೃಷ್ಟಿಗೆ ಬೀಳುವದು. ಇದಲ್ಲದೆ ಒಂದೇ ಹೊಲ

ದಲ್ಲಿ ಕೆಲವು ಭಾಗ ಕೆಂಪು, ಕೆಲವು ಭಾಗ ಕಪ್ಪು ಇರುವದನ್ನು ಕಾಣು ವದೂ ಅಪರೂಪವಲ್ಲ. ಇಲ್ಲಿ ಬೈಲು ಸೀಮೆಯಂತೆ ಎತ್ತ ನೋಡಿದರೂ ಬೈಲೇ ಬೈಲಾಗಿಲ್ಲ. ಮಲ್ಲಾಡದ ಸೆರಗಿನಂತೆ ಗುಡ್ಡದ ಸಾಲುಗಳೂ ಬಿತಿ ದಿನ್ನೆಗಳೂ ಅನೇಕವಾಗಿಲ್ಲ. ವಿಸ್ತೀರ್ಣವಾದ ಬೈಲುಪ್ರದೇಶದ ಬೇರೆ ಬೇರೆ ಭಾಗಗಳಲ್ಲಿ ಒಂದಕ್ಕೊಂದು ಅತಿದೂರವಾಗಿ ಬಿಡಿಗುಡ್ಡಗಳು ಒಂಟಿಯಾಗಿ ತಲೆಯೆತ್ತಿಕೊಂಡು ಸುತ್ತಲಿನ ಪ್ರದೇಶವನ್ನು ಎಚ್ಚರದಿಂದ ಕಾಯುತ್ತ ನಿಂತಂತೆ ಕಾಣುತ್ತವೆ. ಮಲ್ಲಾಡದ ಸೆರಗಿನ ನಾಡಿಗೂ ಈ ನಡುವಿನ ನಾಡಿಗೂ ಪುಣೆಬೆಂಗಳೂರು ರಸ್ತೆಯೇ ಮೇರೆಯಾಗಿರುವ ದೆಂದು ಹಿಂದೆ ಹೇಳಿರುವದಷ್ಟೇ; ಧಾರವಾಡದಲ್ಲಿ ಎತ್ತರದ ಸ್ಥಳದ ಮೇಲೆ ನಿಂತು ನೋಡಿದರೆ ಇವೆರಡು ಪ್ರದೇಶಗಳಲ್ಲಿರುವ ವ್ಯತ್ಯಾಸವು ಪ್ರತ್ಯಕ್ಷ ವಾಗಿ ದೃಷ್ಟಿಗೆ ಬೀಳುವದು. ಪಶ್ಚಿಮ-ದಕ್ಷಿಣಗಳ ಕಡೆಗೆ ಎತ್ತ ನೋಡಿ ದರೂ ಗುಡ್ಡದ ಗುಂಪುಗಳೂ, ಸಾಲುಗಳೂ ದೃಷ್ಟಿಗೆ ಬೀಳುತ್ತವೆ. ಆದರೆ, ಪೂರ್ವದ ಕಡೆಗೆ ಮಾತ್ರ ಕ್ಷಿತಿಜದ ವರ್ತುಲವು ಅವಿಚ್ಛಿನ್ನವಾಗಿ ಕಾಣು ವದು. ಅತಿ ದೂರದಲ್ಲಿ ಸಣ್ಣ ದೊಡ್ಡ ಒಂದೆರಡು ಗುಡ್ಡಗಳು ಮಸಕು ಮಸಕಾಗಿ ಕಾಣುವವು.

ಕರ್ಜಗೀ ತಾಲೂಕಿನಲ್ಲಿಯೂ, ಅದರ ದಕ್ಷಿಣಪ್ರದೇಶದಲ್ಲಿಯೂ, ರಾಣೇಬಿನ್ನೂರ ತಾಲೂಕಿನಲ್ಲಿಯೂ ಕೆಂಪುಮಣ್ಣಿನ ಭೂಮಿಯು ಬಹಳ. ಇಲ್ಲಿ ಭೂಮಿಯು ತೆರೆಗಳಂತೆ ಏರಿಳಿತಗಳುಳ್ಳದ್ದಾಗುತ್ತ ಹೋಗುತ್ತದೆ.

ಮೇಲೆ ಹೇಳಿದ ಸಂಗತಿಗಳಿಂದ ಧಾರವಾಡ ಜಿಲ್ಲೆಯು ಪಶ್ಚಿಮದಿಂದ ಪೂರ್ವದ ಕಡೆಗೆ ಇಳುಕಲಾಗಿದೆಯೆಂಬುದು ಸಿದ್ಧವಾಗುವದು. ಇದರ ಜಲಚ್ಛೇದವು ನರೇಗಲ್ಲದಿಂದ, ಬೆಟಗೇರಿ-ಮುಳುಗುಂದಗಳ ಮಾರ್ಗವಾಗಿ ಬಂಕಾಪುರ-ಹಾನಗಲ್ಲುಗಳಿಗೆ ಹೋಗುವ ಲೈನದ ಮಾರ್ಗವೇ ಇರುವದೆಂದು ಹಳ್ಳ-ನದಿಗಳ ಗತಿಯಿಂದ ಗೊತ್ತಾಗುವದು. ಆದ್ದರಿಂದ, ಈ ಲೈನಮಾ ರ್ಗದ ಉತ್ತರದಲ್ಲಿ ಧಾರವಾಡ ಜಿಲ್ಲೆಯು ದಕ್ಷಿಣದಿಂದ ಉತ್ತರಕ್ಕೂ, ಇದರ ದಕ್ಷಿಣದಲ್ಲಿ ಉತ್ತರದಿಂದ ದಕ್ಷಿಣಕ್ಕೂ ಇಳುಕಲಾಗಿದೆಯೆಂದು ಗೊತ್ತಾಗುತ್ತದೆ.

ಬುದ್ದಣಗುಡ್ಡವೆಂಬ ಸಾಲು ಕಲಘಟಗೀ ಹುಬ್ಬಳ್ಳೀತಾಲೂಕಗಳ ನಡುವೆ ದಕ್ಷಿಣೋತ್ತರವಾಗಿ ಸುಮಾರು ೮ ಮೈಲು, ಉದ್ದವಾಗಿ ಹಬ್ಬಿರು

ತ್ತದೆ. ಇದರಲ್ಲಿ ಇಮಾರತಿಗೆ ಉಪಯೋಗಿಸುವ ಕಲ್ಲುಗಳು ಹೊರಡುತ್ತವೆ. ಪಶ್ಚಿಮಭಾಗದಲ್ಲೆಲ್ಲ ಬಿಡಿಗುಡ್ಡಗಳು ಅಲ್ಲಲ್ಲಿ ಅವೆ. ಈ ಭಾಗದ ಗುಡ್ಡಗಳು ಸುತ್ತಲಿನ ಭೂಮಿಯಿಂದ ೫೦೦ ಫೂಟಿಗಿಂತ ಎತ್ತರವಾಗಿಲ್ಲ. ಇವುಗಳ ಮೇಲೆ ಹುಲ್ಲೂ, ಸಣ್ಣಗಿಡಗಳೂ ಬೆಳೆದಿರುತ್ತವೆ.

ಐರಣೀಗುಡ್ಡದ ಗುಂಪು ರಾಣೇಬಿನ್ನೂರ ತಾಲೂಕಿನ ಆಗ್ನೇಯ ಮೂಲೆಯಲ್ಲಿ ಸುಮಾರು ೧೦ ಮೈಲು ಉದ್ದ ಹಬ್ಬಿರುತ್ತದೆ. ಇದರ ನಡುವೆ ೫ ಮೈಲುಗಳಿಗೆ ಕಿಂಡಿಯುಂಟು. ತುಂಗಭದ್ರೆಯ ಧಡದಲ್ಲಿ ಐರಣೀ ಗ್ರಾಮದ ಹತ್ತರ ಈ ಗುಂಪಿನೊಳಗೆ ಎಲ್ಲಕ್ಕೂ ಎತ್ತರವಾದ ಗುಡ್ಡವು ಸುತ್ತಲಿನ ಪ್ರದೇಶದಿಂದ ೭೦೦ ಫೂಟು ಉನ್ನತವಿರುತ್ತದೆ. ಕೋಡ ತಾಲೂಕಿನಲ್ಲಿ ತುಮ್ಮಿನಕಟ್ಟೆಯಿಂದ ಮೈಸೂರಿನ ಸರಹದ್ದಿನವರೆಗೆ ಪೂರ್ವಪಶ್ಚಿಮವಾಗಿ ಒಂದು ಗುಡ್ಡದ ಸಾಲು ಹಬ್ಬಿರುವದು. ಇದಕ್ಕೆ ಕವರೀ ಗುಡ್ಡವೆಂಬ ಹೆಸರು. ಪಶ್ಚಿಮದಲ್ಲಿ ಇದು ಧಾರವಾಡ ಜಿಲ್ಹೆಗೂ ಮೈಸೂರಪ್ರಾಂತಕ್ಕೂ ಮೇರೆಯಾಗಿದೆ. ಈ ಭಾಗದಲ್ಲಿ ಹೆಸರಾದ ಮಾಸೂರಿನ ಕೆರೆಯುಂಟು.

ಧಾರವಾಡ ಜಿಲ್ಹೆಯಲ್ಲಿ ಎಲ್ಲಕ್ಕೂ ಉದ್ದವಾದ ಗುಡ್ಡದ ಸಾಲು ಗದಗ ತಾಲೂಕಿನಲ್ಲಿ ಗದಗಿನಿಂದ ಆಗ್ನೇಯಕ್ಕೆ ತುಂಗಭದ್ರೆಯವರೆಗೆ ೩೦ ಮೈಲು ಉದ್ದವಾಗಿ ಹಬ್ಬಿರುವದು. ಇದಕ್ಕೆ ಕಪ್ಪದಗುಡ್ಡವೆಂದು ಹೆಸರು ಇರುವದು ಈ ಸಾಲಿನ ಮಧ್ಯಭಾಗದಲ್ಲಿರುವ ಗುಡ್ಡದ ಸಾಲು ಸುತ್ತಲಿನ ಪ್ರದೇಶದಿಂದ ೧೦೦೦ ಫೂಟು ಎತ್ತರದಲ್ಲುಂಟು. ಇದು ಆಗ್ನೇಯದಲ್ಲಿ ಮೂರುನಾಲ್ಕು ಸಾಲುಗಳಾಗಿ ೫ ಮೈಲು ಅಗಲಾದ ಪ್ರದೇಶವನ್ನು ಆಕ್ರಮಿಸುತ್ತದೆ. ಕಪ್ಪದಗುಡ್ಡದ ಮೇಲೆ ಯಾವ ಪ್ರಕಾರದ ವೃಕ್ಷಾದಿಗಳೂ ಬೆಳೆಯುವದಿಲ್ಲ. ಈ ಗುಡ್ಡದಸಾಲು ದಾಟಲಿಕ್ಕೆ ನಾಲ್ಕು ಮಾರ್ಗಗಳಿವೆ. ಆದರೆ ವ್ಯಾಪಾರವು ಈ ಮಾರ್ಗಗಳಿಂದ ನಡೆಯುವದಿಲ್ಲ. ಈ ಗುಡ್ಡದಲ್ಲಿ ಬಂಗಾರವು ದೊರೆಯುವದರಿಂದ ಇದಕ್ಕೆ ಕಪ್ಪದಗುಡ್ಡವೆಂದು ಹೆಸರು ಬಂದಿರುವದೆಂದು ಹೇಳುವರು. ಬಿಡಿಗುಡ್ಡಗಳಲ್ಲಿ ನರಗುಂದ ನವಲಗುಂದದ ಗುಡ್ಡಗಳು ಈ ಜಿಲ್ಹೆಯ ಇತಿಹಾಸದಲ್ಲಿ ತಕ್ಕಮಟ್ಟಿಗೆ ಹೆಸರಾಗಿವೆ.

೩ನೇ ಪ್ರಕರಣ.

ನದಿಗಳು.

ಕಾನಡಾ ಹಾಗು ಧಾರವಾಡ ಜಿಲ್ಹೆಗಳ ನಕಾಶವನ್ನು ನೋಡಿದರೆ ಸಾಧಿಕವಾಗಿ ೭೫ನೇ ರೇಖಾವೃತ್ತದ ಪಶ್ಚಿಮಕ್ಕೆ ಹುಟ್ಟುವ ಪ್ರವಾಹಗಳೆಲ್ಲ

ಪಶ್ಚಿಮಕ್ಕೆ ಹರಿದು ಸಮುದ್ರಕ್ಕೆ ಕೂಡುತ್ತವೆಂದು ಕಂಡುಬರುವದು. ಅದರ ಪೂರ್ವಕ್ಕೆ ಹುಟ್ಟುವ ಪ್ರವಾಹಗಳು ಪೂರ್ವಕ್ಕೆ ಹರಿದು ವರದಾ, ತುಂಗಭದ್ರಾ, ಮಲಪ್ರಭಾನದಿಗಳಿಗೆ ಕೂಡುತ್ತವೆ. ಧಾರವಾಡ ಜಿಲ್ಹೆಯ ಪಶ್ಚಿಮಭಾಗದಲ್ಲಿಯೇ ೭೫ ನೇ ರೇಖಾವೃತ್ತವು ಹಾಯುವದರಿಂದ, ಈ ಪ್ರದೇಶವೇ ಇವೆರಡೂ ಜಿಲ್ಹೆಗಳ ಪೂರ್ವ-ಪಶ್ಚಿಮಜಲಚ್ಛೇದವಾದಂತಾಯಿತು. ಆದ್ದರಿಂದಲೇ ಈ ಜಿಲ್ಹೆಯಲ್ಲಿ ದೊಡ್ಡ ಹೊಳೆಗಳು ಇಲ್ಲ. ಕೆಲವು ಪ್ರವಾಹಗಳು ಆಗ್ನೇಯಕ್ಕೂ, ನೈಋತ್ಯಕ್ಕೂ ಹರಿದು ತುಂಗಭದ್ರೆಗೆ ಕೂಡುತ್ತವೆ. ಈ ಜಿಲ್ಹೆಯಲ್ಲಿ ಹರಿಯುವ ಏಳು ಮುಖ್ಯ ಹೊಳೆಗಳಲ್ಲಿ ೬ ಪೂರ್ವದಕಡೆಗೆ ಹರಿಯುತ್ತವೆ. ಒಂದು ಮಾತ್ರ ಪಶ್ಚಿಮಘಟ್ಟದೊಳಗಿಂದ ಹಾಯ್ದು ಅರಬೀಸಮುದ್ರಕ್ಕೆ ಕೂಡುತ್ತದೆ.

೧. ತುಂಗಭದ್ರೆಯು:—ಮೈಸೂರ ಸೀಮೆಯ ಈಶಾನ್ಯಮೇರೆಯಲ್ಲಿ ತುಂಗಾ ಭದ್ರಾ ಎಂಬೆರಡು ಹೊಳೆಗಳು ಸಹ್ಯಾದ್ರಿಯಲ್ಲಿ ಉಗಮವಾಗಿ ಸುಮಾರು ೫೦ ಮೈಲು ಉತ್ತರಕ್ಕೆ ಹರಿದು, ಕೂಡಲಗಿಯ ಹತ್ತರ ಎರಡೂ, ಕೂಡಿ ತುಂಗಭದ್ರೆಯೆಂಬ ಹೆಸರು ಹೊಂದುತ್ತವೆ. ಮುಂದೆ ೩೫ ಮೈಲು ಉತ್ತರಕ್ಕೆ ಹರಿದ ಬಳಿಕ, ಹರಿಹರದ ಹತ್ತರ ತುಂಗಭದ್ರೆಯು ಧಾರವಾಡ ಜಿಲ್ಹೆಯ ಪೂರ್ವಮೇರೆಯಾಗಿ ೮೦ ಮೈಲು ಡೊಂಕುಡೊಂಕಾಗಿ ಉತ್ತರಕ್ಕೆ ಹರಿದ ನಂತರ ಡಂಬಳದ ಹತ್ತರ ನಿಜಾಮನ ರಾಜ್ಯವನ್ನು ಸೇರುತ್ತದೆ. ಧಾರವಾಡ ಜಿಲ್ಹೆಯ ದಕ್ಷಿಣಭಾಗದ ಪ್ರವಾಹಗಳೆಲ್ಲ ಇದಕ್ಕೆ ಕೂಡುತ್ತವೆ. ಇವುಗಳಲ್ಲಿ ಕುಮುದ್ವತಿ, ವರದಾ, ಹಿರೇಹಳ್ಳ ಇವೇ ಮುಖ್ಯವಾದವು. ಗದಗ ತಾಲೂಕಿನ ಕೊರ್ಲಹಳ್ಳಿಯ ಹತ್ತರ ತುಂಗಭದ್ರೆಗೆ ಪೂರ್ವಕಾಲದಲ್ಲಿ ದೊಡ್ಡದೊಂದು ಒಡ್ಡು ಕಟ್ಟಿದ್ದರ ಕುರುಹುಗಳು ಈಗ್ಯೂ ಕಾಣುತ್ತವೆ. ಆದರೆ ಈ ಒಡ್ಡು ಹಾಕಿದ ಮರುವರ್ಷವೇ ಅದು ಕೊಚ್ಚಿ ಹೋಯಿತೆಂದು ಹೇಳುವರು. ಬೇಸಿಗೆಯಲ್ಲಿ ಈ ನದಿಯಲ್ಲಿ ನೀರು ಬಹಳ ಇರುವದಿಲ್ಲ. ಆದರೆ ಮಳೆಗಾಲದಲ್ಲಿ ಇದು ಸುಮಾರು ½ ಮೈಲು ಅಗಲ ಹರಿಯುವದು. ಇದಲ್ಲದೆ ಇದರ ಪಾತ್ರವಾದರೂ ಆಳವಿರುತ್ತದೆ. ಆದ್ದರಿಂದ ಇದನ್ನು ಜಲಮಾರ್ಗವಾಗಿ ಉಪಯೋಗಿಸುವಂತಿಲ್ಲ; ಹಾಗೂ ಇದರಿಂದ ಭೂಮಿಗೆ ನೀರನ್ನೂ ಹಾಯಿಸಲಾಗುವದಿಲ್ಲ.

ತುಂಗಭದ್ರೆಯ ನೀರು ಸವಿಯಾದಾಗ್ಯೂ ಬಹು ರೋಗಕಾರಕ

ವೆಂದು ಹೇಳುತ್ತಾರೆ. ಇದರ ದಂಡೆಯ ಮೇಲೆ ಕೊರ್ಲಹಳ್ಳಿ, ಹಾವನೂರ ಗಳಗನಾಥ, ಐರಣಿ, ತುಮ್ಮಿನಕಟ್ಟಿ, ಮೊದಲಾದ ಊರುಗಳಿವೆ.

೨. ವರದಾನದಿ:—ಇದು ಮೈಸೂರ ಸೀಮೆಯಲ್ಲಿ ಇಕ್ಕೇರಿಯ ಹತ್ತಿರ ಉಗಮವಾಗಿ ಸುಮಾರು ೪೦ ಮೈಲು ಉತ್ತರಕ್ಕೆ ಹರಿದು ಗೊಂದಿ ಗ್ರಾಮದ ಹತ್ತಿರ ಧಾರವಾಡ ಜಿಲ್ಲೆಯನ್ನು ಸೇರಿ, ಹಾನಗಲ್ಲ ಕರ್ಜಗೀ ತಾಲೂಕುಗಳಲ್ಲಿ ಪೂರ್ವಕ್ಕೆ ಸುಮಾರು ೫೦ ಮೈಲು ಹರಿದು ಕರ್ಜಗೀ ತಾಲೂಕಿನ ಈಶಾನ್ಯ ಮೂಲೆಯಲ್ಲಿ ತುಂಗಭದ್ರೆಗೆ ಕೂಡುತ್ತದೆ. ಬೇಸಿಗೆಯಲ್ಲಿ ಇದರಲ್ಲಿ ನೀರು ಬಹಳ ಕಡಿಮೆ; ಮಳೆಗಾಲದಲ್ಲಿ ತುಂಬಿ ೩೦೦ರಿಂದ ೬೦೦ ಫೂಟಿನವರೆಗೆ ಅಗಲವಾಗಿ ಹರಿಯುವದು. ಬಹಳ ಮಳೆಯಾದ ವರ್ಷಗಳಲ್ಲಿ ಇದು ಕರ್ಜಗೀ ತಾಲೂಕಿನಲ್ಲಿ ದಂಡೆಯನ್ನು ಮೀರಿಬಂದು ಸಮೀಪದ ಭೂಮಿಗೆಲ್ಲ ನೀರನ್ನೂ ರೇವೆಯನ್ನೂ ಪೂರೈಸುವದು. ಇದರ ಪಾತ್ರವು ಬಹಳ ಕಡೆಯಲ್ಲಿ ಆಳವಾಗಿರುವದರಿಂದ ಈ ಹೊಳೆಯಿಂದ ಭೂಮಿಗೆ ಬಹಳ ಉಪಯೋಗವಿಲ್ಲ. ಆದರೂ ಕುಡಿಯುವ ನೀರು ಜನರಿಗೆ ಸಮೃದ್ಧಿಯಾಗಿ ದೊರೆಯುತ್ತದೆ. ಇದರ ಮೇಲೆ ನೀರಲಗಿ, ಕರ್ಜಗಿ ನರೇಗಲ್ಲ, ಆಡೂರ, ಮುಂತಾದ ಊರುಗಳಿವೆ.

೩. ಧರ್ಮಾ:—ಇದು ಹಾನಗಲ್ಲಿನ ನೈಋತ್ಯದಲ್ಲಿ ೨೦ ಮೈಲಿನಮೇಲೆ ಉಗಮವಾಗಿ ಆ ತಾಲೂಕಿನಲ್ಲಿ ೩೫ ಮೈಲು ಈಶಾನ್ಯಕ್ಕೆ ಹರಿದು ಬಂಕಾಪುರದ ದಕ್ಷಿಣದಲ್ಲಿ ವರದೆಗೆ ಕೂಡುತ್ತದೆ. ಇದರ ಪ್ರವಾಹವು ಬಹಳ ಸಣ್ಣದಿರುತ್ತದೆ. ಪಾತ್ರವು ಆಳವಾಗಿಲ್ಲ. ಹಾನಗಲ್ಲಿನ ಪಶ್ಚಿಮದಲ್ಲಿ ಶೃಂಗೇರಿ ಎಂಬ ಗ್ರಾಮದ ಹತ್ತಿರ ಪೂರ್ವಕಾಲದವರು ಇದಕ್ಕೊಂದು ಒಡ್ಡು ಕಟ್ಟಿದ್ದಾರೆ; ಅಲ್ಲಿಂದ ಒಂದು ಕಾಲವಿ ಹೊರಟು ೧೨ ಮೈಲು ಹರಿದು ೩೦ಕ್ಕಿಂತ ಹೆಚ್ಚು ಕೆರೆಗಳಿಗೆ ನೀರು ಪೂರೈಸುವದಲ್ಲದೆ ಎಡಬಲದಲ್ಲಿ ಅಸಂಖ್ಯ ಬತ್ತದ ಗದ್ದೆಗಳನ್ನೂ, ಕಬ್ಬಿನ ತೋಟಗಳನ್ನೂ ಉಂಟು ಮಾಡಿರುತ್ತದೆ. ಇದರ ದಂಡೆಯಮೇಲೆ ಹಾನಗಲ್ಲು, ಹೊನ್ನಹಳ್ಳಿ ಎಂಬ ಊರುಗಳಿರುವವು.

೪. ಕುಮುದ್ವತಿ:— ಇದು ಮೈಸೂರ ಸೀಮೆಯಿಂದ ಧಾರವಾಡ ಜಿಲ್ಲೆಯ ದಕ್ಷಿಣಮೇರೆಯನ್ನು ದಾಟಬಂದು, ಕೋಡ ತಾಲೂಕಿನೊಳಗೆ ಕಡೂರದ ಗುಡ್ಡಗಳ ಸಾಲುಗಳ ನಡುವೆ ಒಂದು ಕಿಂಡಿಯೊಳಗಿಂದ ಹಾಯ್ದು,

೨೫ ಮೈಲುಗಳವರೆಗೆ ಈಶಾನ್ಯಕ್ಕೆ ಹರಿದು ಮುಡೇನೂರು ಗ್ರಾಮದ ಬಳಿಯಲ್ಲಿ ತುಂಗಭದ್ರೆಗೆ ಕೂಡುತ್ತದೆ. ಪೂರ್ವಕಾಲದಲ್ಲಿ ವಿಜಯನಗರದ ಅರಸರು ಇದಕ್ಕೆ ಒಂದು ಒಡ್ಡುಹಾಕಿ ಮಗದದ ಕೆರೆಯಲ್ಲಿ ಇದರ ಪ್ರವಾಹವನ್ನು ತಿರುಗಿಸಿದರು. ಈ ಕೆರೆಯು ಒಂದು ಭಾಗದ ಒಡ್ಡು ಒಡೆದದೆ. ಅದರೊಳಗಿಂದ ಎರಡು ಕಾವಲಿಗಳನ್ನು ತೆಗೆದು ಇಂಗ್ಲಿಷ ಸರಕಾರದವರು ನಾಲ್ಕುನೂರೆಂಟು ಎಕರು ಭೂಮಿಗೆ ನೀರು ಹಾಯಿಸುತ್ತಾರೆ. ಇದರ ದಂಡೆಯಮೇಲೆ ರಟ್ಟೀಹಳ್ಳಿ, ಮಾಸೂರು, ಕುಪ್ಪೇಲೂರು, ಮುದ್ದೇನೂರು ಎಂಬ ಊರುಗಳು ಅವೆ.

೫. ಬೆಣ್ಣೀಹಳ್ಳ:—ಇದು ಬಂಕಾಪುರ ತಾಲೂಕಿನಲ್ಲಿ ಧುಂಡಸಿಯ ಹತ್ತರ ಆರಂಭವಾಗಿ ಉತ್ತರಕ್ಕೆ ಹುಬ್ಬಳ್ಳಿ, ನವಲಗುಂದ, ರೋಣ, ತಾಲೂಕಗಳಲ್ಲಿ ಹರಿದು, ಮಲಾಪಹಾರಿಗೆ ಕೂಡುತ್ತದೆ. ಇದರ ದಂಡೆಗಳು ಎತ್ತರವಿರುವವು. ಪಾತ್ರವು ಸುಮಾರು ೧೦೦–೩೦೦ ಫೂಟು ಅಗಲವಿರುವದು. ಬೇಸಿಗೆಯಲ್ಲಿ ಹರಿಗಡಿದು ಕೆಲವು ಮಡುಗಳಲ್ಲಿ ಮಾತ್ರ ನೀರು ನಿಲ್ಲುವದು. ಇದರ ಪಾತ್ರದೊಳಗಿನ ಕೆಸರು ಬೆಣ್ಣೆಯ ಹಾಗೆ ಬಹು ಮಿದುವಿರುವದರಿಂದ ಇದಕ್ಕೆ ಬೆಣ್ಣೀಹಳ್ಳವೆಂಬ ಹೆಸರು ಬಂದಿದೆ. ಮಳೆಗಾಲದಲ್ಲಿ ಹಳ್ಳವು ತುಂಬಿ ಇಳಿದ ಬಳಿಕ, ಕೆಲವು ದಿವಸದ ಮೇಲೆ ಕೆಸರಿನ ಮೇಲ್ಭಾಗವು ಕೆನೆಗಟ್ಟಿ ಅದರ ಮೇಲೆ ಹುಲ್ಲು ಬೆಳೆಯುತ್ತದೆ. ಅದನ್ನು ನೋಡಿ ಮನುಷ್ಯರೂ ಪಶುಗಳೂ ದಾಟಲಿಕ್ಕೆ ಹೋದರೆ, ಕೆಸರೊಳಗೆ ಮುಳುಗಿ ಸಾಯುತ್ತವೆ. ಈ ಕಾರಣದಿಂದ ಪೂರ್ವದ ತಾಲೂಕುಗಳ ವ್ಯಾಪಾರಕ್ಕೆ ಇದೊಂದು ಪ್ರತಿಬಂಧವಾಗಿದೆ. ಇದರ ದಂಡೆಗಳು ಎತ್ತರವಿರುವದರಿಂದಲೂ, ಇದರಲ್ಲಿ ಮಳೆಗಾಲದಲ್ಲಿ ಮಾತ್ರ ನೀರು ಹರಿಯುವದರಿಂದಲೂ ಇದರಿಂದ ಸುತ್ತಲಿನ ಭೂಮಿಗೆ ಉಪಯೋಗವಾಗಿಲ್ಲ. ಬೆಣ್ಣೀಹಳ್ಳದ ಪ್ರದೇಶದಲ್ಲಿ ಮಳೆ ಕಡಿಮೆ; ಸೆಕೆ ಹೆಚ್ಚು; ಇಲ್ಲಿ ನೀರು ಬಹಳ ಉಗಿಯಾಗಿ ಹೋಗುವದು. ಆದ್ದರಿಂದ ಬೇಸಿಗೆಯಲ್ಲಿ ಇದರ ನೀರು ಬಹಳ ಸವುಳು ಇರುವದು.

೬. ಮಲಪ್ರಭಾನದಿಯು ಧಾರವಾಡಜಿಲ್ಹೆಯಲ್ಲಿ ನವಲಗುಂದ, ರೋಣ, ತಾಲೂಕುಗಳ ಉತ್ತರ ಮೇರೆಯಾಗಿ ಹದಿನಾರು ಮೈಲು ಮಾತ್ರ ಹರಿಯುತ್ತದೆ. ಇದರಲ್ಲಿ ಬೇಸಿಗೆಯಲ್ಲಿ ನೀರು ಕಡಿಮೆ. ಧಾರವಾಡ

ಜಿಲ್ಲೆಯ ಉತ್ತರದ ಹಳ್ಳಗಳೆಲ್ಲ ಈ ಹೊಳೆಗೆ ಕೂಡುತ್ತವೆ. ಆದರೆ ಬೆಣ್ಣೇಹಳ್ಳದ ಹೊರ್ತು ಮಿಕ್ಕವುಗಳೆಲ್ಲ ಬೇಸಿಗೆಯಲ್ಲಿ ಬತ್ತಿರುತ್ತವೆ. ಇದರ ದಂಡೆಯ ಮೇಲೆ ಕೊಣ್ಣೂರು, ಆಲೂರು ಎಂಬ ಊರುಗಳಿವೆ.

ನದಿಗಳಿಂದ ಮುಖ್ಯವಾಗಿ ಆಗುವ ಹಲವು ಉಪಯೋಗಗಳಲ್ಲಿ ವ್ಯಾಪಾರದ ದೃಷ್ಟಿಯಿಂದ ಆಗುವ ಉಪಯೋಗವು ಮಹತ್ವದ್ದೆನಿಸುವದು. ಯಾವದೊಂದು ಪ್ರದೇಶದಲ್ಲಿ ಹರಿಯುವ ನದಿಗಳಲ್ಲಿ ಡೋಣಿಗಳು ಓಡಾಡುವಂತೆ ಇದ್ದರೆ, ಒಂದು ಭಾಗದಿಂದ ಮತ್ತೊಂದು ಭಾಗಕ್ಕೆ ಸರಕುಗಳನ್ನು ಬಹಳ ಅಗ್ಗವಾಗಿ ಒಯ್ಯಬಹುದು. ಎಲ್ಲ ತರದ ಮಾರ್ಗಗಳಲ್ಲಿ ಜಲಮಾರ್ಗವು ಬಹಳ ಅಗ್ಗವಾದದ್ದು; ಅದರ ತರುವಾಯ ರೇಲ್ವೆ ಮಾರ್ಗ; ಅದರ ತರುವಾಯ ಲೈನಮಾರ್ಗ; ಎಲ್ಲಕ್ಕೂ ಕಡೆಗೆ ಒಂಟೆ, ಕತ್ತೆ, ದನಗಳಮೇಲೆ ಒಯ್ಯುವದು. ಜಲಮಾರ್ಗವು ಬಹಳ ಸಾವಕಾಶವಾದದ್ದೆಂಬದನ್ನು ಮಾತ್ರ ಲಕ್ಷದಲ್ಲಿಡುವಂತಿದೆ. ಇರಲಿ; ಈ ತರದ ಅನುಕೂಲವು ಈ ಜಿಲ್ಲೆಯ ನದಿಗಳಲ್ಲಿ ಯಾವ ಯಾವ ನದಿಗಳಿಗೆ ಇರುವದೆಂಬದನ್ನು ನೋಡುವಾ:— ಡೋಣಿಗಳು ಓಡಾಡಲಿಕ್ಕೆ ಬರುವಂಥ ನದಿಗಳ ಲಕ್ಷಣಗಳನ್ನು ಮೊದಲು ಅಭ್ಯಾಸಿಸುವಾ. (೧) ಹೊಳೆಯ ಪಾತ್ರದಲ್ಲಿ ಬಂಡೆಗಲ್ಲುಗಳೂ ಉಸುಕಿನ ಗುಡ್ಡಗಳೂ ಇರಲಾಗದು. (೨) ಹೊಳೆಯಲ್ಲಿ ನೀರಿನ ಪ್ರವಾಹವು ಮುಂದವಾಗಿಯೂ ನಿಯಮಿತವಾಗಿಯೂ ಇರಬೇಕು. (೩) ಹೊಳೆಯ ಆಳವು ತಕ್ಕಷ್ಟು ಇರಬೇಕು. (೪) ಹೊಳೆಯು ಸಮನೆಲದಲ್ಲಿ ಹರಿದಿರಬೇಕು. (೫) ಇದು ವ್ಯಾಪಾರಕ್ಕೆ ಹೆಸರಾದ ಸ್ಥಳಗಳ ಸಮೀಪವಾಗಿ ಹಾದಿರಬೇಕು. ಸೂಕ್ಷ್ಮವಾಗಿ ವಿಚಾರಮಾಡಿ ನೋಡಿದರೆ, ಧಾರವಾಡ ಜಿಲ್ಲೆಯ ಒಂದು ನದಿಗೂ ಈ ೫ ಲಕ್ಷಣಗಳು ಇರುವದಿಲ್ಲೆಂದು ಕಂಡುಬರುವದು. ಆದ್ದರಿಂದ ಇವೆಲ್ಲ ನದಿಗಳು ನಾಕಾಗಮನಕ್ಕೆ ಅನುಕೂಲವಿಲ್ಲವಾದವುಗಳೆಂದು ಹೇಳಬಹುದು. ತುಂಗಭದ್ರೆಯ ಪಾತ್ರವು ಬಹಳ ಅಗಲಾಗಿರುವದು; ಹಾಗೂ ಪಾತ್ರದಲ್ಲಿ ಉಸುಕಿನ ಗುಡ್ಡಗಳೂ ಬಂಡೆಗಲ್ಲುಗಳೂ ವಿಶೇಷ. ಧರ್ಮಾ-ವರದಾ ಹೊಳೆಗಳಲ್ಲಿ ನೀರಿನ ಪ್ರವಾಹವು ಸಾಕಷ್ಟು ಇರುವದಿಲ್ಲ. ಮಳೆಗಾಲದಲ್ಲಿ ಇವು ತುಂಬಿ ಹರಿದಾಗ್ಯೂ ಇವುಗಳ ವೇಗವು ಡೋಣಿಗಳ ಓಡಾಟಕ್ಕೆ ಪ್ರತಿಬಂಧಕವಾಗುತ್ತದೆ. ಉಳಿದ ಹೊಳೆಗಳಂತೂ ಕೇವಲ ಹಳ್ಳಗಳು.

ಕೆಲವೆಡೆಯಲ್ಲಿ ಹೊಳೆಗಳಿಂದ ಭೂಮಿಗೆ ನೀರನ್ನು ಹಾಯಿಸಿ ಕೊಂಡು, ಮಳೆಯನ್ನು ತಿರಸ್ಕರಿಸಿ, ಬಂದಕ್ಕೆ ಮುಮ್ಮಡಿಯಾಗಿ ಪೈರುಗಳನ್ನು ಬೆಳೆಸಿಕೊಳ್ಳಲಿಕ್ಕೆ ಅನುಕೂಲವಿರುವದು. ಈ ಮೇರೆಗೆ ಹೊಳೆಗಳಿಂದ ಕಾಲಿವೆಗಳನ್ನು ತೆಗೆದುಕೊಳ್ಳುವದಾದರೆ, ಆ ಹೊಳೆಗಳಲ್ಲಿ ಕೆಲವು ಲಕ್ಷಣಗಳಿರಬೇಕು. ಅವುಗಳಲ್ಲಿ ಮುಖ್ಯವಾದವುಗಳು ಯಾವವೆಂದರೆ:—(೧) ಭೂಮಿಯು ಸಮನೆಲವುಳ್ಳದ್ದಿರಬೇಕು. ಅದರಲ್ಲಿ ಕಲ್ಲಿನ ಥರಗಳು ಪೃಷ್ಠ ಭಾಗದಲ್ಲಿ ಹಾದಿರಬಾರದು. ಯಾಕೆಂದರೆ ಇಳುಕಲಾದ ಭೂಮಿಯಲ್ಲಿ ನೀರು ಬಹು ತೀವ್ರವಾಗಿ ಹರಿಯುತ್ತದೆ; ಹಾಗೂ ಬಂಡೆಗಲ್ಲನ್ನು ಒಡೆದು ಕಾಲಿವೆಗಳನ್ನು ಮಾಡಬೇಕಾದರೆ ಖರ್ಚು ಬಹಳ ಬೀಳುವದು. (೨) ಕಾಲಿವೆಗಳಿಗೆ ನೀರಿನ ಪೂರೈಕೆಯಾಗುವಷ್ಟು ಪ್ರವಾಹವು ದೊಡ್ಡದಿರಬೇಕು; ಅಂದರೆ, ಬೇಸಿಗೆಯಲ್ಲಿ ಈ ಕಾಲಿವೆಗಳಿಂದ ನಿಜವಾದ ಉಪಯೋಗವಾಗುವದು. ಈ ಸಮಯದಲ್ಲಿ ಹೊಳೆಗಳು ಹರಿಗಡಿದರೆ, ಇಲ್ಲವೆ ಸಣ್ಣವಾಗಿ ಹರಿದರೆ ಅವುಗಳಿಂದ ಏನೂ ಉಪಯೋಗವಾಗಲಾರದು. (೩) ಸಮೀಪದಲ್ಲಿಯೇ ಕಸುವಿನ ಭೂಮಿಯು ಇರಬೇಕು. ಬಂಜೆಭೂಮಿಗೆ ಎಷ್ಟು ನೀರು ಹಾಯಿಸಿದರೂ ಪ್ರಯೋಜನವೇನು? (೪) ನೀರಿನ ಪ್ರವಾಹವು ಸಾಕಷ್ಟು ಇಲ್ಲದಿದ್ದರೆ ಒಡ್ಡು ಕಟ್ಟಿ ನೀರನ್ನು ಏರಿಸುವದು ಅಸಾಧ್ಯವು.

ಇವೆಲ್ಲ ಅನುಕೂಲಗಳು ಧಾರವಾಡ ಜಿಲ್ಹೆಯ ಸಣ್ಣ ಸಣ್ಣ ನದಿಗಳಿಗೆ ಇಲ್ಲವಾದ್ದರಿಂದ, ಈ ಜಿಲ್ಹೆಯಲ್ಲಿ ಸರಕಾರದವರು ಕಾಲಿವೆಗಳಿಗಾಗಿ ಬಹಳ ಹಣವನ್ನು ವೆಚ್ಚ ಮಾಡಿದಂತೆ ತೋರುವದಿಲ್ಲ. ಈ ಜಿಲ್ಹೆಯಲ್ಲಿ ಕೆರೆಗಳಿಂದಲೇ ಬಹಳ ಉಪಯೋಗವಾಗುವಂತೆ ತೋರಿದ್ದರಿಂದ ಅವುಗಳ ಕಡೆಗೆ ಹೆಚ್ಚು ಲಕ್ಷವನ್ನು ಕೊಟ್ಟಂತೆ ತೋರುತ್ತದೆ. ಆದಾಗ್ಯೂ ಮುಂಬೈ ಕರ್ನಾಟಕದ ನಾಲ್ಕು ಜಿಲ್ಹೆಗಳಲ್ಲಿ ಧಾರವಾಡ ಜಿಲ್ಹೆಯಲ್ಲಿಯೇ ಕಾಲಿವೆಗಳ ಸಂಖ್ಯೆಯು ಹೆಚ್ಚಾಗಿರುವದು.

ಧಾರವಾಡ ಜಿಲ್ಹೆಯಲ್ಲಿ ಪುರಾತನ ಕಾಲದಲ್ಲಿ ಕಟ್ಟಿಸಿದ ಕಾಲಿವೆಗಳು ನಾಲ್ಕು ಇರುತ್ತವೆ. ಇವುಗಳಲ್ಲಿ ಎರಡು ಧರ್ಮಾನದಿಗೆ ಸೇರಿವೆ. ಧರ್ಮಾನದಿಯ ಕಾಲಿವೆಗಳಿಗೆ (೧) ಕಾಮನಹಳ್ಳಿಯ ಕಾಲಿವೆಯೆಂದೂ (೨) ನರೇಗಲ್ಲಿನ ಕಾಲಿವೆಯೆಂದೂ ಅನ್ನುವರು. ಹಾನಗಲ್ಲಿನ ನೈಋತ್ಯಕ್ಕೆ

ಆರು ಮೈಲಿನ ಮೇಲೆ ಶೃಂಗೇರಿಯ ಬಳಿಯಲ್ಲಿ ಧರ್ಮನದಿಗೆ ಒಂದು ಒಡ್ಡು ಪುರಾತನದಲ್ಲಿ ಹಾಕಿದ್ದಾರೆ. ಇದನ್ನು ವಿಜಯನಗರದ ಅರಸರು ಹಾಕಿದಂತೆ ತೋರುತ್ತದೆ. ಇದರ ಮೇಲ್ಗಡೆಯಿಂದ ದೊಡ್ಡದೊಂದು ಕಾಲುವೆಯನ್ನು ತೆಗೆದು ೧೩ ಮೈಲು ದೂರ ಒಯ್ದಿದ್ದಾರೆ. ಈ ಕಾಲುವೆಯಿಂದ ೭೦೦೦ ಎಕರೆ ಬತ್ತದ ಭೂಮಿಗೂ, ತೋಟಗಳಿಗೂ ನೀರು ದೊರೆಯುವದಲ್ಲದೆ ೮೯ ಕೆರೆಗಳು ತುಂಬುತ್ತವೆ. ಇದೇ ನದಿಗೆ ಕಂಬೇನೆಗಳೂರದ ಹತ್ತರ ಮತ್ತೊಂದು ಒಡ್ಡು ಹಾಕಿ, ನರೇಗಲ್ಲಿನವರೆಗೆ ಕಾಲುವೆಯನ್ನು ಒಯ್ದಿದ್ದಾರೆ. ಮದಗಮಾಸೂರ ಕೆರೆಯಿಂದಲೂ ೬ ಮೈಲುಗಳವರೆಗೆ ೨ ಕಾಲುವೆಗಳನ್ನು ಮಾಡಿದ್ದಾರೆ. ಇವುಗಳಿಂದ ಕೆಲವು ತೋಟಗಳಿಗೆ ಬಹಳ ಉಪಯೋಗವಾಗಿದೆ.

ಕೆರೆಗಳು:—ಧಾರವಾಡ ಜಿಲ್ಲೆಯ ಪ್ರಾಕೃತಿಕಸ್ವರೂಪವನ್ನು ಲಕ್ಷ್ಯಕ್ಕೆ ತಂದರೆ ಇದರ ಪಶ್ಚಿಮಭಾಗದ ಮಲೆನಾಡಿನಲ್ಲಿ ಗುಡ್ಡಗಾಡುಳ ಭೂಮಿಯು ಇರುವದರಿಂದ ಇಲ್ಲಿ ಮಾತ್ರ ಸಣ್ಣ ದೊಡ್ಡ ಕೆರೆಗಳಾಗುವದಕ್ಕೆ ಅನುಕೂಲವಿದೆಯೆಂದು ಕಂಡು ಬರುವದು. ಕೆರೆಗಳಾಗಲಿಕ್ಕೆ, ಗುಡ್ಡಗಳಿಂದ ಪರಿಸೀಮಿತಗಳುಂಟಾಗಿದ್ದು, ಮಳೆಯ ಅನುಕೂಲವೂ ನೀರು ಸುಲಭವಾಗಿ ಇಂಗದಂಥ ಭೂಮಿಯೂ ಇರಬೇಕು. ಇವೆರಡು ಅನುಕೂಲಗಳು ಪಶ್ಚಿಮದಲ್ಲಿರುವ ಮಲೆನಾಡಿನಲ್ಲಿ ಇವೆ. ಪೂರ್ವದಲ್ಲಿ ಒಂದೇ ಸಮನೇ ಹಬ್ಬಿದ ಬೈಲುಭೂಮಿಯಲ್ಲಿ ಕೆರೆಗಳಾಗಲಿಕ್ಕೆ ಅನುಕೂಲವಾದ ತಗ್ಗು ದಿನ್ನೆಯ ಭೂಮಿಯು ಇಲ್ಲ. ಅಲ್ಲಿಯ ಭೂಮಿಯಲ್ಲಿ ನೀರು ತೀವ್ರವಾಗಿ ಇಂಗುವದು. ಅಲ್ಲಿ ಮಳೆಯೂ ಕಡಿಮೆ. ಆದ್ದರಿಂದ ಈ ಜಿಲ್ಲೆಯ ಮುಖ್ಯ ಕೆರೆಗಳೂ, ಬಹಳ ಕೆರೆಗಳೂ ಮಲೆನಾಡಿನಲ್ಲಿಯೇ ಇರುವವು. ಧಾರವಾಡ ಜಿಲ್ಲೆಯ ಕಾಲುವೆಗಳಂತೆ, ಮುಖ್ಯ ಕೆರೆಗಳಾದರೂ ಪುರಾತನ ಕಾಲದವೆಂದು ಹೇಳಬಹುದು. ಇವುಗಳಲ್ಲಿ ಕರ್ಜಿಗೀ ತಾಲೂಕಿನಲ್ಲಿ ಹಾವೇರಿಯ ಸೆರೆಯಲ್ಲಿರುವ ಕೆರೆಯೂ, ಬಂಕಾಪುರ ತಾಲೂಕಿನಲ್ಲಿ ನಾಗನೂರಿನಲ್ಲಿರುವ ಕೆರೆಯೂ, ಗದಗ ತಾಲೂಕಿನಲ್ಲಿ ಡಂಬಳದಲ್ಲಿರುವ ಕೆರೆಯೂ ಹೆಸರಾದವುಗಳು. ಹಾವೇರಿಯ ಕೆರೆಯು ಧಾರವಾಡ ಜಿಲ್ಲೆಯ ಮುಖ್ಯವಾದ ಕೆರೆಗಳಲ್ಲಿ ಒಂದಾದದ್ದು. ನಾಗನೂರಿನ ಕೆರೆಗೆ ೩,೪೦೦ ಫೂಟು ಉದ್ದವಾದ ಒಡ್ಡುಂಟು. ಡಂಬಳದ ಕೆರೆಯೂ ತಕ್ಕಮಟ್ಟಿಗೆ ದೊಡ್ಡದಿರುವದು. ಇದ

ರಿಂದ ಸುತ್ತಲಿರುವ ೪೦ ಚೌ. ಮೈಲು ಭೂಮಿಗೆ ನೀರಿನ ಪೂರೈಕೆಯಾಗುವದು. ಸರಕಾರದವರು ಹೊಲಗಳಿಗೆ ನೀರನ್ನು ಪೂರೈಸುವದಕ್ಕೋಸ್ಕರ ಕೈಕೊಂಡ ಮುಖ್ಯ ಕೆರೆಗಳಲ್ಲಿ ಮದಗದ ಸರೋವರವೂ, ಡಂಬಳದ ಕೆರೆಯೂ, ಅಸುಂಡಿಯ ಕೆರೆಯೂ, ಮಡಲೇರಿಯ ಕೆರೆಯೂ ಹೆಸರಾದವುಗಳು. ಮದಗದ ಕೆರೆಯು ಮೈಸೂರ ಸೀಮೆಯಲ್ಲಿ ಅದೆ. ಇದರಿಂದ ಕೋಡ ತಾಲೂಕಿನಲ್ಲಿ ೯೨೨ ಎಕರೆ ಭೂಮಿಗೆ ನೀರಿನ ಪೂರೈಕೆಯಾಗುವದು. ಈ ಸರೋವರದಲ್ಲಿ ಕುಮುದ್ವತೀ ನದಿಯು ಹುಟ್ಟಿರುವದರಿಂದ ಇದರ ನೀರು ಬೇಸಿಗೆಕಾಲದಲ್ಲಿಯೂ ಬಹಳ ಕಡಿಮೆಯಾಗುವದಿಲ್ಲ. ಅಸುಂಡಿ ಹಾಗೂ ಮಡಲೇರಿಯ ಕೆರೆಗಳು ರಾಣೇಬಿನ್ನೂರ ತಾಲೂಕಿನಲ್ಲಿ ಇರುತ್ತವೆ. ಮೊದಲನೆಯದು ೨೪೯ ಎಕರೆ ಭೂಮಿಗೂ, ಎರಡನೆಯದು ೫೨ ಎಕರೆ ಭೂಮಿಗೂ ನೀರನ್ನು ಪೂರೈಸುತ್ತವೆ. ಮದಗದ ಕೆರೆಯ ಹೊರ್ತು ಮಿಕ್ಕ ಎಲ್ಲ ಕೆರೆಗಳು ಮಳೆಯನ್ನು ಅವಲಂಬಿಸಿರುತ್ತವೆ. ಕೆರೆಗಳ ನೀರಿನಿಂದ ಬತ್ತದ ಗದ್ದೆಗಳಿಗೂ ತೋಟಗಳಿಗೂ ಮಾತ್ರ ಉಪಯೋಗವಾಗುತ್ತದೆ; ಒಣಕಾಳಿನ ಭೂಮಿಗೆ ಉಪಯೋಗವಾಗುವದಿಲ್ಲ. ಭೂಮಿಗೆ ನೀರು ಪೂರೈಸುವ ಸಣ್ಣ ದೊಡ್ಡ ಕೆರೆಗಳನ್ನು ಹಿಡಿದರೆ, ಈ ಜಿಲ್ಹೆಯಲ್ಲಿ ಕೋಡ ಹಾಗೂ ಹಾನಗಲ್ಲ ತಾಲೂಕುಗಳಲ್ಲಿ ಕೆರೆಗಳ ಸಂಖ್ಯೆ ಬಹಳ; ನವಲಗುಂದ ಕಲಘಟಗಿಗಳಲ್ಲಿ ಎಲ್ಲಕ್ಕೂ ಕಡಿಮೆ. ಅಂತೂ ನೀರಿನ ಪೂರೈಕೆಯ ದೃಷ್ಟಿಯಿಂದ ನೋಡಿದರೆ, ಮಲ್ಲಾಡದ ಸೆರಗಿನ ಸೀಮೆಯು ಉಳಿದ ಭಾಗಗಳಿಗಿಂತ ಭಾಗ್ಯವುಳ್ಳದ್ದದೆ. ನೀರಿನ ಸಂಬಂಧದಿಂದ ಬೈಲುಸೀಮೆಯು ದೈವಗೇಡಿಯಾದದ್ದೆನ್ನಬಹುದು. ಮುಖ್ಯವಾಗಿ ರೋಣ ನವಲಗುಂದ ತಾಲೂಕುಗಳಲ್ಲಿ ನೀರಿನ ತಾಪತ್ರಯವು ಬಹಳ.

ಕರಜಗಿ, ಹಾನಗಲ್ಲ, ಕೋಡ, ರಾಣೇಬಿನ್ನೂರ ತಾಲೂಕುಗಳಲ್ಲಿ ಕೆರೆಗಳೂ ಹಳ್ಳಗಳೂ ಹೊಳೆಗಳೂ ಬಹಳವಾಗಿರುತ್ತವೆ; ಆದ್ದರಿಂದ ಆ ತಾಲೂಕುಗಳಿಗೆ ನೀರಿನ ಪೂರೈಕೆಯು ಚನ್ನಾಗಿರುವದು. ಧಾರವಾಡ ಜಿಲ್ಹೆಯೊಳಗಿನ ಮುಖ್ಯ ಹೊಳೆಗಳಿಂದಲೂ, ಈ ತಾಲೂಕುಗಳಲ್ಲಿರುವ ಏರಿಳಿತಗಳುಳ್ಳ ಭೂಮಿಯು ಕೆರೆಗಳನ್ನು ಕಟ್ಟಲಿಕ್ಕೆ ಅನುಕೂಲವಾಗಿರುವದರಿಂದಲೂ, ಹಿಂಗಾರಿಯ ಹಾಗೂ ಮುಂಗಾರಿಯ ಮಳೆಗಳು ಇಲ್ಲಿ

ಸಮಾನವಾಗಿ ಕರೆಯುವದರಿಂದಲೂ ಇಲ್ಲಿ ನೀರಿನ ಪೂರೈಕೆಗೆ ಕೊರತೆ ಯುಂಟಾಗಿಲ್ಲ.

೪ನೇ ಪ್ರಕರಣ.

ಹವೆ, ಮಳೆ, ಮುಂತಾದವುಗಳ ಬಗ್ಗೆ

ಒಂದು ದಿವಸ ಅಥವಾ ವಾರದ ವರೆಗೆ ವಿಶೇಷಕಾರಣಗಳಿಂದ ವಾತಾವರಣದಲ್ಲಿ ವ್ಯತ್ಯಾಸಗಳುಂಟಾಗಿ ತೋರುವ ಹವೆಗೂ ಬೇರೆ ಬೇರೆ ಋತುಗಳಲ್ಲಿ ನಿಯಮಿತವಾಗಿ ತೋರುವ ಹವೆಗೂ ಇರುವ ವ್ಯತ್ಯಾಸವನ್ನು ಲಕ್ಷದಲ್ಲಿಡತಕ್ಕದ್ದು. ನಾವು ಇಲ್ಲಿ ಹವೆಯೆಂಬ ಶಬ್ದವನ್ನು ಎರಡನೇ ಅರ್ಥದಲ್ಲಿ ಉಪಯೋಗಿಸಿರುತ್ತೇವೆ. ಯಾಕಂದರೆ ಒಂದು ದಿವಸ ಹವೆಯು ಬಹಳ ಸೆಕೆಯುಳ್ಳದ್ದಿರಬಹುದು; ಮತ್ತೊಂದು ದಿವಸ ಹವೆಯು ಬಹಳ ತಂಪಾದದ್ದಿರಬಹುದು; ಆದಾಗ್ಯೂ ಆ ಋತುವಿನ ಹವೆಯು ಇದ್ದಂತೇ ಇರುವದು. ಯಾವದೊಂದು ಪ್ರದೇಶದ ಹವೆಯ ಬಗ್ಗೆ ಹೇಳಬೇಕಾದರೆ ನಾಲ್ಕು ಸಂಗತಿಗಳನ್ನು ಲಕ್ಷಕ್ಕೆ ತರಬೇಕಾಗುತ್ತದೆ. ಅವು ಯಾವವೆಂದರೆ:- (೧)ಹವೆಯಲ್ಲಿಯ ಉಷ್ಣತೆ, ಅಥವಾ ಶೈತ್ಯ, (೨) ಆರ್ದ್ರತೆ (ತೇವ) ಅಥವಾ ಅನಾರ್ದ್ರತೆ, (೩) ಮಳೆ, (೪) ಬಹಳ ದಿವಸಗಳ ವರೆಗೆ ಗಾಳಿಗಳು ಬೀಸುವ ದಿಕ್ಕು ಅಥವಾ ದಿಕ್ಕುಗಳು. ಇವೆಲ್ಲ ಸಂಗತಿಗಳು ಭೂಮಿಯ ಸ್ವರೂಪ, ಅಂದರೆ ಭೂಮಿಯ ಮೇಲಿರುವ ಗುಡ್ಡ, ಪರ್ವತ, ಬೈಲು, ಸಮುದ್ರದ ಸಾಮೀಪ್ಯ, ಗುಡ್ಡಗಳ ಸಾಲುಗಳು ಹಬ್ಬಿರುವ ದಿಕ್ಕುಗಳು, ಇವೇ ಮೊದಲಾದ ಸಂಗತಿಗಳನ್ನು ಅವಲಂಬಿಸಿರುತ್ತವೆ.

ಹಿಂದೆ, ಧಾರವಾಡ ಜಿಲ್ಹೆಯಲ್ಲಿ ಮಲ್ಲಾಡದ ಸೆರಗು, ಗಡಿನಾಡು, ಹಾಗೂ ಬೈಲಸೀಮೆ, ಎಂಬ ಮೂರು ಭಾಗಗಳನ್ನು ಮಾಡಿರುವೆವಷ್ಟೇ; ಹಾಗೂ ಧಾರವಾಡ ಜಿಲ್ಹೆಯು ಪಶ್ಚಿಮದಿಂದ ಪೂರ್ವದ ಕಡೆಗೆ ಇಳುಕಲಾಗುತ್ತ ಹೋಗಿರುತ್ತದೆಂದೂ ಹೇಳಿದ್ದೇವಷ್ಟೇ. ನಾವು ಗುಡ್ಡವನ್ನು ಹತ್ತಿದರೆ ಅಲ್ಲಿಯ ಹವೆಯು ಬೈಲಿನ ಹವೆಗಿಂತ ತಂಪಾದದ್ದೆನಿಸುತ್ತದೆ. ಒಂದು ಪ್ರದೇಶವು ಹೆಚ್ಚು ಎತ್ತರದಲ್ಲಿದ್ದಂತೆ ಅಲ್ಲಿಯ ತಂಪು ಹೆಚ್ಚು ಇರುತ್ತದೆಂಬದು ಹವೆಯ ಬಗ್ಗೆ ಸರ್ವಸಾಮಾನ್ಯವಾದ ನಿಯಮವಿರುತ್ತದೆ. ಆದ್ದರಿಂದ, ಧಾರವಾಡ ಜಿಲ್ಹೆಯಲ್ಲಿಯಾದರೂ ಪೂರ್ವದಿಂದ ಪಶ್ಚಿಮದ ಕಡೆಗೆ ಹೋದಂ

ಹವೆಯು ಹೆಚ್ಚು ತಂಪಾಗುತ್ತ ಹೋಗುವದೆನ್ನಬಹುದು. ಪೂರ್ವದಲ್ಲಿರುವ ನಿರ್ವೃಕ್ಷವಾದ ಬೈಲುಸೀಮೆಗಳಲ್ಲಿ, ಅಂದರೆ ರೋಣ, ನವಲಗುಂದ ಗದಗ ತಾಲೂಕುಗಳಲ್ಲಿ ತಂಪು ಕಡಿಮೆ; ಅಡವಿಯಿಂದ ತುಂಬಿದ ಮಲ್ಲಾಡದ ಗುಡ್ಡಗಳಲ್ಲಿ ತಂಪು ಹೆಚ್ಚು. ಇವುಗಳ ನಡುವೆ ಇರುವ ಗಡಿನಾಡಿನಲ್ಲಿ, ಅಂದರೆ ಧಾರವಾಡ, ಹುಬ್ಬಳ್ಳಿ ತಾಲೂಕುಗಳ ಪೂರ್ವಭಾಗ ಹಾಗೂ ರಾಣೇಬಿನ್ನೂರ, ಕರ್ಜಗಿ ತಾಲೂಕುಗಳಲ್ಲಿ ಮಧ್ಯಮ ತಂಪು ಇರುವದು.

ಎಲ್ಲ ಕಡೆಯಲ್ಲಿಯೂ ದಶಂಬರ ತಿಂಗಳ ಕಡೆಯಲ್ಲಿ ಎಲ್ಲಕ್ಕೂ ಕಡಿಮೆ ಸೆಕೆ, ಅಂದರೆ ಪರಮಾವಧಿ ಚಳಿ ಇರುತ್ತದೆಂತಲೂ, ಎಪ್ರಿಲ ತಿಂಗಳ ಕಡೆಯಲ್ಲಿ ಪರಮಾವಧಿ ಸೆಕೆ ಇರುತ್ತದೆಂತಲೂ ತಿಳಿಯುತ್ತದೆ. ಆದರೆ, ಇಷ್ಟರಿಂದಲೇ ಈ ಜಿಲ್ಹೆಯಲ್ಲೆಲ್ಲ ಒಂದೇ ಪ್ರಕಾರದ ಸೆಕೆ ಇರುತ್ತದೆಂಬ ಅನುಮಾನ ಮಾಡಲಾಗದು. ಈ ಜಿಲ್ಹೆಯ ಭೂಮಿಯ ಸ್ವರೂಪವನ್ನು ಹೇಳುವಾಗ ಇದರಲ್ಲಿ ಮೂರು ವಿಭಾಗಗಳನ್ನು ಮಾಡಿರುವೆವಷ್ಟೇ. ಅದಕ್ಕನುಸರಿಸಿ ಇಲ್ಲಿಯ ಹವೆಯ ಉಷ್ಣತೆಯಲ್ಲಿಯೂ ಮೂರು ವಿಭಾಗಗಳನ್ನು ಮಾಡಬಹುದು. ಬೈಲು ಸೀಮೆಯಲ್ಲಿ ನಿಕೃಷ್ಟಹವೆಯ ಮಾನವು ದಶಂಬರದ ಕಡೆಯಲ್ಲಿ ಸುಮಾರು ೪೦° ಇರುವದು. ಎಪ್ರೀಲ ತಿಂಗಳ ಕೊನೆಯಲ್ಲಿ ಪರಮಾವಧಿ ಸೆಕೆಯ ಮಾನವು ೧೧೦° ರಿಂದ ೧೧೫° ವರೆಗೆ ಇರುವದು. ಗಡಿನಾಡಿನಲ್ಲಿ ೫೮° ರಿಂದ ೯೫° ವರೆಗೆ ಇರುವದು. (ಈ ಸಂಖ್ಯೆಗಳನ್ನು ಅಜಮಾಸಿನಿಂದ ಕೊಟ್ಟದ್ದೇವೆ.) ತೀರ ಮಲ್ಲಾಡದಲ್ಲಿ ಸೆಕೆಯ ನಿಕೃಷ್ಟ ಹಾಗೂ ಪರಮಾವಧಿ ಮಾನಗಳು ಗಡಿನಾಡಿಗಿಂತ ಸ್ವಲ್ಪ ಕಡಿಮೆಯಾಗುವವು. ಇದರಿಂದ ಪ್ರತಿಯೊಂದು ಸ್ಥಳದ ಸರಾಸರಿ ಸೆಕೆಯ ಮಾನವು ಸ್ವಲ್ಪ ಕಡಿಮೆ ೮೦° ಅಂಶ ಹೊರಡುತ್ತಿದ್ದಾಗ್ಯೂ ಮಲ್ಲಾಡದ ಸೆರಗಿನಲ್ಲಿ ಈ ಅಂತರವು ಸುಮಾರು ೪೦° ಅಂಶಗಳ ವರೆಗೂ, ಬೈಲುಸೀಮೆಯಲ್ಲಿ ೬೦° ಅಂಶಗಳ ವರೆಗೂ ಬೆಳೆಯುತ್ತದೆ. ಇದರಿಂದ ಈ ಬೇರೆ ಬೇರೆ ಸ್ಥಳಗಳಲ್ಲಿ ಚಳಿಗಾಲದ ಚಳಿಗೂ ಬೇಸಿಗೆಯ ಬಿಸಿಲಿಗೂ ಎಷ್ಟು ಹೆಚ್ಚು ಕಡಿಮೆ ಇರುತ್ತದೆಂಬದು ಸ್ಪಷ್ಟವಾಗುತ್ತದೆ. ಬೈಲುಸೀಮೆಯಲ್ಲಿ ಚಳಿಗಾಲದ ಸೆಕೆಯ ಇಮ್ಮಡಿಗಿಂತ ಹೆಚ್ಚು ಬೇಸಿಗೆಯ ಸೆಕೆ ಇರುತ್ತದೆ; ಅಂದರೆ ಚಳಿಗಾಲದಲ್ಲಿ ಅಲ್ಲಿದ್ದಷ್ಟು ಚಳಿಯೂ, ಬೇಸಿಗೆಯಲ್ಲಿ ಅಲ್ಲಿಯಷ್ಟು ಸೆಕೆಯೂ ಯಾವ ಕಡೆಗೂ ಇರುವದಿಲ್ಲ.

ಆರ್ದ್ರತೆಯು ಮಾನವಾದರೂ ಈ ಮೂರು ಪಟ್ಟಿಗಳಲ್ಲಿ ಭಿನ್ನ ಭಿನ್ನ ವಾಗಿರುವದು. ಮಲ್ಲಾಡದ ಎತ್ತರವಾದ ಭೂಮಿಯಲ್ಲಿ ಸಾಲು ಸಾಲಾಗಿ ಹಬ್ಬಿರುವ ಗುಡ್ಡಗಳು ಗಾಳಿಗಳಲ್ಲಿರುವ ಆರ್ದ್ರತೆಯನ್ನು ಹೀರಿಕೊಳ್ಳುತ್ತವೆ. ಈ ಭಾಗವು ಸಮುದ್ರಕ್ಕೆ ಹೆಚ್ಚು ಸಮೀಪವಿರುವದರಿಂದಲೂ, ಆರ್ದ್ರತೆಯನ್ನು ತರುವ ಗಾಳಿಗಳು ಇವುಗಳ ಮೇಲಿಂದಲೇ ಬೀಸುವದರಿಂದಲೂ, ಇಲ್ಲಿ ಅಡವಿಗಳು ಹೆಚ್ಚಾಗಿರುವದರಿಂದಲೂ ಇಲ್ಲಿಯ ಹವೆಯಲ್ಲಿ ಆರ್ದ್ರತೆಯು ಹೆಚ್ಚು ಇರುತ್ತದೆ. ಗಡಿನಾಡಿನ ಹವೆಯಲ್ಲಿಯಾದರೂ ಆರ್ದ್ರತೆಯು ತಕ್ಕಷ್ಟಿರುವದು. ಮಲ್ಲಾಡದ ಗುಡ್ಡಗಳು ಬಿಟ್ಟ ಆರ್ದ್ರತೆಯನ್ನು ಇಲ್ಲಿಯ ಬಿಡಿಗುಡ್ಡಗಳ ಎತ್ತರವಾದ ಪ್ರದೇಶವು ಹೀರಿಕೊಳ್ಳುತ್ತದೆ. ಆದರೆ, ತೀರ ಪೂರ್ವದ ಕಡೆಗಿದ್ದ ಬೈಲುಸೀಮೆಯ ಹವೆಯಲ್ಲಿ ಆರ್ದ್ರತೆಯು ತೀರ ಕಡಿಮೆ. ಮುಖ್ಯವಾಗಿ ರೋಣ, ನವಲಗುಂದ ತಾಲೂಕುಗಳ ಹವೆಯು ಒಣಹವೆಯೆಂದೆನ್ನಬಹುದು.

ಮಳೆ:— ಇಡೀ ಹಿಂದುಸ್ಥಾನದ ಮಳೆಯು ಎರಡು ಗಾಳಿಗಳನ್ನು ಅವಲಂಬಿಸಿರುತ್ತದೆ: (೧) ನೈಋತ್ಯದ ಮಳೆಗಾಲದ ಗಾಳಿಯು (೨) ಈಶಾನ್ಯದ ಮಳೆಗಾಲದ ಗಾಳಿಯು. ಧಾರವಾಡ ಜಿಲ್ಹೆಯಲ್ಲಿ ಬೇಸಿಗೆಯು ಫೇಬ್ರುವರಿ ತಿಂಗಳಿನಿಂದ ಎಪ್ರೀಲ ತಿಂಗಳ ಮಧ್ಯದ ವರೆಗೆ ಇರುತ್ತದೆ. ಮುಂದೆ ಜೂನ ತಿಂಗಳ ಆರಂಭದಲ್ಲಿ ಮಳೆಗಾಲವು ಸುರುವಾಗುವ ವರೆಗೆ ನಡುನಡುವೆ ಅಡ್ಡಮಳೆಗಳಾಗಿ ಸ್ವಲ್ಪ ತಂಪಾದರೂ ಈ ಒಂದೂವರೆ ತಿಂಗಳನ್ನು ಬೇಸಿಗೆಯಲ್ಲಿಯೇ ಸೇರಿಸುವದುಂಟು. ಜೂನ ತಿಂಗಳ ಆರಂಭದಲ್ಲಿ ಗಾಳಿಯು ಪಶ್ಚಿಮದಲ್ಲಿರುವ ಅರಬೀಸಮುದ್ರದಿಂದ ಬೀಸಹತ್ತುತ್ತದೆ. ಇದಕ್ಕೆ ನೈಋತ್ಯದ ಮಳೆಗಾಲದ (ಮಸ್ಸೂನ) ಗಾಳಿಯೆಂಬ ಹೆಸರು. ಹಿಂದುಸ್ಥಾನದ ಹವೆಯಲ್ಲಿ ಈ ಗಾಳಿಯು ಬಹು ಮಹತ್ವವುಳ್ಳದ್ದೂ ಸೋಜಿಗವಾದದ್ದೂ ಇರುತ್ತದೆ. ಮೇ ತಿಂಗಳಲ್ಲಿ, ಅಂದರೆ ಮಳೆಗಾಲದ ಗಾಳಿಯು ಸುರುವಾಗುವದಕ್ಕಿಂತ ಮೊದಲು, ಮಲ್ಲಾಡದಲ್ಲಿದ್ದೇವೆಂದು ತಿಳಿಯುವ. ಆಗ ಆಕಾಶವು ಸ್ವಚ್ಛವಾಗಿರುತ್ತದೆ; ಸೂರ್ಯನು ತೇಜೋಯುಕ್ತನಾಗಿ ಬೆಳಗುತ್ತಿರುತ್ತಾನೆ; ಗಾಳಿಯು ಮಂದವಾಗಿ ಆಡುತ್ತಿರುತ್ತದೆ. ಆದರೆ ಜೂನ ತಿಂಗಳು ಪ್ರಾರಂಭವಾದ ಕೂಡಲೆ, ಇದೆಲ್ಲ ಒಮ್ಮಿಂದೊಮ್ಮೆ ಬದಲಾಗುತ್ತದೆ. ಸೂರ್ಯನು ಕಾಣದಾಗುತ್ತಾನೆ. ಮೋಡಗಳು ಬಲ

ವಾಗಿ ಬೀಸುತ್ತಿರುವ ಗಾಳಿಯು ಮಾನದಿಂದ ಸಿಡುತ್ತಿರುತ್ತವೆ. ಗುಡುಗುಗಳ ಅಬ್ಬರದಿಂದಲೂ ಮಿಂಚಿನ ಹೊಳಪಿನಿಂದಲೂ ನಾವು ಚಕಿತರಾಗುತ್ತೇವೆ. ಮಳೆಯು ಸುರಿಯಲಾರಂಭಿಸುತ್ತದೆ. ಸುತ್ತಲಿದ್ದ ಸರವುಗಳೂ ಗುಡ್ಡಗಳಿಂದ ಬರುವ ಹಳ್ಳಗಳೂ ತುಂಬಿ ಹರಿಯಲಾರಂಭಿಸುತ್ತವೆ. ಈ ಗಾಳಿಯು ಸುಮಾರು ನಾಲ್ಕು ತಿಂಗಳುಗಳ ವರೆಗೆ, ಅಂದರೆ ಜೂನ, ಜುಲೈ, ಅಗಷ್ಟ, ಸಪ್ಟಂಬರ ತಿಂಗಳುಗಳಲ್ಲಿ ಒಂದೇ ಸವನೆ ನೈಋತ್ಯ ದಿಕ್ಕಿನಿಂದ ಬಲವಾಗಿ ಬೀಸುತ್ತಿರುತ್ತದೆ.

ಆದರೆ ಆರ್ದ್ರತೆಯಿಂದ ತುಂಬಿದ ಈ ಗಾಳಿಯು ಮಳೆಯನ್ನು ಎಲ್ಲ ಕಡೆಯಲ್ಲಿ ಒಂದೇ ಸವನೆ ಸುರಿಸುವದಿಲ್ಲ. ಸಹ್ಯಾದ್ರಿಯ ಗುಡ್ಡದ ಸಾಲುಗಳು ಇದರಲ್ಲಿಯ ಆರ್ದ್ರತೆಯನ್ನು ಹೀರಿಕೊಳ್ಳುತ್ತವೆ. ಸಮುದ್ರದಿಂದ ಬಂದಂಥ ಆರ್ದ್ರತೆಗೂಡಿದ ಹವೆಯು ಗುಡ್ಡಗಳಿದ್ದ ಪ್ರದೇಶಕ್ಕೆ ಬಂದ ಕೂಡಲೆ ಗುಡ್ಡಗಳಿಗೆ ಬಡಿದು ಮೇಲಕ್ಕೇರುತ್ತದೆ. ಈ ಸಮಯದಲ್ಲಿ ಈ ಗಾಳಿಯು ತಂಪಾಗುತ್ತದೆ. ತಂಪಾದ ಕೂಡಲೆ ಅದರಲ್ಲಿರುವ ನೀರಿನ ಉಗಿಯು ಮಳೆಯ ರೂಪದಿಂದ ಅಲ್ಲೇ ಬೀಳುತ್ತದೆ. ಗಾಳಿಯಲ್ಲಿ ನೀರಿನ ಉಗಿಯು ಹೆಚ್ಚು ಇದ್ದ ಮಾನದಿಂದಲೂ ಈ ಗಾಳಿಯು ಏರಬೇಕಾದ ಪರ್ವತಗಳ ಎತ್ತರದ ಮಾನದಿಂದಲೂ ಮಳೆಯು ಹೆಚ್ಚಾಗಿ ಸುರಿಯುವದೆಂದು ಹೇಳುವ ಅವಶ್ಯವಿಲ್ಲ.

ಇನ್ನು, ಧಾರವಾಡ ಜಿಲ್ಹೆಯ ಯಾವ ಭಾಗದಲ್ಲಿ ಹೆಚ್ಚು ಮಳೆಗರೆಯುವದೆಂಬದನ್ನು ಸುಲಭವಾಗಿ ಊಹಿಸಬಹುದು. ಮಲ್ನಾಡದಲ್ಲಿ ಮಳೆ ಹೆಚ್ಚು; ಗಡಿನಾಡಿನಲ್ಲಿ ಕಡಿಮೆ; ಬೈಲುಪ್ರದೇಶದಲ್ಲಿ ತೀರ ಕಡಿಮೆ. ಅಕ್ಟೋಬರ ತಿಂಗಳಲ್ಲಿ ಮಳೆಗಾಲದ (ಮಾನ್ಸೂನ) ಗಾಳಿಗಳು ಹಿಮಾಲಯದಿಂದ ಹಿಂದಿರುಗಿ ಮುಂದೆ ಮೂರು ತಿಂಗಳವರೆಗೆ ಈಶಾನ್ಯದ ಗಾಳಿಗಳಾಗಿ, ಬಂಗಾಲದ ಉಪಸಾಗರದ ಮೇಲಿಂದ ಹಾಯಿದು, ಗೋದಾವರೀ ನದಿಯ ಮುಖದಿಂದ ಕನ್ಯಾಕುಮಾರಿಯ ಭೂಶಿರದವರೆಗೆ ಹಬ್ಬಿದ ದಂಡೆಯ ಪ್ರದೇಶದ ಮೇಲೆಯೂ ಒಳಭಾಗದ ಮೇಲೆಯೂ ಬೀಸಿ, ಆ ಪ್ರದೇಶಗಳಿಗೆ ಮಳೆಯನ್ನು ತರುತ್ತವೆ. ಧಾರವಾಡಜಿಲ್ಹೆಗೆ ಈ ಗಾಳಿಗಳಿಂದಲೂ ಮಳೆಯು ದೊರೆಯುತ್ತದೆ. ಅಕ್ಟೋಬರ, ನವಂಬರ, ದಶಂಬರ ತಿಂಗಳುಗಳಲ್ಲಿ ಬೀಳುವ ಮಳೆಗಳನ್ನು ಈ ಈಶಾನ್ಯದಿಕ್ಕಿನಿಂದ ಬೀಸುವ ಗಾಳಿ

ಗಳು ತೆರುತ್ತವೆ. ಹಿಂಗಾರಿಯ ಮಳೆಗಳು ಪೂರ್ವಕ್ಕಿರುವ ತಾಲೂಕುಗಳಲ್ಲಿ ಹೆಚ್ಚಾಗಿ ಆಗುವವೆಂಬುದು ಎಲ್ಲರಿಗೂ ಗೊತ್ತಿದ್ದದ್ದು. ಅಂತೂ ಇಡೀ ಮುಂಬಯಿ ಇಲಾಖೆಯಲ್ಲಿ ಇವೆರಡೂ ಮಳೆಗಳಾಗುವದಕ್ಕೆ ಅನುಕೂಲವಾದ ಜಿಲ್ಹೆಯು ಇದೊಂದೇ ಇರುತ್ತದೆ. ಅದರಿಂದಲೇ ಈ ಜಿಲ್ಹೆಯಲ್ಲಿ ಮಳೆಗಾಲವು ಜೂನದಿಂದ ಡಶಂಬರದವರೆಗೆ ಇರುತ್ತದೆ. ರೋಣ, ರಾಣೀಬಿನ್ನೂರು ತಾಲೂಕುಗಳಲ್ಲಿ ಎರಡೂ ಮಳೆಗಳು ಬೀಳುತ್ತವೆ. ಮಲ್ಲಾಡದಲ್ಲಿಯೂ ಗಡಿನಾಡಿನಲ್ಲಿಯೂ ಮುಂಗಾರಿಯ ಮಳೆಯು ಹೆಚ್ಚು ಕಸುವಿನಿಂದ ನಿಯಮಿತ ಕಾಲಕ್ಕೆ ಬೀಳುತ್ತದೆ. ಇಲ್ಲಿ ಹಿಂಗಾರಿಯ ಮಳೆಯು ಅಷ್ಟು ನಿಯಮಿತವಾದದ್ದಲ್ಲ. ಬೈಲುಸೀಮೆಯಲ್ಲಿ ಮಾತ್ರ ಹಿಂಗಾರಿಯ ಮಳೆಗಿಂತ ಮುಂಗಾರಿಯ ಮಳೆಯು ಹೆಚ್ಚು ಅನಿಯಮಿತವಾದದ್ದು. ಒಕ್ಕಲಿಗರು ಅಲ್ಲಿ ಹಿಂಗಾರಿಯ ಮಳೆಯನ್ನು ನಂಬಿದಷ್ಟು ಮುಂಗಾರಿಯ ಮಳೆಯನ್ನು ನಂಬುವದಿಲ್ಲ. ಆದರೆ ಎಲ್ಲ ಕಡೆಯಲ್ಲಿ ಕೆರೆಬಾವಿಗಳಿಗೆ ಹಿಂಗಾರಿಯ ಮಳೆಯಿಂದಲೇ ನೀರು ಬರುವದು ವಿಶೇಷ. ಹೊಳೆಗಳು ಮುಂಗಾರಿಯ ಮಳೆಯಿಂದ ತುಂಬುತ್ತವೆ. ಯಾಕಂದರೆ, ಅದು ಹೊಳೆಗಳ ಉಗಮಸ್ಥಳಗಳಿದ್ದಂಥ ಮಲ್ಲಾಡದಲ್ಲಿ ವಿಶೇಷವಾಗಿ ಬೀಳುತ್ತದೆ.

ಧಾರವಾಡ ಜಿಲ್ಹೆಯಲ್ಲಿ ಬೇರೆ ಬೇರೆ ತಾಲೂಕುಗಳಲ್ಲಿ ಬೀಳುವ ಮಳೆಯ ಸರಾಸರಿಯ ಪಟ್ಟಿಯನ್ನು ಕೆಳಗೆ ಕೊಟ್ಟಿರುತ್ತೇವೆ:—

ಧಾರವಾಡ	೩೪	ಇಂಚುಗಳು
ಹುಬ್ಬಳ್ಳಿ	೨೯	,,
ಕಲಘಟಗಿ	೩೬	,,
ಬಂಕಾಪುರ	೨೮	,,
ಹಾನಗಲ್ಲು	೩೭	,,
ಹಿರೇಕೆರೂರು	೨೨	,,
ರಾಣೀಬಿನ್ನೂರು	೨೪	,,
ಹಾವೇರಿ	೩೦	,,
ಗದಗು	೨೫	,,
ಮುಂಡರಗಿ	೧೯$\frac{೧}{೨}$	,,
ನವಲಗುಂದ	೨೪	,,
ರೋಣ	೨೩	,,

ಈ ಎಲ್ಲ ತಾಲೂಕುಗಳಲ್ಲಿ ಮಳೆಯ ಸರಾಸರಿ ಮಾನವು ೩೩ ಇಂಚು ಇರುವದು.

ಜುಲೈ ತಿಂಗಳಲ್ಲಿ ಎಲ್ಲಕ್ಕೂ ಹೆಚ್ಚು ಮಳೆಯು, ಅಂದರೆ ೬ ಇಂಚಿನವರೆಗೆ ಬೀಳುವದು; ಫೇಬ್ರುವರಿಯಲ್ಲಿ ಎಲ್ಲಕ್ಕೂ ಕಡಿಮೆ ಅಂದರೆ ೧/೨ ಇಂಚಿಗಿಂತಲೂ ಕಡಿಮೆ ಬೀಳುವದು.

ಒಂದು ಇಂಚು ಮಳೆಯೆಂದರೆ, ಒಂದು ಪ್ರದೇಶದಲ್ಲಿ ಬಿದ್ದನೀರು ಭೂಮಿಯಲ್ಲಿ ಇಂಗದಿದ್ದರೆ ಒಂದು ಇಂಚು ಎತ್ತರ ನಿಲ್ಲುವದೆಂಬರ್ಥವು.

ಗಾಳಿಗಳು ಬೀಸುವ ದಿಕ್ಕುಗಳು:— ಧಾರವಾಡ ಜಿಲ್ಹೆಯಲ್ಲಿ ಮುಖ್ಯವಾಗಿ ಪಶ್ಚಿಮದ ಕಡೆಯಿಂದಲೂ, ನೈಋತ್ಯದ ಕಡೆಯಿಂದಲೂ, ಗಾಳಿಗಳು ಬೀಸುತ್ತವೆ. ನವಂಬರ, ದಶಂಬರ ತಿಂಗಳುಗಳಲ್ಲಿ ಮಾತ್ರ ಮೂಡಣಗಾಳಿಗಳು ಬೀಸುವವು. ಪಶ್ಚಿಮದಿಂದ ಬೀಸುವಗಾಳಿಗಳು ಸಮುದ್ರದಿಂದ ಬರುವದರಿಂದ ಬೇಸಿಗೆಯಲ್ಲಿ ತಂಪಾಗಿಯೂ ಚಳಿಗಾಲದಲ್ಲಿ ಉಷ್ಣವಾಗಿಯೂ ಇರುತ್ತವೆ. ಆದ್ದರಿಂದ ಇವು ಬೇಸಿಗೆಯ ಸೆಕೆಯನ್ನೂ ಚಳಿಗಾಲದ ಚಳಿಯನ್ನೂ ಕಡಿಮೆಮಾಡುತ್ತವೆ. ದಶಂಬರ ತಿಂಗಳಲ್ಲಿಯೂ ಜನವರಿ ತಿಂಗಳಲ್ಲಿಯೂ ಮಂಜು-ಇಬ್ಬನ್ನಿಗಳು ಬಹಳ.

ಇಲ್ಲಿ ವರ್ಷವನ್ನು ೫ ಕಾಲಗಳಾಗಿ ವಿಭಾಗಿಸಬಹುದು. ಎಪ್ರಿಲ ತಿಂಗಳ ಮಧ್ಯದಿಂದ ಜೂನತಿಂಗಳ ಆರಂಭದವರೆಗೆ ನಿಂತು ನಿಂತು ಮಳೆಗಳಾಗುವವು; ಜೂನದಿಂದ ಅಕ್ಟೋಬರದ ವರೆಗೆ ಪಶ್ಚಿಮದ ಗಾಳಿಯು ಬೀಸುವದು; ಇದು ನಿಜವಾದ ಮಳೆಗಾಲವು. ಅಕ್ಟೋಬರ, ನವಂಬರ ತಿಂಗಳಲ್ಲಿ ಪೂರ್ವದ ಗಾಳಿಯು ನಿಂತು ನಿಂತು ಮಳೆಯನ್ನು ಕರೆಯುವದು; ದಶಂಬರ, ಜನವರಿ ಹಾಗೂ ಫೇಬ್ರುವರಿಯ ಮಧ್ಯದ ವರೆಗೆ ಚಳಿಗಾಲವು; ಫೇಬ್ರುವರಿಯಿಂದ ಎಪ್ರಿಲ ತಿಂಗಳ ಮಧ್ಯದವರೆಗೆ ಬೇಸಿಗೆಯು. ಚಳಿಗಾಲದಲ್ಲಿ ಚಳಿಗೂಡಿದ ಮೂಡಣಗಾಳಿಗಳು ನಿರ್ದಯವಾಗಿ ಬೀಸುತ್ತವೆ. ಎಪ್ರಿಲದ ಮಧ್ಯದಲ್ಲಿ ಇವು ಕಡಿಮೆಯಾಗುತ್ತವೆ. ಸಾಯಂಕಾಲದಲ್ಲಿ ಪಶ್ಚಿಮದ ತಂಗಾಳಿಯು ಸುಳಿಯಲಾರಂಭಿಸಿ, ಹಗಲಿನ ಉಷ್ಣತೆಯನ್ನು ಕಡಿಮೆ ಮಾಡಿ, ರಾತ್ರಿಯ ತಾಪವನ್ನು ಹಿಂಗಿಸುತ್ತದೆ. ಪೂರ್ವ-ಪಶ್ಚಿಮ ಗಾಳಿಗಳ ಸಂಧಿಸಮಯದಲ್ಲಿ, ಅಂದರೆ ಮಾರ್ಚದ ಕೊನೆಗೆ ಹಾಗೂ ಎಪ್ರಿಲದ ಪ್ರಾರಂಭಕ್ಕೆ ಸುಂಟರ ಗಾಳಿಗಳು ಬಹಳ. ಅಂತೂ,

ಎಲ್ಲ ದೃಷ್ಟಿಯಿಂದ ನೋಡಿದರೆ, ಧಾರವಾಡ ಜಿಲ್ಹೆಯ ಹವೆಯು ಬಹಳ ಹಿತಕರವಾದದ್ದು. ಮುಂಬಯಿ ಇಲಾಖೆಯಲ್ಲಿ ಇಷ್ಟು ಸೊಗಸಾದ ಹವೆಯು ಬೇರೆ ಯಾವ ಜಿಲ್ಹೆಯಲ್ಲಿಯೂ ಇಲ್ಲವೆಂದು ಹೇಳಬಹುದು. ಇಲ್ಲಿಯಾದರೂ ಮಲ್ಲಾಡದ ಹಾಗೂ ಬೈಲುಸೀಮೆಗಳ ನಡುವಿರುವ ಗಡಿನಾಡಿನ ಹವೆಯು ಮೇಲಾದದ್ದು. ಧಾರವಾಡ ಪಟ್ಟಣದ ಪಶ್ಚಿಮಕ್ಕಿರುವ ಭಾಗದಲ್ಲಿಯೂ, ಕಲಘಟಗಿ, ಬಂಕಾಪುರ, ಹಾನಗಲ್ಲ, ಕೋಡ ತಾಲೂಕುಗಳಲ್ಲಿಯೂ ಸ್ವಲ್ಪ ತಂಪು ಹೆಚ್ಚು. ನವಲಗುಂದ, ರೋಣ, ಗದಗ ತಾಲೂಕುಗಳಲ್ಲಿ ಸೆಕೆ ಬಹಳ. ಧಾರವಾಡದ ಪೂರ್ವಭಾಗ, ಹುಬ್ಬಳ್ಳಿ, ಕರ್ಜಗಿ, ರಾಣೇಬಿನ್ನೂರ ತಾಲೂಕುಗಳ ಹವೆಯು ಸೊಗಸಾದದ್ದು.

ಒಟ್ಟಿನ ಮೇಲೆ ಧಾರವಾಡ ಜಿಲ್ಹೆಯ ಹವೆಯು ಸೊಗಸಾದದ್ದೆಂದು ಹೇಳಿರುವೆವಷ್ಟೇ. ಮಲ್ಲಾಡದ ಹವೆಯು ಬೇಸಿಗೆಯಲ್ಲಿ ಮಾತ್ರ ಸುಖಕರವಾಗಿರುತ್ತದೆ; ಚಳಿಗಾಲದಲ್ಲಿಯೂ ಮಳೆಗಾಲದಲ್ಲಿಯೂ ಅನಾರೋಗ್ಯವಾದದ್ದು. ಇದರಲ್ಲಿ ತೇವು ಬಹಳ ಇರುವದು. ಇದಲ್ಲದೆ ನೀರು ನಿರ್ಮಲವಲ್ಲ. ಈ ಪ್ರದೇಶದಲ್ಲಿ ಗಿಡಗಂಟಿಗಳು ಬಹಳ ಇರುವದರಿಂದ ಎಲೆ, ಬೇರು ಮುಂತಾದ ವೃಕ್ಷಾವಯವಗಳು ನೀರೊಳಗೆ ಬಿದ್ದು ಕೊಳೆತು ಕೃಮಿಗಳನ್ನುಂಟು ಮಾಡುತ್ತವೆ. ಆ ಕೃಮಿಗಳು ಮನುಷ್ಯರ ಆರೋಗ್ಯವನ್ನು ಬಹು ಬೇಗ ಕೆಡಿಸುವವು. ಈ ಹವೆಯಲ್ಲಿ ಬೇಸಿಗೆಯನ್ನು ಬಿಟ್ಟು ಉಳಿದ ಕಾಲದಲ್ಲಿ ಚಳಿಜ್ವರದ ಬಾಧೆ ಬಹಳ. ಹೊರಕಡೆ, ನೀರಗಂಟು ಮುಂತಾದ ರೋಗಗಳು ಬಹುತರ ತಪ್ಪುವದಿಲ್ಲ. ವರ್ಷದೊಳಗೆ ಒಮ್ಮೆಯಾದರೂ ಬೇನೆ ಬೀಳದಂಥ ಮನುಷ್ಯನನ್ನು ಕಾಣುವದು ಅಪರೂಪ.

ಆರೋಗ್ಯದ ಮಾನದಿಂದ ನೋಡಿದರೆ, ಬೈಲುಸೀಮೆಯಷ್ಟು ಆರೋಗ್ಯವಾದ ಹವೆಯು ಇನ್ನೆಲ್ಲಿಯೂ ಇಲ್ಲೆಂಬದು ಅನುಭವದಿಂದ ಗೊತ್ತಾಗುವದು. ಅಲ್ಲಿಯ ಹವೆಯಲ್ಲಿ ಆರ್ದ್ರತ್ವವು ಬಹುತರ ಇರುವದಿಲ್ಲ. ಒಣ ಹವೆಯು ಶರೀರಕ್ಕೆ ಬಹಳ ಹಿತಕರವಾದದ್ದು. ಈ ಹವೆಯಲ್ಲಿ ತಡಮಾಡಿ ಉಂಡರೂ, ಸ್ವಲ್ಪ ಹೆಚ್ಚು ಕಡಿಮೆ ಆಹಾರ ತಕ್ಕೊಂಡರೂ, ಶ್ರಮ ಮಾಡದಿದ್ದರೂ ತಡೆಯುತ್ತದೆ. ಜನರು ವಾಡಿಕೆಯಾಗಿ ನಿರೋಗಿಗಳಿರುವರು. ವೇಳೆವೇಳೆಗೆ ಹಸಿವೆ ತಪ್ಪುವದಿಲ್ಲ. ಆದರೆ, ಈ ಭಾಗದಲ್ಲಿ ಮಾರೀ ಬೇನೆಯ

ಉಪದ್ರವು ಬಹಳ. ಬೇಸಿಗೆಯಲ್ಲಿ ಒಮ್ಮೆ ಈ ರೋಗವು ಪ್ರಾರಂಭಿಸಿದರೆ ಒಳಿತಾಗಿ ಮಳೆ ಬೀಳುವವರೆಗೆ ಕಡಿಮೆಯಾಗುವದಿಲ್ಲ. ಈ ಹವೆಯು ಈ ಮೇರೆಗೆ ಒಟ್ಟಿನ ಮೇಲೆ ಆರೋಗ್ಯಕರವಾದದ್ದಿದ್ದರೂ ಉಷ್ಣತೆಯ ಮೂಲಕ ಶ್ರಮಬಟ್ಟು ದುಡಿಯುವದಕ್ಕೆ ತಕ್ಕದ್ದಾಗಿರುವದಿಲ್ಲ.

ಇವೆರಡು ಪ್ರದೇಶಗಳ ಮಧ್ಯದಲ್ಲಿರುವ ಗಡಿನಾಡಿನ ಪ್ರದೇಶಕ್ಕೆ ಎರಡೂ ಹವೆಗಳಲ್ಲಿಯ ಗುಣಗಳು ಇವೆ. ಇಲ್ಲಿಯ ಹವೆಯು ಮಲ್ನಾಡ ದಷ್ಟು ತೇವುಳ್ಳದ್ದಲ್ಲ; ಬೈಲುಸೀಮೆಯಷ್ಟು ಒಣಹವೆಯಲ್ಲ. ಇಲ್ಲಿ ಮಾರೀ ಬೇನೆ ಮೊದಲಾದ ರೋಗಗಳು ಕಡಿಮೆ; ಹುಟ್ಟಿದರೂ ಬೇಗ ತಣ್ಣಗಾ ಗುತ್ತವೆ. ಚಳಿಜ್ವರ, ನೆಗಡಿ, ಕೆಮ್ಮು, ಅಜೀರ್ಣ ಮುಂತಾದ ರೋಗಗ ಳಿಗೆ ತಕ್ಕಮಟ್ಟಿಗೆ ಹೆದರಿ ನಡೆಯಬೇಕಾಗುತ್ತದೆ. ಇಲ್ಲಿಯ ಜನರು ಶ್ರಮವನ್ನು ಮಾಡುವವರಾಗಿದ್ದಾರೆ.

ಮಲ್ನಾಡದಲ್ಲಿಯೂ ಗಡಿನಾಡಿನಲ್ಲಿಯೂ ತಕ್ಕಮಟ್ಟಿಗೆ ಮಳೆಯು ಹೆಚ್ಚಾಗಿ ಬೀಳುವದರಿಂದಲೂ, ಹವೆಯಲ್ಲಿ ಯಾವಾಗಲೂ ಆರ್ದ್ರತೆ ಇರುವ ದರಿಂದಲೂ ವರ್ಷದಲ್ಲಿ ಏಳೆಂಟು ತಿಂಗಳ ವರೆಗೆ ಹುಲ್ಲು, ಕಂಟಿಗಳಿಂದ ಭೂಮಿಯು ಹಚ್ಚಗಿರುತ್ತದೆ. ಗಿಡಗಳಾದರೂ ಚನ್ನಾಗಿ ಬೆಳೆಯುತ್ತವೆ. ಪಶ್ಚಿಮಕ್ಕೆ ಹೋದಂತೆ ಕಿರಿದಾದ ಅಡವಿಗಳು ಹಬ್ಬಿರುತ್ತವೆ. ಆದರೆ, ಬೈಲುಸೀಮೆಗಳಲ್ಲಿ ಮಳೆಯು ಕಡಿಮೆ ಬೀಳುವದರಿಂದಲೂ, ಹವೆಯಲ್ಲಿ ಆರ್ದ್ರತೆ ಇಲ್ಲದ್ದರಿಂದಲೂ ವನಸ್ಪತಿಗಳೂ ವೃಕ್ಷಗಳೂ ಅಪರೂಪ. ಬೇವು, ಅರಳೆ, ಜಾಲಿ ಇಂಥ ಮರಗಳು ಅಲ್ಲಲ್ಲಿ ಒಂದೆರಡಿದ್ದರೆ ಸುದೈವ. ಅಡವಿಗಳು ಬಹು ಕಡಿಮೆ; ಅವುಗಳಲ್ಲಿಯೂ ದಟ್ಟಾದ ನೆರಳು ದುರ್ಲಭ ವಾದದ್ದು.

೫ನೇ ಪ್ರಕರಣ.

ಭೂಮಿಯ ಗುಣವೂ ಹುಟ್ಟುವಳಿಯೂ

(ಅ) ಭೂಮಿಯಗುಣ:—

ಹಿಂದೆ, ಧಾರವಾಡ ಜಿಲ್ಲೆಯ ಸ್ವಾಭಾವಿಕಲಕ್ಷಣಗಳಬಗ್ಗೆ ಹೇಳು ವಾಗ ಅದರಲ್ಲಿ ಮೂರು ವಿಭಾಗಗಳನ್ನು ಮಾಡಿ, ಒಂದು ಭಾಗದಲ್ಲಿ ಕೆಂಪು ಮಣ್ಣಿನ ಭೂಮಿಯೂ, ಮತ್ತೊಂದು ಭಾಗದಲ್ಲಿ ಕರೇಮಣ್ಣಿನ ಭೂಮಿಯೂ,

ಕೆಲವು ಸ್ಥಳಗಳಲ್ಲಿ ಕಂದುಬಣ್ಣದ ಭೂಮಿಯೂ ಇರುವದೆಂದು ಬರೆದಿದ್ದೇವೆ. ಸಾಮಾನ್ಯವಾಗಿ ಮಲ್ಲಾಡದಲ್ಲಿ ಕೆಂಪುಬಣ್ಣದ ಭೂಮಿಯು ಬಹಳ; ಬೈಲು ಸೀಮೆಯಲ್ಲಿ ಕಪ್ಪುಮಣ್ಣಿನ ಭೂಮಿಯೇ ವಿಶೇಷ; ಗಡಿನಾಡಿನಲ್ಲಿ ಕೆಲವೆಡೆಯಲ್ಲಿ ಕೆಂಪುಮಣ್ಣಿನ ಭೂಮಿಯೂ ಕೆಲವು ಭಾಗಗಳಲ್ಲಿ ಕಪ್ಪುಮಣ್ಣಿನ ಭೂಮಿಯೂ ಇರುವವು. ಕಂದುಬಣ್ಣದ ಭೂಮಿಯನ್ನು ಎಲ್ಲ ಭಾಗಗಳಲ್ಲಿಯೂ ಕಾಣಬಹುದು.

ಕಪ್ಪುಭೂಮಿಗೂ ಕೆಂಪುಭೂಮಿಗೂ ಇರುವ ವ್ಯತ್ಯಾಸವೇನು? ಉತ್ತಮವಾದ ಕೆಂಪುಭೂಮಿಯನ್ನು ಪೃಥಕ್ಕರಿಸಿ, ಅದರ ರಸಾಯನ-ಘಟಕಗಳನ್ನೂ, ಕಪ್ಪುಭೂಮಿಯ ರಸಾಯನ-ಘಟಕಗಳನ್ನೂ ಹೋಲಿಸಿ ನೋಡಿದರೆ, ವಿಶೇಷ ವ್ಯತ್ಯಾಸವು ತೋರಲಾರದು. ಎರಡೂ ತರದ ಭೂಮಿಗಳಲ್ಲಿ ವನಸ್ಪತಿಗಳ ಆಹಾರಕ್ಕೆ ಬೇಕಾಗುವ ಪೋಷಕದ್ರವ್ಯಗಳು ಬಹುಶಃ ಸಮನಾಗಿರಬಹುದು. ಕೆಂಪುಭೂಮಿಯು ಕೆಲವು ಪೈರುಗಳಿಗೆ ಉತ್ತಮವಾದದ್ದಿದ್ದು, ಕಪ್ಪುಭೂಮಿಯು ಬೇರೆ ಪೈರುಗಳಿಗೆ ಉತ್ತಮವಾದದ್ದಿರುವದು. ಕಂದುಬಣ್ಣದ ಭೂಮಿಯಾದರೂ ಇವುಗಳ ಮಿಶ್ರಣದಿಂದ ಉಂಟಾದ್ದರಿಂದ ಅದನ್ನು ಉತ್ತಮಭೂಮಿಯೆಂದೇ ಎಣಿಸಬಹುದು.

ಆದರೆ, ಧಾರವಾಡ ಜಿಲ್ಲೆಯಲ್ಲಿ ಉತ್ತಮವಾದ ಕೆಂಪುಮಣ್ಣಿನ ಭೂಮಿಯು ಅಪರೂಪವಾಗಿರುತ್ತದೆ. ಉಸುಕು ಅಥವಾ ಗರಸು ಕೂಡಿದ ಕೆಂಪುಮಣ್ಣಿನ ಭೂಮಿಯೇ ವಿಶೇಷ. ಈ ಭೂಮಿಯು ಬಹುಶಃ ಗುಡ್ಡಗಳು ಇಲ್ಲವೆ ಭೂಮಿಯ ಪೃಷ್ಠಭಾಗದ ಬಂಡೆಗಳು ಸವೆದದ್ದರಿಂದ ಉಂಟಾಗಿರುವದು. ಕಪ್ಪುಭೂಮಿಯಲ್ಲಿ ಉಸುಕು-ಗರಸುಗಳ ಮಿಶ್ರಣವಿರುವದಿಲ್ಲ. ಇಂಥ ಕೆಂಪುಭೂಮಿಗಿಂತ ಕಪ್ಪುಭೂಮಿಯು ಹೆಚ್ಚು ಕಸುವುಳ್ಳದ್ದಿರುತ್ತದೆ. ಇಂಥ ಕೆಂಪುಭೂಮಿಯು ಬಹಳ ಗೊಬ್ಬರವನ್ನು ಬೇಡುವದು. ಕಪ್ಪುಭೂಮಿಗೆ ಗೊಬ್ಬರದ ಅವಶ್ಯಕತೆ ಇಲ್ಲ. ಕಪ್ಪುಭೂಮಿಯಲ್ಲಿ ಆರ್ದ್ರತೆಯನ್ನು, ಅಂದರೆ ತೇವನ್ನು ಹಿಡಿದಿಡುವ ಗುಣವುಂಟು; ಕೆಂಪುಭೂಮಿಯಲ್ಲಿ ಈ ಗುಣವು ಬಹು ಸ್ವಲ್ಪ; ಇಲ್ಲೆಂದರೂ ತಪ್ಪಾಗದು. ಚನ್ನಾಗಿ ಮಳೆಗರೆಯದಿದ್ದರೆ ಕೆಂಪುಮಣ್ಣಿನ ಭೂಮಿಯಲ್ಲಿ ಬೆಳೆಬರುವದು ಅಪರೂಪ. ಕರೇಮಣ್ಣಿನ ಭೂಮಿಗೆ ಇಷ್ಟು

ಮಳೆಯು ಬೇಕಾಗುವದಿಲ್ಲ. ಬಹಳ ಮಳೆಯಾದರೆ ಇದಕ್ಕೆ ಹಾನಿಯೇ ಆಗುವದು. ಕರೆಮಣ್ಣಿನ ಭೂಮಿಯನ್ನು ಸಾಗುಮಾಡಲಿಕ್ಕೆ ಶ್ರಮವೂ ಖರ್ಚೂ ಕಡಿಮೆ. ಇದನ್ನು ವರ್ಷಕ್ಕೊಮ್ಮೆ ರಂಟೆಹೊಡೆದರೆ ತೀರಿತು. ಬೇಸಿಗೆಯಲ್ಲಿ ಈ ಭೂಮಿಯು ಬಿರಿಯುತ್ತದೆ. ಆ ಮೇಲೆ ಒಮ್ಮೆ ಮಳೆ ಬಿದ್ದರೆ ಪೈರುಗಳು ಉಪಯೋಗಿಸಿದ ಮಣ್ಣು ಈ ಹೊದರುಗಳಲ್ಲಿ ಸೇರುತ್ತದೆ. ಹೊಸಮಣ್ಣು ಮೇಲೆ ಬಂದು ಒಕ್ಕಲಿಗನ ಶ್ರಮವನ್ನು ಉಳಿಸುತ್ತದೆ. ಆ ಮೇಲೆ ಭೂಮಿಯನ್ನು ಒಮ್ಮೆ ಕುಂಟೆಹೊಡೆದರೆ ಸಾಕು. ಆದರೆ ಈ ಭೂಮಿಯಲ್ಲಿ ನಟ್ಟು ಬೆಳೆಯುವದು ಬಹಳ. ಇದನ್ನು ತೆಗೆಯುವದಕ್ಕೋಸ್ಕರ ನಡುವೆ ರಂಟೆ ಹೊಡೆಯಬೇಕಾಗುತ್ತದೆ; ಇಲ್ಲವೆ ನಟ್ಟು ಕಡಿಯಬೇಕಾಗುತ್ತದೆ. ಕೆಂಪುಮಣ್ಣಿನ ಭೂಮಿಯಲ್ಲಿ ವರ್ಷದಲ್ಲಿ ಏನಿಲ್ಲೆಂದರೂ ಮೂರು ನಾಲ್ಕು ಸಾರೆ ರಂಟೆಹೊಡೆಯುತ್ತಾರೆ.

ಕಪ್ಪುಮಣ್ಣಿನ ಭೂಮಿಯಲ್ಲಿ ಹತ್ತಿಯ ಪೈರು ಬಹಳ ಕಸುವಿನಿಂದ ಬೆಳೆಯುವದರಿಂದ ಇದಕ್ಕೆ ಹತ್ತಿಯ ಭೂಮಿಯೆಂಬ ಹೆಸರು ಬಂದಿದೆ. ಇದಲ್ಲದೆ ಜೋಳ, ಗೋದಿ, ಕಡ್ಲೆ, ಎಣ್ಣೇಕಾಳುಗಳು ಮೊದಲಾದ ಒಣ ಧಾನ್ಯಗಳನ್ನೂ ಈ ಭೂಮಿಗಳಲ್ಲಿ ಬೆಳೆಸುತ್ತಾರೆ.

ಕೆಂಪುಮಣ್ಣಿನ ಭೂಮಿಯು ಬತ್ತದ ಪೈರಿಗೆ ಮೇಲಾದದ್ದು. ನೀರಿನ ಪೂರೈಕೆಯಿದ್ದಲ್ಲಿ ಬತ್ತ ಕಬ್ಬು ಮೊದಲಾದ ಹಸಿಪೈರುಗಳನ್ನು ಈ ಭೂಮಿಯಲ್ಲಿ ಬೆಳೆಸುವದುಂಟು.

ಕಂದುಬಣ್ಣದ ಭೂಮಿಯಲ್ಲಿ ಇವೆರಡೂ ಪೈರುಗಳನ್ನು ಬೆಳಸಲಿಕ್ಕೆ ಬರುವದು. ಈ ಭೂಮಿಯು ಸಾಮಾನ್ಯವಾದ ಕೆಂಪುಭೂಮಿಗಿಂತ ಮೇಲಾದದ್ದಿರುವದು.

ಧಾರವಾಡ ಜಿಲ್ಹೆಯ ತೀರ ಪಶ್ಚಿಮಕ್ಕೆ ಕಂದುಬಣ್ಣದ ಭೂಮಿಗಳು ಕೆಲವೆಡೆಗಳಲ್ಲಿ ಉಂಟು. ಇವಾದರೂ ಕಸುವುಳ್ಳ ಭೂಮಿಗಳೇ. ಇವಿರುವ ಸ್ಥಳಗಳಲ್ಲಿ ಹಿಂದೆ ಅಡವಿಗಳಿದ್ದವೆಂದು ಹೇಳುವರು. ಇವು ಮುಖ್ಯವಾಗಿ ವನಸ್ಪತಿಗಳಿಂದ ಹುಟ್ಟಿದ ಭೂಮಿಗಳೆನ್ನುವರು. ಇವುಗಳ ಥರವು ಬಹಳ ದಪ್ಪಾಗಿಲ್ಲ.

ಧಾರವಾಡ ಜಿಲ್ಹೆಯ ಬೇರೆ ಬೇರೆ ಭಾಗಗಳಲ್ಲಿರುವ ಭೂಮಿಯ ಪ್ರಕಾರಗಳನ್ನು ಕೆಳಗಿನ ಪಟ್ಟಿಯಲ್ಲಿ ವಿವರಿಸಿದ್ದೇವೆ ಇದರಿಂದ ಹೊರಡುವ

ನಕಾಶವು ನಾವು ಸ್ವಾಭಾವಿಕ ಲಕ್ಷಣಗಳನ್ನು ಕುರಿತು ಹೇಳುವಾಗ ತೋರಿಸಿದ ನಕಾಶಕ್ಕೆ ಬಹಳವಾಗಿ ಹೋಲುವದೆಂದು ಕಂಡುಬರುವದು:—

ತಾಲೂಕು.	ಕಪ್ಪುಭೂಮಿ.	ಕೆಂಪುಭೂಮಿ.	ಕಂದು ಭೂಮಿ.
೧. ನವಲಗುಂದ. ೨. ರೋಣ.	ಎಲ್ಲ.	...	...
೩. ಧಾರವಾಡ.	ಉತ್ತರ, ಪೂರ್ವ.	ಮಿಕ್ಕದ್ದು.	...
೪. ಹುಬ್ಬಳ್ಳಿ.	ಉತ್ತರ, ಪೂರ್ವ.	ಮಿಕ್ಕದ್ದು.	...
೫ ಗದಗು.	ಎಲ್ಲ	...	...
೬. ಬಂಕಾಪುರ.	ಉತ್ತರ, ದಕ್ಷಿಣ.	ಪಶ್ಚಿಮ.	ಪೂರ್ವ
೭. ಕರ್ಜಗಿ.	ಉತ್ತರ, ಪೂರ್ವ.	ಪಶ್ಚಿಮ, ದಕ್ಷಿಣ	...
೮ ಹಾನಗಲ್ಲ.	...	ಎಲ್ಲ.	...
೯. ರೋಣ.	ಪೂರ್ವ(ಬಹಳಸ್ವಲ್ಪ)	ಮಿಕ್ಕದ್ದು.	...
೧೦. ರಾಣೇಬಿನ್ನೂರು.	ತಗ್ಗುಪ್ರದೇಶ	ಗುಡ್ಡ ಹಾಗೂ ಎತ್ತರ ಭೂಮಿ.	...
೧೧. ಕಲಘಟಗಿ.	...	ಎಲ್ಲ.	...

(ಬ) ಹುಟ್ಟುವಳಿ:—

(೧). ವನಸ್ಪತಿಗಳು.

ಒಂದು ಪ್ರದೇಶದ ಮಳೆಯ ಮಾನವನ್ನೂ ಅಲ್ಲಿಯ ಭೂಮಿಯ ಗುಣವನ್ನೂ ಅಲ್ಲಿಯ ಹವೆಯನ್ನೂ ಅಭ್ಯಾಸಿಸಿ, ಅಲ್ಲಿಯ ಹುಟ್ಟುವಳಿಯನ್ನು ಹೇಳಬಹುದು. ಯಾಕಂದರೆ, ಬೇರೆ ಬೇರೆ ಪೈರುಗಳಿಗೆ ಬೇರೆ ಬೇರೆ ಮಾನದ ಹವೆಯೂ, ಮಳೆಯ ಮಾನವೂ, ಭೂಮಿಗಳೂ ಬೇಕಾಗುತ್ತವೆ.

ಧಾರವಾಡ ಜಿಲ್ಲೆಯಲ್ಲಿ ಕೆಂಪು, ಕಪ್ಪು, ಕಂದು ಎಂಬೀ ಮೂರು ತರದ ಭೂಮಿಗಳಿರುವವೆಂದು ಹಿಂದೆ ಹೇಳಿದ್ದೇವೆ. ಇನ್ನು ಇಲ್ಲಿ ಬೆಳೆಯುವ ಮುಖ್ಯ ಪೈರುಗಳನ್ನೊಂದೊಂದಾಗಿ ಬಣ್ಣಿಸಿ, ಅವು ಆ ಭಾಗಗಳಲ್ಲಿಯೇ ಬೆಳೆಯುವದರ ಕಾರಣಗಳನ್ನು ವಿಚಾರಿಸುವಾ.

ಬತ್ತ:— ಬತ್ತದ ಪೈರಿಗೆ ನೀರು ಬಹಳಬೇಕು. ಉಷ್ಣ ಹವೆಯೂ ಬೇಕು. ಇದು ಬೆಳೆಯಲಾರಂಭಿಸಿದ ಮೇಲೆ ಕೆಲವು ಸಾರೆ ಹೊಲಗಳಿಗೆ ಚನ್ನಾಗಿ ನೀರು ಉಣಿಸಬೇಕಾಗುತ್ತದೆ. ಕೆಂಪುಭೂಮಿಯಲ್ಲಿ ಇದು ಬಹಳ ಕಸುವಿನಿಂದ ಬರುವದು. ಧಾರವಾಡ ಜಿಲ್ಲೆಯ ಮಲ್ನಾಡದಲ್ಲಿಯೂ ಗಡಿನಾಡಿನಲ್ಲಿಯೂ ಇವೆರಡೂ ಅನುಕೂಲಗಳಿರುವದರಿಂದ, ಬತ್ತವನ್ನು

ಈ ಭಾಗಗಳಲ್ಲಿ ಬಹಳವಾಗಿ ಬಿತ್ತುತ್ತಾರೆ. ಮೇ ತಿಂಗಳಲ್ಲಿ ಚನ್ನಾಗಿ ಮಳೆಯೊದರೆ, ಬತ್ತವನ್ನು ಬಿತ್ತುತ್ತಾರೆ. ಅದು ಮೊಳಕೆ ಇಡುವಷ್ಟರಲ್ಲಿ ಮಳೆಗಾಲವು ಆರಂಭವಾಗಿ, ಅದಕ್ಕೆ ಬೇಕಾದಷ್ಟು ನೀರನ್ನು ಪೂರೈಸಿಕೊಡುತ್ತದೆ. ಮೇ ತಿಂಗಳಲ್ಲಿ ಮಳೆಯಾಗದಿದ್ದರೆ, ಕೆರೆಗಳಿಂದ ಬತ್ತದ ಹೊಲಗಳಿಗೆ ನೀರನ್ನು ಹಾಯಿಸಬೇಕಾಗುತ್ತದೆ. ಮಳೆಗಾಲದಲ್ಲಿ ಸಾಕಷ್ಟು ಮಳೆಯಾಗದಿದ್ದರೆ, ಈ ಬಗೆಯಿಂದ ಇದಕ್ಕೆ ನೀರು ಪೂರೈಸಬೇಕಾಗುವದು. ಬಹುಶಃ ಬತ್ತದ ಹೊಲಗಳು ಕೆರೆಗಳ ಬದಿಯಲ್ಲಾಗಲಿ, ಸರವುಗಳ ನೆರೆಯಲ್ಲಾಗಲಿ ಇರುವವು. ಮಲ್ಲಾಡದಲ್ಲಿಯೂ, ಗಡಿನಾಡಿನಲ್ಲಿಯೂ ಮಳೆ ಬಹಳ; ಕೆರೆಗಳೂ ಅಲ್ಲಲ್ಲಿಗಿರುತ್ತವೆ. ಬತ್ತಕ್ಕೆ ಬೇಕಾದ ಕೆಂಪುಭೂಮಿಯೂ ಈ ಭಾಗದಲ್ಲಿಯೇ ವಿಶೇಷ. ಆದ್ದರಿಂದ ಧಾರವಾಡ ಜಿಲ್ಹೆಯ ಈ ಭಾಗಗಳಲ್ಲಿ ಬತ್ತದ ಪೈರು ವಿಶೇಷವಾಗಿ ಬರುವದು. ಕಲಘಟಗಿ, ಹಾನಗಲ್ಲ, ಕೋಡ ತಾಲೂಕುಗಳಲ್ಲಿ ಕೆರೆಗಳೂ ನೀರಿನ ಪೂರೈಕೆಯೂ ವಿಶೇಷವಾಗಿರುವದರಿಂದ ಇಲ್ಲಿ ಬತ್ತದ ಬೆಳೆಯೇ ವಿಶೇಷ. ಮಲ್ಲಾಡದ ತಾಲೂಕುಗಳಲ್ಲಿ ೨೩೯ ಚೌ. ಮೈಲು ಭೂಮಿಯಲ್ಲಿ ಬತ್ತವನ್ನು ಬಿತ್ತುತ್ತಾರೆ. ಇದರಲ್ಲಿ ಅರ್ಧಭೂಮಿಗೆ ಕೆರೆಹಳ್ಳಗಳಿಂದ ನೀರಿನ ಪೂರೈಕೆಯಾಗುತ್ತದೆ.

ಜೋಳ:—ಧಾರವಾಡ ಜಿಲ್ಹೆಯಲ್ಲಿ ಎಲ್ಲ ತಾಲೂಕುಗಳಲ್ಲಿಯೂ ಜೋಳದ ಪೈರು ಒಳಿತಾಗಿ ಬರುತ್ತದೆ. ಮೇಲೆ ಹೇಳಿದ ಮೂರು ತಾಲೂಕುಗಳನ್ನು ಬಿಟ್ಟು, ಉಳಿದ ಎಲ್ಲ ತಾಲೂಕುಗಳಲ್ಲಿ ಜೋಳದ ಪೈರನ್ನು ತೆಗೆದುಕೊಳ್ಳುತ್ತಾರೆ. ಈ ಜಿಲ್ಹೆಯಲ್ಲಿ ಜೋಳವೇ ಜನರ ಮುಖ್ಯ ಆಹಾರವು. ೯೦೨ ಚೌ. ಮೈಲು ಭೂಮಿಯು ಜೋಳದ ಪೈರಿನಿಂದ ತುಂಬಿರುತ್ತದೆಂದು ಗೊತ್ತಾಗಿದೆ. ಇದು ಕೆಂಪುಭೂಮಿಯಲ್ಲಿಯೂ ಕರೇಭೂಮಿಯಲ್ಲಿಯೂ ಬರುವದು. ಇದಕ್ಕೆ ಬತ್ತದಷ್ಟು ನೀರಿನ ಅವಶ್ಯಕತೆಯಿಲ್ಲ. ಕೆಂಪುಭೂಮಿಗಿಂತ ಕರೇಭೂಮಿಯಲ್ಲಿ ಕಸುವಿನಿಂದ ಬರುವದು.

ಗೋಧಿ:—ಗೋಧಿಯು ಜಿಗಟುಮಣ್ಣಿನ ಭೂಮಿಯಲ್ಲಿ ಒಳಿತಾಗಿ ಬರುತ್ತದೆ. ಆದ್ದರಿಂದ ಕಪ್ಪುಭೂಮಿಯೇ ಇದರ ಬೆಳೆಗೆ ಉತ್ತಮವಾದದ್ದು. ಕೆಂಪುಭೂಮಿಯಲ್ಲಿ ಬಹುಶಃ ಇದನ್ನು ಬಿತ್ತುವದಿಲ್ಲ. ಇದಕ್ಕೆ ನೀರು ಬಹಳ ಬೇಡ. ಬಿತ್ತಿದ ನಂತರ ಮೊಳಕೆಹಾಯ್ದ ಮೇಲೆ ಇದು ಆರ್ದ್ರತ್ವವಿಲ್ಲದ ಬೆಚ್ಚಗಿನ ಹವೆಯಲ್ಲಿ ಚನ್ನಾಗಿ ಬೆಳೆಯುವದು. ಇವೆಲ್ಲ

ಕಾರಣಗಳಿಂದ ಈ ಪೈರನ್ನು ಧಾರವಾಡ ಜಿಲ್ಲೆಯ ಪೂರ್ವಕ್ಕೂ, ಉತ್ತರಕ್ಕೂ ಇರುವ ನಾಲ್ಕೈದು ತಾಲೂಕುಗಳಲ್ಲಿ ಮಾತ್ರ ಬಹಳವಾಗಿ ಬೆಳೆಸುತ್ತಾರೆ. ನವಲಗುಂದ, ರೋಣ, ಗದಗ, ಧಾರವಾಡ, ಹುಬ್ಬಳ್ಳಿ ಇವು ಗೋದಿಗೆ ಹೆಸರಾದವುಗಳು. ೪೧೪ ಚೌ. ಮೈಲು ಭೂಮಿಯು ಈ ಪೈರಿನಿಂದ ತುಂಬಿರುತ್ತದೆಂದು ಗೊತ್ತಾಗಿದೆ.

ಕಡ್ಲೆ :—ಕಡ್ಲೆಯನ್ನು ಗೋದಿಯ ಸಂಗಡ ಇಲ್ಲವೆ ಬೇರೆಯಾಗಿ ಗೋದೀ ಬಿತ್ತುವ ಭೂಮಿಯಲ್ಲಿ ಬಿತ್ತುವರು. ಕಸುವುಳ್ಳ ಬತ್ತದ ಭೂಮಿಯಲ್ಲಿ ಸಹ ಬತ್ತದ ಪೈರು ಕೊಯ್ದ ಬಳಿಕ ಕಡ್ಲೆಯನ್ನು ಬಿತ್ತುವರು. ಈ ಪೈರಿಗೆ ನೀರು ಬಹಳ ಬೇಕಾಗುವದಿಲ್ಲ. ಇದನ್ನು ಬಿತ್ತುವದರಿಂದ ಭೂಮಿಗೆ ಕಸುವು ಬರುತ್ತದೆ. ಮಾಂಸಾಹಾರಿಗಳಲ್ಲದ ಹಿಂದೂ ಜನರಿಗೆ ಇದು ಬಹು ಪೌಷ್ಟಿಕವಾದ ಆಹಾರವು. ಕಡೆಯ ಪೈರನ್ನು ಈ ಜಿಲ್ಲೆಯಲ್ಲಿ ೩.೪೬ ಚೌ. ಮೈಲು ಭೂಮಿಯಲ್ಲಿ ಬೆಳೆಸುವರೆಂದು ಗೊತ್ತಾಗಿದೆ.

ಹತ್ತಿಯು :—ಧಾರವಾಡ ಜಿಲ್ಲೆಯಲ್ಲಿ ಮಲ್ನಾಡದ ಪ್ರದೇಶದ ಹೊರ್ತು ಉಳಿದ ಕಡೆಯಲ್ಲೆಲ್ಲ ಕರೇಭೂಮಿಯಲ್ಲಿ ಹತ್ತಿಯು ಬಹು ಸರಸಾಗಿ ಬೆಳೆಯುವದು. ಮುಂಬಯಿ ಇಲಾಖೆಯಲ್ಲಿ ಈ ಜಿಲ್ಲೆಯು ಹತ್ತಿಯ ಬಗ್ಗೆ ಹೆಸರಾದದ್ದದೆ. ಜನರ ಮುಖ್ಯಾಹಾರವಾದ ಜೋಳಕ್ಕೆ ಕೊಡುವಷ್ಟು ಭೂಮಿಯನ್ನು ಇಲ್ಲಿ ಹತ್ತಿಗೆ ಕೊಡುತ್ತಾರೆ. ಅಂದರೆ, ೮೪೪ ಚೌ. ಮೈಲು ಭೂಮಿಯಲ್ಲಿ ಹತ್ತಿಯನ್ನು ಬೆಳೆಸುತ್ತಾರೆ; ಈ ಜಿಲ್ಲೆಯಲ್ಲಿ ಜವಾರಿ ಹತ್ತಿಯನ್ನೂ, ವಿಲಾಯತೀ ಹತ್ತಿಯನ್ನೂ ಬಹಳವಾಗಿ ಬೆಳೆಸುತ್ತಾರೆ. ಇತ್ತಲಾಗಿ ವಿಲಾಯತಿಯ ಹತ್ತಿಗೆ ಚನ್ನಾಗಿ ಬೆಲೆ ಬರಹತ್ತಿದ್ದರಿಂದ, ಜೋಳಕ್ಕಿಂತ ಒಕ್ಕಲಿಗರು ಹತ್ತಿಯನ್ನು ಬಿತ್ತುವದರಲ್ಲಿ ಮನಸುಹಾಕಿದಂತೆ ತೋರುತ್ತದೆ. ಆದ್ದರಿಂದ ಈ ಜಿಲ್ಲೆಗೆ ಪೂರ್ವಕ್ಕಿದ್ದ ಜಿಲ್ಲೆಯಿಂದ ಜೋಳವು ಬರುವದು.

ಹತ್ತಿಯ ಪೈರು ಎರೇಮಣ್ಣಿನಲ್ಲಿ ಬರುವದು. ಇದಕ್ಕೆ ಬಹಳ ನೀರು ಬೇಕಾಗುವದಿಲ್ಲ. ಇದಕ್ಕೆ ಚಳಿಗಾಲದ ಪೈರೆಂದೆನ್ನಬಹುದು. ಇದಕ್ಕೆ ತೇವನ್ನು ಹಿಡಿಯುವ ಭೂಮಿಯೂ, ಬೆಚ್ಚಗಿನ ಹವೆಯೂ ಬೇಕು. ಹವೆಯಲ್ಲಿ ಬಹಳ ಆರ್ದ್ರತೆಯಿದ್ದರೆ, ಈ ಪೈರು ಚನ್ನಾಗಿ ಬರುವದಿಲ್ಲ. ಮಂಜು-ಇಬ್ಬನ್ನಿಗಳು ಇದರ ಹಗೆಗಳು.

ಶಾಲಾಪತ್ರಕ

ಪುಸ್ತಕ ೪೬ | ಮಾರ್ಚ-ಎಪ್ರೈಲ ೧೯೧೧. | ಸಂಚಿಕೆಗಳು ೩,೪.

ಧಾರವಾಡ ಜಿಲ್ಹೆಯ ವರ್ಣನೆಯು.

(ಕಳೆದ ಸಂಚಿಕೆಯಿಂದ ಮುಂದೆ ಸಾಗಿದ್ದು.)

ಕಬ್ಬು:—ಧಾರವಾಡ ಜಿಲ್ಹೆಯಲ್ಲಿ ಮಲ್ಲಾಡದ ಸೀಮೆಯಲ್ಲಿ ಬತ್ತದ ಭೂಮಿಯಲ್ಲಿ ಕಬ್ಬು ಹಚ್ಚುವರು. ಬತ್ತದಂತೆ ಇದಕ್ಕಾದರೂ ನೀರಿನ ಸಮೃದ್ಧಿಯಿರಬೇಕಾಗುವದು. ಆದ್ದರಿಂದ ಹೊಳೆಗಳ ದಂಡೆಯಲ್ಲಿಯೂ ನೀರಿನ ಜವಳು ಆಡುವ ಸ್ಥಳಗಳಲ್ಲಿಯೂ, ತೋಟಗಳಲ್ಲಿಯೂ ಕಬ್ಬಿನ ಪೈರನ್ನು ತೆಗೆದುಕೊಳ್ಳುವರು.

ಇದಲ್ಲದೆ, ಎಣ್ಣೆಯ ಕಾಳುಗಳನ್ನೂ, ಮೆಣಸಿನಕಾಯಿಗಳನ್ನೂ ಈ ಜಿಲ್ಹೆಯಲ್ಲಿ ಬಹಳವಾಗಿ ಪೈರು ಮಾಡುತ್ತಾರೆ. ಎಣ್ಣೆಯ ಕಾಳುಗಳು ಮುಖ್ಯವಾಗಿ ನವಲಗುಂದ, ರೋಣ, ಗದಗ ತಾಲೂಕುಗಳಲ್ಲಿ ಹುಟ್ಟುತ್ತವೆ.

ಧಾರವಾಡ ಜಿಲ್ಹೆಯಲ್ಲಿ ಬೇರೆ ಬೇರೆ ತಾಲೂಕುಗಳಲ್ಲಿಯ ಒಕ್ಕಲತನದ ಬಗ್ಗೆ ಕೆಳಗಿನ ಕೋಷ್ಟಕದಿಂದ ಕೆಲವು ಸಂಗತಿಗಳು ಗೊತ್ತಾಗುವವು. ಈ ಕೋಷ್ಟಕವು ೧೯೦೩-೪ ಇಸ್ವಿಯ ಬಗ್ಗೆ ಅದೆ:—

ತಾಲೂಕು.	ಒಟ್ಟು ಕ್ಷೇತ್ರ	ನಾಗು ಮಾಡಿದ ಭೂಮಿ	ನೀರಿನ ಪೂರೈಕೆ ಇದ್ದ ಭೂಮಿ.	ನಾಗು ಮಾಡಬಹುದಾದ ಭೂಮಿ.	ಅಡವಿ.
೧. ನವಲಗುಂದ. ...	೫೬೫	೫೪೧	...	೨೪	...
೨. ರೋಣ. ...	೪೩೨	೩೫೦	೧	೧೩	೨
೩. ಧಾರವಾಡ. ...	೪೩೦	೩೦೦	೭	೨೮	೪೫
೪. ಹುಬ್ಬಳ್ಳಿ. ...	೩೧೧	೨೮೨	೩.	೨೦	೬
೫. ಗದಗು ...	೬೯೯	೫೮೫	೨	೩೮	೬೦
೬. ಕಲಘಟಗಿ. ...	೨೭೫	೧೭೦	೫	೨೨	೭೫
೭. ಬಂಕಾಪುರ. ...	೩೪೪	೨೭೨	೧೩	೨೬	೩೫
೮. ಕರ್ಜಗಿ ...	೪೪೨	೩೫೨	೪	೪೪	೨೬
೯. ಹಾನಗಲ್ಲು. ...	೨೯೯	೨೧೪	೬೨	೩೬	೩೧
೧೦. ಕೋಡ ...	೪೦೦	೩೦೧	೫೯	೪೮	೩೮
೧೧. ರಾಣೇಬೆನ್ನೂರು...	೪೦೫	೨೯೬	೨	೪೩	೫೩
	೪೬೦೨	೩೬೬೩	೧೫೮	೩೪೨	೩೭೧

ಇವುಗಳಲ್ಲಿ ೧೧೯. ಚೌ. ಮೈ. ಬಗ್ಗೆ ಲೆಕ್ಕ ದೊರೆತಿಲ್ಲ.

ತೋಟದ ಪೈರುಗಳು:—ಕೆರೆ, ಹಳ್ಳ, ಅಥವಾ ಹೊಳೆಗಳಿಂದ ನೀರು ವಿಪುಲವಾಗಿ ದೊರೆಯುವ ಸ್ಥಳಗಳಲ್ಲಿ ತೋಟಗಳಿರುವದು ಸ್ವಾಭಾವಿಕವಾದದ್ದು. ಆದ್ದರಿಂದ, ಧಾರವಾಡ ಜಿಲ್ಹೆಯಲ್ಲಿಯ ಪೂರ್ವಭಾಗದಲ್ಲಿ ತೋಟದ ಭೂಮಿಗಳಿರುವದು ಅಸಂಭವವಾದದ್ದು. ದಕ್ಷಿಣದಲ್ಲಿಯೂ, ಪಶ್ಚಿಮದಲ್ಲಿಯೂ ಬಂಕಾಪುರ, ಹಾನಗಲ್ಲು, ಕರ್ಜಗಿ, ಕೋಡ, ರಾಣೇಬಿನ್ನೂರ ತಾಲೂಕುಗಳಲ್ಲಿ ಬೆಲೆಯುಳ್ಳ ಪೈರುಗಳನ್ನು ಕೊಡುವಂಥ ತೋಟಗಳಿರುತ್ತವೆ. ತೋಟಗಳ ಆದಾಯವು ಹೊಲಗಳ ಆದಾಯಕ್ಕಿಂತ ವಾಡಿಕೆಯಾಗಿ ಹೆಚ್ಚು ಇರುತ್ತದೆ. ಈ ತೋಟಗಳಲ್ಲಿ ಮುಖ್ಯವಾಗಿ ತೆಂಗು, ಅಡಿಕೆ, ಎಲೆಬಳ್ಳಿ, ಬಾಳೆ ಮುಂತಾದವುಗಳು ಹುಟ್ಟುತ್ತವೆ. ಇವಲ್ಲದೆ ಈ ಜಿಲ್ಹೆಯಲ್ಲಿ ಮಾವು, ಹಲಸು ಮೊದಲಾದ ಹಣ್ಣುಗಳ ತೋಟಗಳು ಅಲ್ಲಲ್ಲಿ ಇರುತ್ತವೆ. ದೊಡ್ಡ ದೊಡ್ಡ ಊರುಗಳ ಬದಿಯಲ್ಲಿ ಹೂವು-ಕಾಯಿಪಲ್ಲೆಗಳ ತೋಟಗಳೂ ಇರುತ್ತವೆ.

ಅಡವಿಗಳು:—ಧಾರವಾಡ ಜಿಲ್ಹೆಯ ಬೇರೆ ಬೇರೆ ತಾಲೂಕುಗಳಲ್ಲಿರುವ ಅಡವಿಗಳ ಕ್ಷೇತ್ರವನ್ನು ಹಿಂದಿನ ಕೋಷ್ಟಕದಲ್ಲಿ ಕೊಟ್ಟಿರುವೆವಷ್ಟೇ. ಮಳೆಯು ವಿಪುಲವಾಗಿ ಸುರಿಯುವ ಸ್ಥಳಗಳಲ್ಲಿ, ಮುಖ್ಯವಾಗಿ ಗುಡ್ಡಗಳ ಮೇಲೆಯೂ ನೆರೆಯಲ್ಲಿಯೂ ಅಡವಿಗಳು ಹಬ್ಬಿರುವದು ಸ್ವಾಭಾವಿಕವಾದದ್ದು. ಧಾರವಾಡ ಜಿಲ್ಹೆಯಲ್ಲಿ ಬಹುತರವಾಗಿ ಹೇಳತಕ್ಕಂಥ ಅಡವಿಗಳಿಲ್ಲ. ಇದ್ದ ಅಡವಿಗಳಲ್ಲಿ ಎರಡು ಭಾಗಗಳನ್ನು ಮಾಡಬಹುದು. ಈ ಜಿಲ್ಹೆಯಲ್ಲಿ ಪಶ್ಚಿಮಕ್ಕಿರುವ ಧಾರವಾಡ, ಕಲಘಟಗಿ, ಬಂಕಾಪುರ ಹಾನಗಲ್ಲ ತಾಲೂಕುಗಳಲ್ಲಿರುವ ಅಡವಿಯು "ಹಸಿ" ಅಂದರೆ ಗಿಡಗಳುಳ್ಳ ಅಡವಿಯು; ಇದರ ಕ್ಷೇತ್ರವು ಸುಮಾರು ೧೮೦ ಚೌ. ಮೈಲು ಇರುತ್ತದೆ. ಪೂರ್ವ ಹಾಗೂ ದಕ್ಷಿಣದಲ್ಲಿರುವ ಗದಗ, ಕರ್ಜಗಿ, ರಾಣೇಬಿನ್ನೂರ, ಕೋಡ ತಾಲೂಕುಗಳಲ್ಲಿರುವದು "ಒಣ" ಅಡವಿಯು. ಇದರ ಕ್ಷೇತ್ರವು ಸುಮಾರು ೧೬೦ ಚೌ. ಮೈಲು ಇರುತ್ತದೆ. ಹುಬ್ಬಳ್ಳಿ, ನವಲಗುಂದ, ರೋಣ ತಾಲೂಕುಗಳಲ್ಲಿ ವೃಕ್ಷಗಳೇ ದುರ್ಲಭ.

ಧಾರವಾಡ, ಕಲಘಟಗಿ ತಾಲೂಕುಗಳಲ್ಲಿರುವ ಅಡವಿಯಲ್ಲಿ ತೇಗು, ಚಂದನ, ಸಿಸುವು, ಮತ್ತಿ, ಹೊನ್ನಿ, ಹಲಸು, ದಿಂಡಲ, ಹುಣಸೆ ಮುಂತಾದ ಬೆಲೆಯುಳ್ಳ ಮರಗಳು ತಕ್ಕಮಟ್ಟಿಗೆ ಎತ್ತರವಾಗಿ ಬೆಳೆಯುತ್ತವೆ.

ಆದರೆ, ಹಾನಗಲ್ಲಿನ ಅಡವಿಯಲ್ಲಿ ಮಾತ್ರ ತೇಗು ದೊರೆಯುವದಿಲ್ಲ. ಇದಲ್ಲದೆ ಬಹಳ ಉಪಯುಕ್ತವಾದ ಬಿದರಿನ ಜಾತಿಯ ಗಿಡಗಳೂ ಹಲವುಂಟು.

ಬೈಲುಸೀಮೆಯ ಅಡವಿಗಳಲ್ಲಿ ತೇಗು, ಮತ್ತಿ, ಸಿಸುವು, ಚಂದನ ಇಂಥ ಜಾತಿಯ ಮರಗಳನ್ನು ಅಲ್ಪ ಸ್ವಲ್ಪವಾಗಿ ಕಾಣಬಹುದು. ಈ ಅಡವಿಗಳಲ್ಲಿ ಸಣ್ಣ ದೊಡ್ಡ ಎಳೆಗಳೇ ಹೊರ್ತು ತೊಲೆಗಳು ಹೊರಡುವದಿಲ್ಲ. ಬೈಲುಸೀಮೆಯ ಅಡವಿಯಲ್ಲಿ ಸಾಧಾರಣವಾಗಿ ಎಲ್ಲ ಕಡೆಯಲ್ಲಿಯೂ ದೃಷ್ಟಿಗೆ ಬೀಳುವ ವೃಕ್ಷಜಾತಿಗಳು ಜಾಲಿ, ಈಚಲ, ಬೇವು, ಬಸರಿ, ಹುಣಸೆ, ಅರಳೆ, ಆಲ, ನೀರಲ, ಬೆಳವಲ, ನೆಲ್ಲಿ, ಬೋರೆ, ಮಾವು, ಮುಶಿವಾಳ, ಹುಲಗಲಿ, ದಿಂಡಲ, ಅತ್ತಿ ಮೊದಲಾದವುಗಳು. ಈ ಅಡವಿಗಳಲ್ಲಿ ಹುಲ್ಲುಬನ್ನಿಗಳೂ ಬೇಕಾದಷ್ಟು ಅವೆ. ಧಾರವಾಡ ಜಿಲ್ಹೆಯಲ್ಲಿ ೧೯೦೩–೪ ರಲ್ಲಿ ಸರಕಾರಕ್ಕೆ ಅಡವಿಗಳಿಂದ ೩೦,೫೦೦ ರೂಪಾಯಿ ಆದಾಯವಾಯಿತು.

ತೇಗು:—ಇದರ ತೊಲೆಗಳು ಭೂಮಿಯಲ್ಲಿ ಮೇಲಾದಂಥವು. ಧಾರವಾಡ ಜಿಲ್ಹೆಯಲ್ಲಿಯ ಮರಗಳು ಬಹಳ ದೊಡ್ಡವಿರುವದಿಲ್ಲ. ೨೦೦ ಫೂಟಗಿಂತ ಎತ್ತರವಾದ ಪ್ರದೇಶದಲ್ಲಿ ಮಳೆಯು ಚೆನ್ನಾಗಿ ಕರೆಯುತ್ತಿರುವಲ್ಲಿ ಈ ಮರವು ಸರಸಾಗಿ ಬೆಳೆಯುತ್ತದೆ. ಬೀಜ ಬಿತ್ತಿ ಈ ಮರವನ್ನು ಬೆಳೆಸಬಹುದು. ಕಟ್ಟಿಗೆ ಬಹಳ ಬಲವುಳ್ಳದ್ದಿದ್ದಾಗ್ಯೂ ಕೆತ್ತಲಿಕ್ಕೆ ಬಹು ಮಿದುವಿದ್ದು, ನುಣುಪಾಗುತ್ತದೆ; ಹಾಗೂ ಯಾವತ್ತು ಕೆಲಸಗಳಿಗೆ ಬರುತ್ತದೆ. ಇದಕ್ಕೆ ಹುಳವೂ ಗೆದ್ದಲಿಯೂ ಹತ್ತುವದಿಲ್ಲ. ಹಿಂದುಸ್ತಾನದ "ವೃಕ್ಷರಾಜ," ಅಂದರೆ "ಅಡವಿಯ ಅರಸು" ಎಂದು ಇದಕ್ಕೆ ಅನ್ನುವದುಂಟು. ಈ ಕಟ್ಟಿಗೆಯಿಂದ ಮೇಲಾದ ಎಣ್ಣೆ ಹೊರಡುತ್ತದೆ. ಎಲೆಯಿಂದ ಕೆಂಪುಬಣ್ಣ ಹುಟ್ಟುತ್ತದೆ.

ಚಂದನ (ಶ್ರೀಗಂಧ):—ಸುಮಾರು ೩೦ ಫೂಟು ಎತ್ತರ, ಬಡ್ಡಿಯಲ್ಲಿ ೪ ಫೂಟು ಸುತ್ತಳತೆ; ಇಷ್ಟಕ್ಕಿಂತ ಹೆಚ್ಚಿಗೆ ದೊಡ್ಡದು ಬಹುತರ ಆಗುವದಿಲ್ಲ. ಹೊರಗಿನ ಕಟ್ಟಿಗೆ ಬೆಳ್ಳಗಿರುತ್ತದೆ. ಅದಕ್ಕೆ ಸುಗಂಧವಿರುವದಿಲ್ಲ. ಅದರೊಳಗಿನ ಗಂಡು ಸ್ವಲ್ಪ ಹಳದೀ ಬಣ್ಣದಮೇಲೆ, ಬಿರುಸು, ಸಣ್ಣ ಎಳೆಯುಳ್ಳದ್ದು ಇದ್ದು ಸುಗಂಧವುಳ್ಳದ್ದಿರುತ್ತದೆ. ಇದರಿಂದ ಪೆಟ್ಟಿಗೆ ಮೊದಲಾದ ಶೋಭೆಯ ಒಡವೆಗಳನ್ನು ಮಾಡುವರು; ಎಣ್ಣೆಯನ್ನೂ ತೆಗೆ

ಯುವರು. ಈ ಕಟ್ಟಿಗೆಯ ವ್ಯಾಪಾರ ಬಹಳ ನಡೆಯುತ್ತದೆ. ಮಣಕ್ಕೆ (೨೮ ಪೌಂಡು ತೂಕಕ್ಕೆ) ೫, ೬ ರೂಪಾಯಿ ಬರುತ್ತವೆ.

ಮತ್ತಿ:—ಸರಳ, ಬಿರುಸು, ತಾಳಿಕೆಯುಳ್ಳದ್ದು. ಇವಾರತು ಮುಂತಾದ ಬಹಳ ಕೆಲಸಕ್ಕೆ ಬರುತ್ತದೆ.

(೨) ಪಶುಗಳು:—ಪಶುಗಳಲ್ಲಿ ಸಾಕುಪಶುಗಳೆಂದೂ ಕಾಡುಪಶುಗಳೆಂದೂ ಎರಡು ಭಾಗಗಳನ್ನು ಮಾಡಬಹುದು. ಇವೆರಡೂ ವರ್ಗಕ್ಕೆ ಸೇರುವ ಪಶುಗಳನ್ನು ಕುರಿತು ನಾವು ವಿಚಾರಿಸತಕ್ಕದ್ದು. ಸಾಕುಪಶುಗಳು ಜನರ ಸೌಖ್ಯಕ್ಕೆ ಕಾರಣವಾಗಿರುವವು. ಅಡವಿಯ ಪಶುಗಳಿಂದ ಜನರಿಗೂ, ದನಕರುಗಳಿಗೂ, ಪೈರುಗಳಿಗೂ ಹಾನಿಯಾಗುವದುಂಟು.

ಈ ಜಿಲ್ಲೆಯಲ್ಲಿ ದೊರೆಯುವ ಸಾಕುಪಶುಗಳಲ್ಲಿ ಎತ್ತುಗಳು, ಆಕಳುಗಳು, ಎಮ್ಮೆ-ಕೋಣಗಳು, ಕುರಿಗಳು, ಕುದುರೆ-ಕತ್ತೆಗಳು ಮುಖ್ಯವಾಗಿರುತ್ತವೆ. ಹೊಲಗೆಲಸವೂ, ಬಂಡಿಗಳನ್ನು ಎಳೆಯುವ ಕೆಲಸವೂ ಎತ್ತುಗಳಿಂದಲೇ ಮುಖ್ಯವಾಗಿ ಸಾಗುವದರಿಂದ, ಈ ಪಶುಗಳ ಸಂಖ್ಯೆಯು ಎಲ್ಲಕ್ಕೂ ಹೆಚ್ಚು ಇರುವದು. ಧಾರವಾಡ ಜಿಲ್ಲೆಯಲ್ಲಿ ಉತ್ತಮ ಜಾತಿಯ ಎತ್ತುಗಳಾಗಲಿ ಇತರ ಸಾಕುಪಶುಗಳಾಗಲಿ ಹುಟ್ಟುವದಿಲ್ಲ. ಇಲ್ಲಿಯ ಎತ್ತುಗಳಲ್ಲಿ ಬಳ್ಳಾರಿ ಹಾಗೂ ಮೈಸೂರಿಂದ ತರಿಸಿದವು ಉತ್ತಮವಾಗಿರುತ್ತವೆ. ಕೃಷ್ಣಾನದಿಯ ದಂಡೆಯ ಎತ್ತುಗಳಿಗಾದರೂ ತಕ್ಕಮಟ್ಟಿಗೆ ಬೆಲೆ ಇರುತ್ತದೆ. ಇವುಗಳಿಗೆ ಹೊಳೆಸಾಲಿನ ಎತ್ತುಗಳೆನ್ನುವರು. ಮೂಡಲದ ಎತ್ತುಗಳು ಬಹಳ ಕಸುವುಳ್ಳವಿದ್ದಾಗ್ಯೂ, ಇವುಗಳಿಗೆ ಮಿತಿಮೀರಿದ ಶ್ರಮವೂ, ಉಪವಾಸವೂ ತಡೆಯುವದಿಲ್ಲ; ಮತ್ತು ಸುಗ್ರಾಸವು ಬೇಕು. ಜವಾರಿಯ ದನಕ್ಕೆ ಅಲ್ಪಸ್ವಲ್ಪ ಸಿಕ್ಕಂಥ ಆಹಾರಕೊಟ್ಟು, ಬೆಳಗಿನಿಂದ ಸಾಯಂಕಾಲದವರೆಗೆ ದುಡಿಸಿಕೊಳ್ಳಬಹುದು. ಆದ್ದರಿಂದ ಬಡ ಒಕ್ಕಲಿಗರು ಜವಾರಿಯ ಎತ್ತುಗಳನ್ನೇ ಹೆಚ್ಚಾಗಿ ಕಟ್ಟುವರು. ಮೂಡಲದ ಎತ್ತುಗಳು ಗಾಡಿಗಳನ್ನು ಎಳೆಯುವದರಲ್ಲಿ ಜವಾರೀ ಎತ್ತುಗಳಿಗಿಂತ ಮೇಲಾಗಿರುತ್ತವೆ.

ಆಕಳುಗಳನ್ನು ಮುಖ್ಯವಾಗಿ ಹೈನಿಗೋಸ್ಕರ ಉಪಯೋಗಿಸುವದರಿಂದ ಇವುಗಳ ಸಂಖ್ಯೆಯು ಎತ್ತುಗಳ (ಸುಮಾರು) ಅರ್ಧವಿರುವದು. ಮೂಡಲ ಜಾತಿಯ ಆಕಳುಗಳು ಈ ಸೀಮೆಗೆ ಬರುವದಿಲ್ಲ. ಧಾರವಾಡ ಜಿಲ್ಲೆಯ ಆಕಳುಗಳು ಹೈನಿಗೆ ಹೆಸರಾಗಿಲ್ಲ.

ಕೋಣಗಳು ಎತ್ತುಗಳಿಗಿಂತ ಹೆಚ್ಚು ಕಸುವುಳ್ಳವಿರುತ್ತವೆ. ಆದರೆ ಅವುಗಳಿಗೆ ಬುದ್ಧಿ ಬಹುಕಡಿಮೆ. ಬಿಸಿಲು ತಾಳುವದಿಲ್ಲ. ಈ ಪಶುಗಳು ಬಹು ಮಂದ; ರಂಟೆ ಮೊದಲಾದ ಕಸುವಿನ ಕೆಲಸಕ್ಕೆ ಒಕ್ಕಲಿಗರು ಇವುಗಳನ್ನು ಹೂಡುವದುಂಟು. ಆದರೆ ೩-೪ತಾಸು ಹೊತ್ತು ಏರಿತೆಂದರೆ ಅವುಗಳ ಆಟ ನಿಂತುಹೋಗುತ್ತದೆ.

ಯಾವತ್ತು ಪ್ರಕಾರದ ಹೈನಿನಲ್ಲಿ ಎಮ್ಮೆಯ ಹೈನವೇ ಮೇಲಾದದ್ದು. ಎಮ್ಮೆಯ ಹಾಲು ಆಕಳ ಹಾಲಿಗಿಂತ ಗಟ್ಟಿ. ಅದಕ್ಕೆ ಹೆಡಸು ಬಹಳ. ಒಂದು ಸೂಲದ ಹೈನವು ಸುಮಾರು ಒಂದು ವರ್ಷ ನಡೆಯುತ್ತದೆ. ಎಮ್ಮೆಗಳ ಸಂಖ್ಯೆಯು ಆಕಳುಗಳಿಗಿಂತ ಕಡಿಮೆ. ಇವುಗಳಿಗೆ ಖರ್ಚು ಹೆಚ್ಚು. ಜಿಲ್ಹೆಯ ಪೂರ್ವದಲ್ಲಿಯೂ, ಉತ್ತರದಲ್ಲಿಯೂ ಇರುವ ಎರೆಭೂಮಿಯುಳ್ಳ ನವಲಗುಂದ, ರೋಣ, ಗದಗ ತಾಲೂಕುಗಳ ಎಮ್ಮೆಗಳು ಮೇಲಾದವುಗಳು. ಆದ್ದರಿಂದ ಇವುಗಳ ಮಾರಾಟದ ಮುಖ್ಯ ಪೇಟೆಗಳು ಇವೇ ತಾಲೂಕುಗಳು. ಮೇಲೆ ಹೇಳಿದ ಯಾವತ್ತು ಪಶುಗಳು ಹಸರುಹುಲ್ಲು, ಎಲೆಬಳ್ಳಿ, ಹಸರುಮೇವುಗಳಿಂದ ಜೀವಿಸುವದರಿಂದ ಇವುಗಳ ಸಂಖ್ಯೆಯು ಜಿಲ್ಹೆಯ ಪಶ್ಚಿಮಕ್ಕೂ, ಮಧ್ಯದಲ್ಲಿಯೂ ಇರುವ ತಾಲೂಕುಗಳಲ್ಲಿ ಬಹಳ.

ಧಾರವಾಡದಲ್ಲಿ ಕುರಿಗಳ ಸಂಖ್ಯೆಯು ಬಹಳ ಇಲ್ಲ. ಇವುಗಳನ್ನು ಉಣ್ಣೆಯದೆಸೆಯಿಂದಲೂ, ಮಾಂಸದ ದೆಸೆಯಿಂದಲೂ ಸಾಕುವರು. ಮಾರಾಟದಿಂದ ಕುರುಬರಿಗೆ ಆಗುವ ಲಾಭವು ಹೈನಿನಿಂದಲೂ, ಉಣ್ಣೆಯಿಂದಲೂ ಆಗುವದಿಲ್ಲ. ಇವು ಒಂದೊಂದು ಸೂಲಿಗೆ ೩-೫ ಮರಿಗಳನ್ನು ಈಯುವದರಿಂದ ಇವುಗಳ ಸಂತತಿಯು ಬಹು ಬೇಗ ಬೆಳೆಯುತ್ತದೆ. ಆಡಿನ ಹಾಲು ಶರೀರಕ್ಕೆ ಆರೋಗ್ಯಕರವು. ಆದರೆ ಇದಕ್ಕೆ ಉಗ್ರವಾಸನೆ ಬಹಳ. ಆದ್ದರಿಂದ ಇದರ ಹೈನನ್ನು ಕುರುಬರು, ಮುಸಲ್ಮಾನರು, ಕುಂಬಾರರು ಇವರ ಹೊರ್ತು ಇತರ ಜಾತಿಯವರು ಉಪಯೋಗಿಸುವದಿಲ್ಲ. ಕುರಿಗಳಿಗೆ ಆಹಾರದ ಖರ್ಚು ಬಹುಶಃ ಏನೂ ಆಗುವದಿಲ್ಲ. ಇವು ಹೊಳೆಹಳ್ಳಗಳ ದಂಡೆಯಲ್ಲಿಯೂ, ಬೀಳುಭೂಮಿಯಲ್ಲಿಯೂ ಅಡವಿಯಲ್ಲಿಯೂ ಹುಟ್ಟುವ ಹುಲ್ಲನ್ನು ತಿಂದು ಜೀವಿಸುತ್ತವೆ. ಒಬ್ಬ ಕುರುಬನು ನೂರಾರು ಕುರಿಗಳನ್ನು ಕಾಯುವನು. ಆದ್ದರಿಂದ, ಇವುಗಳ ಸಂಖ್ಯೆಯು ಮಲ್ಲಾಡಿನಲ್ಲಿದ್ದದ್ದಕ್ಕಿಂತ ಜಿಲ್ಹೆಯ ಪೂರ್ವದಲ್ಲಿಯೂ, ಮಧ್ಯದಲ್ಲಿಯೂ ಇರುವ ಬೈಲುಸೀಮೆಗಳಲ್ಲಿ ಬಹಳ.

ಕುದುರೆಗಳ ಉಪಯೋಗವು ನಮ್ಮ ಜನರಲ್ಲಿ ಕಡಿಮೆ. ಊರುಗ ಗಳಲ್ಲಿ ಗಾಡಿಗಳನ್ನು ಎಳೆಯಲಿಕ್ಕೂ, ಹಳ್ಳಿಗಳಲ್ಲಿ ಏರಿಕೊಂಡು ತಿರುಗ ಕ್ಕೂ ಇವುಗಳನ್ನು ಉಪಯೋಗಿಸುವದುಂಟು. ಧಾರವಾಡ ತಾಲೂ ನಲ್ಲಿ ಇವುಗಳ ಸಂಖ್ಯೆಯು ಎಲ್ಲಕ್ಕೂ ಹೆಚ್ಚು ಇರುವದು.

ಕತ್ತೆಗಳನ್ನು ಉತ್ತಮ ಜಾತಿಯವರು ಮುಟ್ಟುವದಿಲ್ಲ. ವಾಡಿಕೆ ಯಾಗಿ ಅಗಸರು, ಕುಂಬಾರರು, ಕೊರವರು ಮೊದಲಾದ ಜಾತಿಗಳ ಜನರು ಕತ್ತೆಗಳನ್ನು ಕಟ್ಟುವರು. ಇವುಗಳನ್ನು ಸಾಕುವವರಿಗೆ ವೆಚ್ಚ ವು ಕಡಿಮೆ. ಇವು ಬೇಕಾದ ಕೆಲಸಕ್ಕೆ ಸಿದ್ಧವಾಗಿರುತ್ತವೆ. ಬೇಕಾ ದಾಗ ಅವುಗಳಿಂದ ಕೆಲಸ ಮಾಡಿಸಿಕೊಂಡು, ಕೆಲಸ ತೀರಿದಕೂಡಲೆ ಅವುಗಳನ್ನು ಬಿಟ್ಟುಬಿಡುವರು. ಈ ಬಡ ಪಶುಗಳು ತಿಪ್ಪಿಗಳಲ್ಲಿಯೂ ಓಣಿಗಳಲ್ಲಿಯೂ, ಸಿಕ್ಕದ್ದು ತಿಂದು ಜನ್ಮ ಕಳೆಯುವವು. ಇವುಗಳಿಗೆ ಹೊಲಸು ಸೇರುವದು. ಇವು ಭಾರವನ್ನು ಹೊತ್ತುಕೊಂಡು ವಿಶ್ರಾಂತಿ ಇಲ್ಲದೆ ಬೇಕಾದಷ್ಟು ದೂರ ನಡೆಯುವವು. ಆಹಾರ ಕಡಿಮೆ. ಅದ್ದ ರಿಂದ ಅಗಸರೂ, ಕುಂಬಾರರೂ, ಇವುಗಳನ್ನು ಕಟ್ಟುವರು. ಧಾರವಾ ಜಿಲ್ಲೆಯಲ್ಲಿ ಕತ್ತೆಗಳ ಸಂಖ್ಯೆಯು ಕುದುರೆಗಳ ಸಂಖ್ಯೆಯಷ್ಟೇ ಇರುವದು

ಧಾರವಾಡ ಜಿಲ್ಲೆಯಲ್ಲಿ ವನಪಶುಗಳು ತಕ್ಕಮಟ್ಟಿಗೆ ಇರುತ್ತವೆ ಧಾರವಾಡದ ಪಶ್ಚಿಮಮೇರೆಯ ಗುಂಟ ೯ರಿಂದ ೬ ಮೈಲು ಅಗಲಾದ ಅ ವಿಯು ಹಬ್ಬಿರುವದಷ್ಟೇ. ಈ ಅರಣ್ಯಪ್ರದೇಶದಲ್ಲಿ ಅಡವಿಯ ಪಶುಗಳ ೫೦ ವರುಷಗಳ ಹಿಂದೆ ಹೇರಳವಾಗಿ ದೃಷ್ಟಿಗೆ ಬೀಳುತ್ತಿದ್ದವು. ಇತ್ತ ಲಾಗಿ ಸರಕಾರದವರು ಅವುಗಳ ಬೇಟೆಗೆ ಉತ್ತೇಜನವನ್ನು ಕೊಟ್ಟದ್ದ ರಿಂದ, ಇವುಗಳ ಸಂಖ್ಯೆಯು ವರ್ಷಾನುವರ್ಷ ಕಡಿಮೆಯಾಗುತ್ತ ನಡೆ ದದೆ. ಇವುಗಳಿಂದ ಜನರಿಗೂ, ದನಕರುಗಳಿಗೂ, ಪೈರುಗಳಿಗೂ, ಹಾನಿ ಯಾಗುತ್ತಿತ್ತು. ಈ ಅರಣ್ಯಪ್ರದೇಶಕ್ಕೂ ಪೂರ್ವದ ಬೈಲುಭೂಮಿಗೂ ನಡುವೆ ಹಬ್ಬಿರುವ ಕಂಟಿಯ ಮಾಳದ ಭೂಮಿಗಳಲ್ಲಿ ಹಂದಿ, ಮೊಲ ಚಿಗರಿ ಮೊದಲಾದ ಸಣ್ಣ ವನಪಶುಗಳು ವಾಸಮಾಡುವವು. ಬೈಲುಸೀಮೆ ಗಳಲ್ಲಿ ಚಿಗರೆಗಳು ಗುಂಪುಗುಂಪಾಗಿ ತಿರುಗುತ್ತವೆ.

ಧಾರವಾಡ ಜಿಲ್ಲೆಯ ವನಪಶುಗಳಲ್ಲಿ ಹುಲಿ, ಚಿರ್ಚಾ, ತೋಳ, ನರಿ ಕರಡಿ, ಕಾಡಹಂದಿ, ಚಿಗರಿ, ಮೊಲ, ಇವೇ ಮುಖ್ಯವಾದವುಗಳು.

(೩) ಖನಿಜಗಳು:—ಬುನಾದಿಯಲ್ಲಿ ಧಾರವಾಡ ಜಿಲ್ಹೆಯ ಕೆಲವು ಪ್ರದೇಶಗಳಲ್ಲಿ ಚಿನ್ನವು ಬಹಳ ದೊರೆಯುತ್ತಿತ್ತೆಂದು ಹೇಳುತ್ತಾರೆ. ಗದಗ ತಾಲೂಕಿನಲ್ಲಿರುವ ಕಪ್ಪತ(ಕಪೋತ)ಗುಡ್ಡದಲ್ಲಿ ಪೂರ್ವಕಾಲದಲ್ಲಿ ಬಹು-ಜನರು ಬಹಳ ಚಿನ್ನವನ್ನು ಸಂಪಾದಿಸಿದ ಬಗ್ಗೆ ನಾನಾಪ್ರಕಾರದ ಕಥೆಗಳನ್ನು ಜನರು ಹೇಳುತ್ತಾರೆ. ಬಹುಶಃ ಇವೆಲ್ಲ-ಕಲ್ಪಿತಕಥೆಗಳೇ ಇರುವವು.

ಚಿನ್ನವು ಎರಡು ರೂಪದಿಂದ ದೊರೆಯುವದುಂಟು. ಚಿನ್ನದ ಅದರುಗಳಿರುವ ಪ್ರದೇಶದಲ್ಲಿ ಹರಿಯುವ ಹಳ್ಳಗಳ ಉಸುಕಿನಲ್ಲಿ ಇದರ ಕಣಗಳು ದೊರೆಯುವವು. ಈ ಕಣಗಳು ಹೆಚ್ಚಾಗಿದ್ದರೆ ಉಸಕನ್ನು ತಂದು ತೊಳೆದು ಈ ಕಣಗಳನ್ನು ಕೂಡಿಸಿ ಮಾರಿ ದುಡ್ಡು ಮಾಡುವವರಿಗೆ ಒಳ್ಳೇ ಕೂಲಿಯು ಬೀಳುವದು. ಆದರೆ ಚಿನ್ನದ ಅದರುಗಳನ್ನು ಕಣಿಗಳಿಂದ ತೆಗೆದು, ಅವುಗಳನ್ನು ಪುಡಿಮಾಡಿ, ಕುಲಿಮೆಯಲ್ಲಿಟ್ಟು ಕಾಸಿ, ಚಿನ್ನವನ್ನು ಬೇರೆ ಮಾಡುವದರಿಂದ ಒಳ್ಳೇ ಲಾಭವಾಗುವದು. ಆದರೆ, ಈ ಕೆಲಸಕ್ಕೆ ಕಟ್ಟಿಗೆ ಇಲ್ಲವೆ ಕಲ್ಲಿದ್ದಲಿಯು ಅಗ್ಗವಾಗಿ ದೊರೆಯು ಬೇಕಾಗುವದು. ನೀರಿನ ಅನುಕೂಲತೆಯೂ ಬೇಕು. ಗದಗ ತಾಲೂಕಿನಲ್ಲಿ ಕಪ್ಪತಗುಡ್ಡದಲ್ಲಿಯೂ, ಕೋಡ-ರಾಣೇಬಿನ್ನೂರು ತಾಲೂಕುಗಳಲ್ಲಿಯೂ ಚಿನ್ನದ ಕಣಿಗಳು ಇರುವವೆನ್ನಲು ಸಂದೇಹವಿಲ್ಲ. ಯಾಕಂದರೆ, ಕಪ್ಪತಗುಡ್ಡದಿಂದ ಹರಿಯುವ ಕೋಣಿ ಮುಂತಾದ ಹಳ್ಳಗಳ ಮಳಲಿನಲ್ಲಿಯೂ ಕೋಡ-ರಾಣೇಬಿನ್ನೂರು ತಾಲೂಕುಗಳಲ್ಲಿಯ ಪ್ರವಾಹಗಳ ಉಸುಬಿನಲ್ಲಿಯೂ ಚಿನ್ನದ ಕಣಗಳು ದೊರೆಯುತ್ತವೆ. ಆದರೆ, ಈ ಕಣಿಗಳಲ್ಲಿ, ಚಿನ್ನದ ಅಂಶವು ಹೆಚ್ಚಿರುವದಿಲ್ಲ. ಸರಕಾರದವರು ಈ ಕಣಿಗಳನ್ನು ಪರೀಕ್ಷಿಸುವದಕ್ಕೋಸ್ಕರ ಶೋಧಕ ಜನರನ್ನು ಕಳಿಸಿ, ಕಣಿಯನ್ನು ತೆಗಿಯುವದರಿಂದ ಲಾಭವಾಗುವಷ್ಟು ಚಿನ್ನವು ಈ ಪ್ರದೇಶದಲ್ಲಿ ದೊರೆಯುವ ಸಂಭವವಿಲ್ಲೆಂದು ಮನಗಂಡು, ಆ ಕೆಲಸವನ್ನು ಬಿಟ್ಟು ಬಿಟ್ಟರುರು. ಗದಗ ತಾಲೂಕು ಮಲೆನಾಡಿನಿಂದ ದೂರದಲ್ಲಿರುವದರಿಂದ, ಅಲ್ಲಿ ಕಟ್ಟಿಗೆಯು ತುಟ್ಟಿಯಾಗಿ ಮಾರುವದು. ಕಣಿಗಳಲ್ಲಿ ಚಿನ್ನದ ಅಂಶವು ಕಡಿಮೆ. ಆದ್ದರಿಂದ ಚಿನ್ನವನ್ನು ತೆಗೆಯುವದರಲ್ಲಿ ಲಾಭವಿಲ್ಲ. ಇತ್ತಲಾಗಿ ರೇಲ್ವೆಯಾದ ನಂತರ ಅಳನಾವರದ ನೆರೆಯಲ್ಲಿಯೂ, ಗದಗಿನ ಬಳಿಯಲ್ಲಿಯೂ

ಇರುವ ಕಣಿಗಳಲ್ಲಿ ಕೆಲವು ಯುರೋಪಿಯನ್ ಸಂಘದವರು ಕೆಲಸ ನಡಿ
ಸಾಕಷ್ಟು ಭಂಗಾರವು ಹೊರಡದ್ದರಿಂದ ಆ ಕೆಲಸವನ್ನು ಬಿಟ್ಟಿರುವರು.

ಉಪಯೋಗದ ದೃಷ್ಟಿಯಿಂದ ನೋಡಿದರೆ, ಈ ಕಾಲದಲ್ಲಿ ಕಬ
ಣವು ಎಲ್ಲ ಲೋಹಗಳಲ್ಲಿ ಮೇಲಾದದ್ದೆಂದು ನಿರ್ಧಾರವಾಗಿ ಹೇಳ
ಹುದು. ಇದು ಧಾರವಾಡ ಜಿಲ್ಲೆಯಲ್ಲಿ ಕಲ್ಲುಗಳ ರೂಪದಿಂದ ಹೇರ
ವಾಗಿ ದೊರೆಯುತ್ತದೆ. ಕಿತ್ತೂರಿನಿಂದ ಹುಬ್ಬಳ್ಳಿಯವರಿಗೆ ನೆಲದೊಳಗಿನ
ಯಾವತ್ತು ಶಿಲೆಗಳಲ್ಲಿ ಹೆಚ್ಚಾಗಲಿ ಕಡಿಮೆಯಾಗಲಿ ಕಬ್ಬಿಣವು ಮಿಶ್ರವಾಗಿ
ರುತ್ತದೆ. ಕಪ್ಪತಗುಡ್ಡದ ಕೆಲವು ಪ್ರದೇಶಗಳಲ್ಲಿ ಚಿನ್ನದ ಸಂಗಡ ಕಬ್ಬಿ
ಣವು ದೊರೆಯುತ್ತದೆ. ಪೂರ್ವಕಾಲದಲ್ಲಿ ಧಾರವಾಡ ಪ್ರಾಂತದಲ್ಲಿ ಬಹಳ
ಕುಲಿಮೆಗಳಿದ್ದವೆಂಬು ಹೇಳುತ್ತಾರೆ.

ಕಬ್ಬಿಣದ ಅದರುಗಳಿಂದ ಕಬ್ಬಿಣವನ್ನು ಬಿಂಗಡಿಸಬೇಕಾದರೆ
ಕಟ್ಟಿಗೆಯು ಅಗ್ಗವಿರಬೇಕಾಗುವದು. ಕೆಲವು ವರ್ಷಗಳ ಹಿಂದೆ ಕಪ್ಪ
ತಗುಡ್ಡಗಳ ಅಡವಿಯಲ್ಲಿ ಕಟ್ಟಿಗೆಯು ಬಹಳವಿದ್ದಾಗ, ಈ ಗುಡ್ಡದ ನೆ
ಯಲ್ಲಿ ಡೋಣಿ ಮೊದಲಾದ ಊರುಗಳಲ್ಲಿ ಕಬ್ಬಿಣವನ್ನು ತಯಾರಿಸುತ್ತಿ
ದ್ದರು. ಆದರೆ ಸದ್ಯದಲ್ಲಿ ಈ ಅಡವಿಗಳು ನಾಶಹೊಂದಿವೆ. ಅಲ್ಲಿಗೆ
ಕಟ್ಟಿಗೆಯು ಪಶ್ಚಿಮದ ಅಡವಿಗಳಿಂದ ಬರಬೇಕಾದರೆ, ಬಹಳ ವೆಚ್ಚವಾ
ಗುವದು. ಇದಲ್ಲದೆ ವಿಲಾಯತಿಯ ಕಬ್ಬಿಣವು ಬಹಳ ಅಗ್ಗವಿರುವದು.
ಅದ್ದರಿಂದ ಕಪ್ಪತ ಗುಡ್ಡದ ಕುಲಿಮೆಗಳು ಇಲ್ಲದಾಗಿವೆ.

ಕಲಘಟಗಿ ತಾಲೂಕಿನಲ್ಲಿ ಗುಳಗಿ ಎಂಬ ಗ್ರಾಮದಲ್ಲಿಯೂ, ಧಾ
ವಾಡದ ಊರಿನ ಹತ್ತರ ತೇಗೂರ ಎಂಬ ಹಳ್ಳಿಯಲ್ಲಿಯೂ ಕಬ್ಬಿಣ ತೆ
ಯುವ ಕುಲಿಮೆಗಳು ಈಗ್ಯೂ ನಡೆಯುತ್ತವೆ. ಕಬ್ಬಿಣದ ಅದರುಗಳನ
ಕರಗಿಸುವಾಗ ಕುಲಿಮೆಯಲ್ಲಿ ಸುಣ್ಣದ ಹರಳುಗಳನ್ನು ಹಾಕಿದರೆ, ಅದ
ತೀವ್ರವಾಗಿ ರಸ ಒಡೆದು ವೆಚ್ಚವು ಕಡಿಮೆಯಾಗುವದು. ಆದರೆ ನಮ್ಮ
ಈ ಹಳ್ಳಿಗಳಲ್ಲಿ ಜನರು ಇವುಗಳನ್ನು ಅದರುಗಳೊಡನೆ ಬೆರಿಸುವದಿ
ಇದಲ್ಲದೆ, ಮೇಲೆ ಹೇಳಿದಂತೆ ವಿಲಾಯತಿಯ ಕಬ್ಬಿಣವು ಬಹಳ ಅ
ವಾಗಿ ದೊರೆಯುವ ಕಾರಣ, ಈ ಕುಲಿಮೆಗಳನ್ನು ಇಟ್ಟವರಿಗೆ ಹೇಳ
ಕ್ಕಷ್ಟು ಲಾಭವಾಗುವದಿಲ್ಲ.

ವಿಲಾಯತಿಯ ಅತಿಮಿದುವಾದ "ಸಿಕ್ಕೇದ" ಕಬ್ಬಿಣವು ಈ ಪ್ರಾಂತ

ಕಬ್ಬಿಣಕ್ಕೆ ಹೊಂದುವದಿಲ್ಲ. "ಸಿಕ್ಕೇ"ದ ಕಬ್ಬಿಣಕ್ಕೆ ಸಹ ಸ್ವಲ್ಪ ಕಾವು ಕಡಿಮೆಯಾದವರೆ ಹೊಡೆಯುವ ಸಮಯದಲ್ಲಿ ಅದು ಒಡೆಯುತ್ತದೆ. ಆದರೆ, ಈ ದೇಶದ ಕಬ್ಬಿಣವನ್ನು ಕಾವು ಪೂರಾ ಇಳಿದ ಮೇಲೆ ಸಹ ಹೊಡೆದು ನಿಗಚಿಸಬಹುದು. ಆದಾಗ್ಯೂ, ಸಾಧಾರಣ ವ್ಯವಹಾರದ ಆಯುಧಗಳಿಗೆ ಅಷ್ಟುಮೇಲಾದ ಕಬ್ಬಿಣವು ಬೇಕಾಗುವದಿಲ್ಲಾದಕಾರಣ, ಜನರು ವಿಲಾಯತಿಯ ಅಗ್ಗದ ಕಬ್ಬಿಣವನ್ನೇ ಹೆಚ್ಚಿಗೆ ಕೊಳ್ಳುವರು.

ಧಾರವಾಡ, ಕರ್ಜಗಿ, ರಾಣೇಬಿನ್ನೂರ ತಾಲೂಕುಗಳಲ್ಲಿ ಸ್ಲೇಟಿನ ಹಲಿಗೆಗಳು ದೊರೆಯುತ್ತವೆ. ಧಾರವಾಡದ ಹತ್ತರ ಮಂಡಿಹಾಳದಲ್ಲಿಯೂ, ಅಳಣಾವರದಲ್ಲಿಯೂ ಮೇಲಾದ ಹಲಿಗೆಗಳು ದೊರೆಯುತ್ತವೆ. ಅಳಣಾವರದ ಕಲ್ಲಿನ ಮೇಲೆ ಕುಸುರಿನ ಕೆಲಸವು ಬಹು ಸರಸವಾಗುತ್ತದೆ. ಇದಲ್ಲದೆ, ಉಸುಬಿನ ಕಲ್ಲು ಮೊದಲಾದ ಇತರ ಜಾತಿಯ ಕಲ್ಲುಗಳು ಧಾರವಾಡ ಜಿಲ್ಹೆಯಲ್ಲಿ ಎಲ್ಲ ಕಡೆಯಲ್ಲಿ ದೊರೆಯುವವು.

ಈ ಜಿಲ್ಹೆಯ ಬೇರೆ ಬೇರೆ ಭಾಗಗಳಲ್ಲಿರುವ ಊರುಗಳಲ್ಲಿ ಕರೇಕಲ್ಲಿನಿಂದ ಕಟ್ಟಿದ ಭವ್ಯವಾದ ದೇವಾಲಯಗಳು ಬಹಳವಾಗಿ ಕಾಣಬರುತ್ತವೆ. ಈ ಜಿಲ್ಹೆಯಲ್ಲಿ ಇಮಾರತಿಗೆ ಬರುವ ಕಲ್ಲುಗಳು ದೊರೆಯುವದರಿಂದಲೇ ಈ ಕಟ್ಟಡಗಳಾಗಿವೆಯೆನ್ನಲು ಸಂದೇಹವಿಲ್ಲ.

ಕಪ್ಪತ ಗುಡ್ಡದಲ್ಲಿ ಬೆಳ್ಳಿ ತಾಂಬ್ರಗಳು ಚಿನ್ನದ ಸಂಗಡ ಮಿಶ್ರವಾಗಿ ಅಲ್ಪಪ್ರಮಾಣದಿಂದ ದೊರೆಯುತ್ತವೆ. ಆದರೆ ಇವುಗಳನ್ನು ತೆಗೆಯುವದು ಅಪರೂಪ. ಖರ್ಚು ಪೂರೈಸುವದಿಲ್ಲ.

೬ನೇ ಪ್ರಕರಣ.

ಜನಸಂಖ್ಯೆ.

ಧಾರವಾಡ ಜಿಲ್ಹೆಯಲ್ಲಿ ೧೯೦೧ರಲ್ಲಿ ೮,೯೩,೪೯೫ ಜನರಿದ್ದರು. ಕ್ಷೇತ್ರದ ಮಾನದಿಂದ ಹೇಳುವದಾದರೆ, ಚೌ. ಮೈಲಿಗೆ ೧೯೪೬೮ ಜನರಿದ್ದರೆನ್ನಬಹುದು. ೧೯೧೧ರಲ್ಲಿ ಈ ಜಿಲ್ಹೆಯಲ್ಲಿ ೧೧,೧೩,೨೯೮ ಜನರಿದ್ದರೆಂದು ಗೊತ್ತಾಗಿದೆ. ಅಂದರೆ, ಚೌ. ಮೈಲಿಗೆ ೨೪೨ ಜನರಾದರು. ಈ ಜಿಲ್ಹೆಯ ಜನಸಂಖ್ಯೆಯು ಸಾವಕಾಶವಾಗಿ ಹೆಚ್ಚುತ್ತಿರುವದೆಂಬದು ಸ್ಪಷ್ಟವದೆ

ಮಳೆಯು ವಾಡಿಕೆಯಂತೆ ಬಿದ್ದು, ಕಾಳುಕಡಿಗಳು ತುಟ್ಟಿಯಾಗದೆ ಇದ್ದರೆ ಜನರು ಸೌಖ್ಯದಿಂದಿರುವರು. ಜನಸಂಖ್ಯೆಯಾದರೂ ಕ್ರಮೇಣ ಹೆಚ್ಚಾಗುವದು. ಜನಸಂಖ್ಯೆಯು ಕಡಿಮೆಯಾಗುವ ಮುಖ್ಯ ಕಾರಣವು ಬರವು. ಧಾರವಾಡ ಜಿಲ್ಹೆಯ ಮುಖ್ಯ ಉದ್ಯೋಗವು ಕೃಷಿಕರ್ಮವಿರುವದರಿಂದಲೂ, ಇಲ್ಲಿ ಮಳೆಯ ಮಾನವು ಸಾಕಷ್ಟು ಇಲ್ಲದಿರುವದರಿಂದಲೂ, ಮಳೆಯ ಮಾನದಲ್ಲಿ ಸ್ವಲ್ಪ ಹೆಚ್ಚು ಕಡಿಮೆಯಾದರೆ ಬರದ ಅಂಜಿಕೆಯು ಬಹಳ ಇರುವದು.

ಇತ್ತಲಾಗಿ ಪ್ಲೇಗ ಬೇನೆಯು ಜನಸಂಖ್ಯೆಯನ್ನು ಕಡಿಮೆ ಮಾಡುತ್ತ ನಡೆದಿರುವದು. ಕೆಳಗೆ ಕೊಟ್ಟ ಕೋಷ್ಟಕದಲ್ಲಿ ಧಾರವಾಡ ಜಿಲ್ಹೆಯ ತಾಲೂಕುಗಳ ಕ್ಷೇತ್ರವನ್ನೂ, ಚೌರಸ ಮೈಲಿನ ಪ್ರಮಾಣದಿಂದ ಜನಸಂಖ್ಯೆಯನ್ನೂ, ಪ್ರತಿಯೊಂದು ತಾಲೂಕಿನಲ್ಲಿರುವ ಪಟ್ಟಣಗಳ ಹಾಗು ಹಳ್ಳಿಗಳ ಜನಸಂಖ್ಯೆಯನ್ನೂ ತೋರಿಸಿದ್ದೇವೆ. ೫೦೦೦ ಜನರಿಗಿಂತ ಹೆಚ್ಚು ವಸತಿಯುಳ್ಳ ಊರುಗಳು ಪಟ್ಟಣಗಳೆಂತಲೂ ಕಡಿಮೆಯುಳ್ಳವು ಹಳ್ಳಿಗಳೆಂತಲೂ ಎಣಿಸಲ್ಪಟ್ಟಿವೆ:—

ಜನಸಂಖ್ಯೆ, ಪಟ್ಟಣಗಳೂ ಹಳ್ಳಿಗಳೂ.

	ಕ್ಷೇತ್ರ ಚೌ.ಮೈ.	ಚೌ ಮೈಲಿಗೆ ಜನಸಂಖ್ಯೆ.	ಪಟ್ಟಣಗಳು.	ಹಳ್ಳಿಗಳು.
ಗದಗು.	೬೯೯	೧೯೭	೨	೯೮
ನವಲಗುಂದ	೫೬೫	೧೬೮	೩	೮೩
ಕರ್ಜಗಿ	೪೪೧	೨೩೭	೧	೧೨೭
ರೋಣ.	೪೩೨	೨೩೯	೨	೮೪
ಧಾರವಾಡ.	೪೩೦	೨೯೫	೨	೧೨೯
ರಾಣೇಬೆನ್ನೂರು.	೪೦೫	೨೫೭	೩	೧೧೬
ಕೋಡ.	೪೦೦	೨೪೧	....	೧೭೬
ಬಂಕಾಪುರ.	೩೪೪	೨೬೩	೧	೧೪೪
ಹುಬ್ಬಳ್ಳಿ.	೩೧೧	೩೯೯	೧	೭೪
ಹಾನಗಲ್ಲು.	೩೦೦	೨೫೯	೧	೧೫೬
ಕಲಘಟಗಿ.	೨೩೫	೧೯೫	....	೯೯

ಪಟ್ಟಣಗಳ ಜನಸಂಖ್ಯೆ.

ಪಟ್ಟಣಗಳು.	೧೮೭೨ ಇಸ್ವಿ.	೧೮೯೧ ಇಸ್ವಿ.	೧೯೦೧ ಇಸ್ವಿ.	೩೦ ವರ್ಷದ ಬೆಳವಣಿಗೆಯು ಸಂಖ್ಯೆ
ಅಣ್ಣಿಗೇರಿ	೭೦೯೮	೭೯೭೫	೭೧೭೨	೭೪
ಬಂಕಾಪುರ	೬೨೬೮	೬೫೨೮	೬೩೬೦	೯೨
ಬ್ಯಾಡಿಗಿ.	೪೨೨೦	೫೧೪೯	೬೬೫೯	೨೪೩೯
ಧಾರವಾಡ.	೨೭೧೩೬	೩೨೮೪೧	೩೧೨೭೯	೪೧೪೩
ಗದಗು.	೧೯೦೩೫	೨೩೮೯೯	೩೦೬೫೨	೧೧೬೧೭
ಗಜೇಂದ್ರಗಡ.	೭೬೬೫	೮೦೩೧	೮೮೫೩	೧೧೮೮
ಹಾವೇರಿ	೫೪೬೫	೬೭೫೮	೭೯೭೪	೨೫೦೯
ಹೆಬ್ಬಳ್ಳಿ	೬೪೩೦	೫೭೧೯	೫೨೯೪	೮೧೧
ಹುಬ್ಬಳ್ಳಿ	೩೭೯೬೧	೫೨೫೯೫	೬೦೨೧೪	೨೨೨೫೩
ಮುಳಗುಂದ	೬೮೪೪	೬೭೬೨	೭೫೩೩	೭೭೯
ನರಗುಂದ	೯೯೩೧	೯೫೫೬	೧೦೪೧೬	೪೮೫
ನವಲಗುಂದ	೯೫೭೮	೮೯೪೯	೭೮೬೨	೧೭೧೬
ರಾಣೇಬೆನ್ನೂರು	೧೧,೬೨೩	೧೩೭೬೧	೧೪೮೫೧	೩೨೨೮
ರೋಣ	೫೨೫೧	೬೪೧೮	೭೨೯೮	೨೦೪೭
ತುಮ್ಮಿನಕಟ್ಟಿ	೪೭೦೮	೫೭೪೭	೬೩೪೧	೧೬೩೩
	೧೭೪೨೫೬	೨೦೭೨೮೯	೨೨೫೬೦೧	

ಈ ಕೋಷ್ಟಕದಿಂದ ಈ ಜಿಲ್ಹೆಯಲ್ಲಿ ಹಳ್ಳಿಗಳ ಸಂಖ್ಯೆಯು ವಿಪರೀತವಿರುವದೆಂದೂ ಪಟ್ಟಣಗಳ ಸಂಖ್ಯೆಯು ತೀರ ಕಡಿಮೆ ಇರುವದೆಂದೂ ಗೊತ್ತಾಗುವದು. ಕೃಷಿಕರ್ಮದಿಂದ ಉಪಜೀವನಮಾಡುವ ನಲ್ಲಿ ಹಳ್ಳಿಗಳೇ ಹೆಚ್ಚಿರುವವು. ಜನರು ತಮ್ಮ ಹೊಲದ ನೆರೆಯಲ್ಲಿ ಮನೆಗಳನ್ನು ಕಟ್ಟಿಕೊಂಡು ಬಾಳುವರು. ಕೈಗಾರಿಕೆಗಳಿದ್ದಲ್ಲಿ ಪಟ್ಟಣಗಳು ಹೆಚ್ಚಿರುವವು. ಧಾರವಾಡ ಜಿಲ್ಹೆಯಲ್ಲಿ ಕೈಗಾರಿಕೆಗೆ ಹೆಸರಾದ ಪಟ್ಟಣಗಳು ಒಂದೆರಡಲ್ಲದೆ ಹೆಚ್ಚು ಇಲ್ಲ. ಇದರ ಕಾರಣಗಳನ್ನು

ಕೈಗಾರಿಕೆಯ ಬಗ್ಗೆ ಹೇಳುವಾಗ ಕೊಟ್ಟಿದ್ದೇವೆ. ಈ ಜಿಲ್ಹೆಯಲ್ಲಿರುವ ಹದಿನಾರು ಪಟ್ಟಣಗಳು ಕೈಗಾರಿಕೆಯಿಂದಾಗಲಿ, ವ್ಯಾಪಾರದಿಂದಾಗಲಿ ಪಟ್ಟಣಗಳಾಗಿವೆ ಎಂಬದು ಗೊತ್ತಾಗುವದು. ಹುಬ್ಬಳ್ಳೀ ತಾಲೂಕಿನಲ್ಲಿ ಹುಬ್ಬಳ್ಳಿಯೂ, ಧಾರವಾಡ ತಾಲೂಕಿನಲ್ಲಿ ಧಾರವಾಡವೂ, ಗದಗಿನಲ್ಲಿ ಗದಗವೂ ದೊಡ್ಡ ಪಟ್ಟಣಗಳಿವೆ. ಇವು ವ್ಯಾಪಾರ-ಕೈಗಾರಿಕೆಗಳ ಬಗ್ಗೆ ಹೆಸರಾಗಿರುವವು. ಆದ್ದರಿಂದ ಇವುಗಳ ಜನಸಂಖ್ಯೆಯು ೩೦೦೦೦ಕ್ಕಿಂತ ಹೆಚ್ಚಿರುವದು. ರಾಣೇಬೆನ್ನೂರು, ನರಗುಂದ, ಬ್ಯಾಡಿಗಿ, ಹಾವೇರಿ. ಅಣ್ಣಿಗೇರಿ ಇವು ಬೆಳೆಯುಳ್ಳ ಪ್ರದೇಶದ ಮಧ್ಯದಲ್ಲಿದ್ದು, ತಕ್ಕಮಟ್ಟಿಗೆ ವ್ಯಾಪಾರದ ಸ್ಥಳಗಳಾಗಿವೆ. ಉಳಿದವು ತಾಲೂಕಿನ ಮುಖ್ಯ ಸ್ಥಳಗಳಿರುವದರಿಂದಲೂ ಇತರ ಕಾರಣಗಳಿಂದಲೂ ಪಟ್ಟಣಗಳಾಗಿವೆ.

ಮೇಲಿನ ಕೋಷ್ಟಕದಿಂದ ಯಾವ ತಾಲೂಕುಗಳಲ್ಲಿ ಹಳ್ಳಿಗಳ ಸಂಖ್ಯೆಯು ಹೆಚ್ಚು ಇರುವದೆಂಬದು ಗೊತ್ತಾಗುವದು. ಹಾನಗಲ್ಲಿನಲ್ಲಿ ೧೦೦ ಚ. ಮೈಲಿಗೆ ೫೦ ಹಳ್ಳಿಗಳಿರುವವು. ಕೋಡ, ಬಂಕಾಪುರಗಳಲ್ಲಿ ೪೪, ಕಲಘಟಗಿಯಲ್ಲಿ ೩೬. ಇವು ನಾಲ್ಕು ತಾಲೂಕುಗಳು ಪೂರ್ಣವಾಗಿ ಮಲ್ಲಾಡದ ತಾಲೂಕುಗಳು. ಧಾರವಾಡ, ರಾಣೇಬೆನ್ನೂರು, ಕರ್ಜಿಗಿ, ಹುಬ್ಬಳ್ಳಿ ಇವು ಗಡಿನಾಡಿನ ತಾಲೂಕುಗಳು. ಇವುಗಳಲ್ಲಿ ಅನುಕ್ರಮವಾಗಿ ೧೦೦ ಚ. ಮೈಲಿಗೆ ೩೦, ೨೯, ೨೮, ೨೪ ಹಳ್ಳಿಗಳಿರುವವು. ಗದಗು, ರೋಣ, ನವಲಗುಂದ ಇವು ಬೈಲುಸೀಮೆಯ ತಾಲೂಕುಗಳು. ಇವುಗಳಲ್ಲಿ ೧೦೦ ಚ. ಮೈಲಿಗೆ ೨೦ಕ್ಕಿಂತ ಕಡಿಮೆಯೆಂದರೆ ಅನುಕ್ರಮವಾಗಿ ೧೪, ೧೯, ೧೬ ಹಳ್ಳಿಗಳಿವೆ; ಈ ಮೇರೆಗೆ ಕೆಲವು ತಾಲೂಕುಗಳಲ್ಲಿ ಹಳ್ಳಿಗಳ ಸಂಖ್ಯೆಯು ಹೆಚ್ಚಾಗಿರುವದಕ್ಕೂ, ಕೆಲವುಗಳಲ್ಲಿ ಕಡಿಮೆಯಾಗಿರುವದಕ್ಕೂ ಕಾರಣಗಳನ್ನು ಸುಲಭವಾಗಿ ತರ್ಕಿಸಬಹುದು. ಮಲ್ಲಾಡದಲ್ಲಿ ನೀರಿನ ಸಂಚಯವು ಹೆಚ್ಚು. ಮಳೆಯು ಬೈಲುಸೀಮೆಗಿಂತ ನಿಯಮಿತವಾಗಿ ಬೀಳುತ್ತದೆ. ಭೂಮಿಯು ಮರಡಿಗಳಿಂದ ತುಂಬಿರುತ್ತದೆ. ಈ ಮರಡಿಗಳ ಸುತ್ತಲಿರುವ ಬೈಲುಗಳಲ್ಲಿಯೇ ಹೊಲಗಳಿರುವವು. ಆದ್ದರಿಂದ, ಪ್ರತಿಯೊಂದು ಅನುಕೂಲವಾದ ಮರಡಿಯ ಬದಿಯಲ್ಲಿ ಒಂದು ಹಳ್ಳಿಯಾಗಲಿಕ್ಕೆ ಅನುಕೂಲವಿರುವದು. ಆದರೆ, ಬೈಲುಸೀಮೆಯಲ್ಲಿ ಈ ಅನುಕೂಲಗಳಿರುವದಿಲ್ಲ. ನೀರಿನ ತಾಪತ್ರಯವು ಬಹಳ

ಮಳೆ ನಿಯಮಿತವಾದದ್ದಿರುವದಿಲ್ಲ. ನೆರೆನೆರೆಯಲ್ಲಿ ಹಳ್ಳಿಗಳಾಗಲಿಕ್ಕೆ ಅನುಕೂಲವಿರುವದಿಲ್ಲ. ಆದ್ದರಿಂದ, ಈ ಭಾಗದಲ್ಲಿ ಹಳ್ಳಿಗಳು ದೂರ ದೂರ ಇರುತ್ತವೆ. ಗಡಿನಾಡಿನಲ್ಲಿ ಇವೆರಡೂ ಲಕ್ಷಣಗಳಿರುವದರಿಂದ, ಅಲ್ಲಿಯ ಹಳ್ಳಿಗಳು ಮಲ್ನಾಡದ ಹಳ್ಳಿಗಳಿಗಿಂತ ದೂರದಲ್ಲಿಯೂ, ಬೈಲುಸೀಮೆಯ ಹಳ್ಳಿಗಳಿಗಿಂತ ಸಮೀಪದಲ್ಲಿಯೂ ಇರುವವು.

ಮೇಲೆ ಕೊಟ್ಟ ಎರಡನೆಯ ಕೋಷ್ಟಕದಿಂದ ಪಟ್ಟಣಗಳ ಜನಸಂಖ್ಯೆಯು ಯಾವಕಾರಣಗಳಿಂದ ತೀವ್ರವಾಗಿ ಹೆಚ್ಚುತ್ತದೆಂಬದು ಗೊತ್ತಾಗುವದು. ಮಳೆಯು ಕಡಿಮೆಯಾಗಿ ಕಾಳುಗಳು ತುಟ್ಟಿಯಾದರೆ, ಹಳ್ಳಿಯ ಜನರು ಹೋರೆಗಳನ್ನು ಹುಡುಕುತ್ತ ಪಟ್ಟಣಗಳಿಗೆ ಬರುವದುಂಟು. ಆದರೆ, ಹಳ್ಳಿಯ ಜನರು ಪಟ್ಟಣಗಳಿಗೆ ಹೋಗುವದನ್ನು ಪ್ಲೇಗರೋಗವು ತಕ್ಕಮಟ್ಟಿಗೆ ಪ್ರತಿಬಂಧಿಸಿರುವದು. ಆದಬೂ, ಕೂಲಿಯ ಆಶೆಗೆ ಜನರು ಪಟ್ಟಣಗಳಿಗೆ ಹೋಗುವದುಂಟು. ಕೂಲಿಯು ವರ್ಷದವರೆಗೆ ನಿಶ್ಚಯವಾಗಿ ದೊರೆಯುವಂತಿದ್ದರೆ, ಅವರು ಪಟ್ಟಣದಲ್ಲಿಯೇ ನೆಲೆಗೊಳ್ಳುವದುಂಟು. ಇನ್ನು ಕೈಗಾರಿಕೆಗಳು ಬೆಳೆದರೆ ಮಾತ್ರ, ಜನರು ಪಟ್ಟಣವನ್ನು ಸೇರಬಹು ದೆಂಬದು ಸ್ಪಷ್ಟವದೆ. ಧಾರವಾಡ ಜಿಲ್ಹೆಯಲ್ಲಿ ಯಾವ ಯಾವ ಪಟ್ಟಣಗಳು ೧೮೭೧ ರಿಂದ ೧೯೦೧ ವರೆಗೆ, ಅಂದರೆ ಮೂವತ್ತು ವರ್ಷದ ಅವಧಿಯಲ್ಲಿ, ಎಷ್ಟು ಹೆಚ್ಚಿರುವವೆಂಬದನ್ನು ನೋಡಿದರೆ, ಹುಬ್ಬಳ್ಳಿಯ ಜನಸಂಖ್ಯೆಯು ೨೨೪೦ ರಿಂದಲೂ, ಗದಗಿನ ಜನಸಂಖ್ಯೆಯು ೧೧೬೦೦ ರಿಂದಲೂ ಹೆಚ್ಚಿ ರುವದೆಂಬದು ಸ್ಪಷ್ಟವಾಗುವದು. ಈ ಜಿಲ್ಹೆಯಲ್ಲಿ ಕೈಗಾರಿಕೆಯ ಬಗ್ಗೆಯೂ ವ್ಯಾಪಾರದ ಬಗ್ಗೆಯೂ ಹೆಸರಾದ ಪಟ್ಟಣಗಳು ಇವೇ. ಈ ಮೇರೆಗೆ ಕೈಗಾರಿಕೆ-ವ್ಯಾಪಾರಗಳು ಈ ಪಟ್ಟಣಗಳಲ್ಲಿಯೇ ಯಾಕೆ ಬೆಳೆಯುತ್ತಾ ಇವೆ? ಎಂಬ ಬಗ್ಗೆ ಕಾರಣಗಳನ್ನು ಮುಂದಿನ ಎರಡು ಪ್ರಕರಣಗಳಲ್ಲಿ ವಿವರಿಸುವೆವು.

ಈ ಜಿಲ್ಹೆಯ ಹಳ್ಳಿಗಳಾಗಲಿ, ಪಟ್ಟಣಗಳಾಗಲಿ ನೋಡಲಿಕ್ಕೆ ಚಂದವಾಗಿರುವದಿಲ್ಲ. ಬಹುಶಃ ಎಲ್ಲ ಹಳ್ಳಿಗಳ ಸುತ್ತಲು ಮಣ್ಣಿನ ಗೋಡೆಗಳಾಗಲಿ, ಕೋಟೆಗಳಾಗಲಿ ಇದ್ದವೆಂದು ತೋರುತ್ತದೆ. ಆದರೆ, ಇತ್ತಲಾಗಿ ಇವೆಲ್ಲ ಹಾಳುಬಿದ್ದಿರುತ್ತವೆ. ಇವುಗಳ ಕಲ್ಲುಗಳನ್ನು ಹಳ್ಳಿಯ ಜನರು ಮನೆಗಳಿಗೋಸ್ಕರ ಉಪಯೋಗಿಸುವರು. ಹಳ್ಳಿಗಳಲ್ಲಿ ಹೆಂಟೆಯ ಮನೆಗ

ಳೇ ಬಹಳ. ಸಹ್ಯಾದ್ರಿಯ ಅಂಚಿನಲ್ಲಿರುವ ಮಲೆನಾಡಿನ ಹಳ್ಳಿಗಳ ಸುತ್ತಲು ಹುಣಸೆ, ಮಾವು, ಅರಳೆ ಮೊದಲಾದ ಗಿಡಗಳು ಬೇಕಾದಷ್ಟು ನೆರಳನ್ನು ಕೊಡುತ್ತವೆ. ಹಳ್ಳಿಗಳ ನೆರೆಯಲ್ಲಿ ತೆಂಗು, ಅಡಿಕೆ, ಬಾಳೆ, ಕಾಯಿಪಲ್ಲೆಗಳ ತೋಟಗಳು ಇರುವವು. ಆದರೆ, ಧಾರವಾಡದ ಪೂರ್ವಭಾಗದಲ್ಲಿರುವ ಬೈಲು ಸೀಮೆಯ ಹಳ್ಳಿಗಳಲ್ಲಿ ನೆರಳು ದುರ್ಲಭ; ಒಂದೆರಡು ಜಾಲಿ ಇಲ್ಲವೆ ಬೇವಿನಗಿಡಗಳನ್ನು ಮಾತ್ರ ಅಲ್ಲಲ್ಲಿ ಕಾಣಬಹುದು.

ಹಳ್ಳಿಗಳ ಒಳಭಾಗವನ್ನು ನೋಡುವದಾಗುವದಿಲ್ಲ; ಇಷ್ಟು ಕನಿಷ್ಠವಾಗಿರುತ್ತದೆ. ಪೂರ್ವಕಾಲದಲ್ಲಿ ದೇಶದಲ್ಲಿ ಬಂದೋಬಸ್ತು ಇಲ್ಲದ್ದರಿಂದಲೂ, ಉಂಡುತಿಂದು ಸೌಖ್ಯದಲ್ಲಿದ್ದದ್ದನ್ನು ಕಂಡರೆ ಹೆಚ್ಚು ತೆರಿಗೆ ಕಟ್ಟುವರೆಂಬ ಅಂಜಿಕೆಯಿಂದಲೂ, ಮನೆಗಳಿಗೆ ದೊಡ್ಡ ದೊಡ್ಡ ಕಿಡಿಕೆಗಳನ್ನೂ ಬಾಗಿಲುಗಳನ್ನೂ ಹಚ್ಚಿದರೆ ಕಳ್ಳರ ಕಾಟ ತಪ್ಪಿಸುವದು ಕಷ್ಟವಾಗುವದೆಂಬ ಭಯದಿಂದಲೂ ಶ್ರೀಮಂತರು ಸಹ ಕನಿಷ್ಠ ತರದ ಮನೆಗಳನ್ನು ಕಟ್ಟುತ್ತಿದ್ದರು; ಮತ್ತು ಮನೆಗಳಿಗೆ ಸಣ್ಣ ಬಾಗಿಲುಗಳನ್ನು ಹೆಚ್ಚುತ್ತಿದ್ದರು. ಮನೆಯೊಳಗೆ ಹವೆ-ಬೆಳಕು ಬರಲಿಕ್ಕೆ ಮಾರ್ಗವೆಂದರೆ ಈ ಸಣ್ಣ ಬಾಗಿಲುಗಳೇ. ಕೆಲಕೆಲವು ಕಡೆಯಲ್ಲಿ ಮಾಳಿಗೆಯಲ್ಲಿ ಬೆಳಕಿಂಡಿಗಳನ್ನು ಬಿಡುತ್ತಿದ್ದರು. ಪೂರ್ವಕಾಲದ ಪಟ್ಟಣದ ಮನೆಗಳು ಇಂಥವೇ ಇರುತ್ತಿದ್ದವು. ಓಣಿಗಳು ಸೊಟ್ಟಡೊಂಕಾಗಿಯೂ, ಬಹಳ ಹೊಲಸಾಗಿಯೂ ಇರುವವು. ಬಳಿಕೆಯ ನೀರೆಲ್ಲ ದಾರಿಯಲ್ಲೇ ಇಂಗುವದು. ಆದರೆ, ಇತ್ತಲಾಗಿ ಇಪ್ಪತ್ತು ಮೂವತ್ತು ವರ್ಷಗಳಿಂದ ಪಟ್ಟಣಗಳಲ್ಲಿ ಮನೆಗಳು ಸುಧಾರಿಸುತ್ತ ನಡೆದವೆ. ಕಳ್ಳರ ಹಾವಳಿಯು ಕಡಿಮೆಯಾಗಿದೆ. ಜನರ ಮನೆಯನ್ನು ನೋಡಿ ಸರಕಾರದವರು ತೆರಿಗೆಯನ್ನು ಹೆಚ್ಚಿಸಬಹುದೆಂಬ ಅಂಜಿಕೆಯು ಹಾರಿಹೋಗಿದೆ. ಸರಕಾರದವರು ಜನರಿಗೆ ಕೊಡುವ ಶಿಕ್ಷಣದಿಂದ, ಜನರಿಗೆ ಸ್ವಚ್ಛತೆಯ ಸುಪರಿಣಾಮಗಳೂ ಗೊತ್ತಾಗುತ್ತ ನಡೆದವೆ. ಆದರೂ, ಹಳ್ಳಿಗಳಲ್ಲಿ ಮಾತ್ರ ಇನ್ನೂ ಹೇಳುವಷ್ಟು ಸುಧಾರಣೆಯು ಕಾಣುವದಿಲ್ಲ ಪಟ್ಟಣಗಳಲ್ಲಿಯಾದರೂ ಬಡಬಗ್ಗರಿರುವ ಭಾಗಗಳು ಮೊದಲಿನಂತೆಯೇ ಉಳಿದಿರುವವು. ಆದರೆ, ಬ್ರಾಹ್ಮಣರೂ, ವಿದ್ಯೆಕಲಿತ ಲಿಂಗವಂತರೂ ಹೊಸದಾಗಿ ಕಟ್ಟಿಸುತ್ತಿರುವ ಮನೆಗಳು ಸಾಧಾರಣ ಚಂದವಿದ್ದು, ಹವೆ-ಬೆಳಕುಗಳ, ದೃಷ್ಟಿಯಿಂದ ತಕ್ಕಮಟ್ಟಿಗೆ ಸಮಾಧಾನಕರವಾದವಿರು

ತ್ತವೆ. ಮಾರ್ಗಗಳು ಕೆಲಮಟ್ಟಿಗೆ ವಿಶಾಲವಾಗಿರುತ್ತವೆ. ಹೊಲಸಿಗೆ ಬಹಳ ಆಶ್ರಯವಿರುವದಿಲ್ಲ. ಒಟ್ಟಿಗೆ ಪಟ್ಟಣಗಳಲ್ಲಿರುವ ಜನರಿಗೂ ಸುಧಾರಣೆ ಮಾಡಲಿಕ್ಕೆ ಇನ್ನೂ ಬೇಕಾದಷ್ಟು ಅವಕಾಶವಿರುವದು.

ಸರಕಾರದವರು ಬಹಳ ಹಣ ವೆಚ್ಚಮಾಡಿ ನಮ್ಮ ಜನರಿಗೆ ವಿದ್ಯೆಯನ್ನು ಕಲಿಸುವರಷ್ಟೇ. ಆದರೆ. ಇದರಿಂದ ಸ್ವಚ್ಛತೆಗೂ, ಬೆಳಕು-ಹವೆಗಳಿಗೂ, ಆರೋಗ್ಯಕ್ಕೂ ಇರುವ ಸಂಬಂಧವು ಜನರಿಗೆ ಇನ್ನೂ ಚನ್ನಾಗಿ ಗೊತ್ತಾಗಿಲ್ಲ. ಇತ್ತಲಾಗಿ ಪ್ಲೇಗ ರೋಗವು ಮಾತ್ರ ತನ್ನ ಭಯಂಕರವಾದ ಶಿಕ್ಷೆಯ ಕ್ರಮದಿಂದ ನಮ್ಮ ಜನರಿಗೆ ಈ ವಿಷಯವಾಗಿ ಬುದ್ಧಿಯನ್ನು ಕಲಿಸುತ್ತಿದೆ. ಪ್ಲೇಗಿನ ಭಯದಿಂದ ಇತ್ತಲಾಗಿ ಜನರು ಊರಿಂದ ಸ್ವಲ್ಪ ಅಂತರದ ಮೇಲೆ ಸ್ವಚ್ಛವಾದ ಸ್ಥಳವನ್ನು ನೋಡಿ, ದೂರ ದೂರದಲ್ಲಿ ಹವೆ ಬೆಳಕುಗಳು ಚನ್ನಾಗಿ ಇರುವಂತೆ, ಗುಡಿಸಲುಗಳನ್ನೂ ಮನೆಗಳನ್ನೂ ಕಟ್ಟುತ್ತಿರುವರು. ಈ ಕಾರಣದಿಂದ ನಮ್ಮ ಜಿಲ್ಹೆಯ ಹಳ್ಳಿಗಳ ಹಾಗೂ ಪಟ್ಟಣಗಳ ಸೋಟವು ಬದಲಾಗುತ್ತ ನಡೆದಿರುವದು. ಧಾರವಾಡ ಪಟ್ಟಣವನ್ನಾಗಲಿ ಅದರ ನಕಾಶವನ್ನಾಗಲಿ ನೋಡಿದರೆ, ಈಗಿನ ಸ್ಥಿತಿಗೂ ಹತ್ತಿಪ್ಪತ್ತು ವರ್ಷಗಳ ಹಿಂದಿನ ಸ್ಥಿತಿಗೂ ಆಗಿರುವ ಅಭ್ಯಂತರವು ಗೋಚರವಾಗುವದು.

ಜನರು.

ಧಾರವಾಡ ಜಿಲ್ಹೆಯಲ್ಲಿ ಅನೇಕ ಧರ್ಮಗಳ ಜನರು ವಾಸಿಸುವರು. ಅವರಲ್ಲಿ ಹಿಂದುಗಳು ೧೦೦ಕ್ಕೆ ೮೬ ಇರುವರು. ಮುಸಲ್ಮಾನರು ೧೦೦ಕ್ಕೆ ೧೨ ಇರುವರು. ಜೈನರು ೧೦೦ಕ್ಕೆ ೧ ಇರುವರು. ಕ್ರಿಸ್ತೀ ಜನರ ಸಂಖ್ಯೆಯು ಬಹಳ ಕಡಿಮೆ, ಅಂದರೆ ೪೬೪೨ ಇರುವದು. ಇವರಲ್ಲದೆ ಕೆಲವು ಯಹುದಿಯರನ್ನೂ ಪಾರ್ಸೀಜನರನ್ನೂ ಕಾಣಬಹುದು.

ಹಿಂದೂ ಜನರಲ್ಲಿ ಹಲವು ಜಾತಿಗಳುಂಟು. ಪ್ರಾಚೀನ ಕಾಲದಲ್ಲಿ ಹಿಂದೂ ಜನರಲ್ಲಿ ಬ್ರಾಹ್ಮಣ, ಕ್ಷತ್ರಿಯ, ವೈಶ್ಯ, ಶೂದ್ರ ಎಂಬ ನಾಲ್ಕು ವರ್ಣಗಳಿದ್ದವು. ಬರಬರುತ್ತ ಈ ವರ್ಣಗಳಲ್ಲಿ ಭೇದಗಳುಂಟಾಗಿ, ಸದ್ಯಕ್ಕೆ ಹಿಂದೂ ಜನರಲ್ಲಿ ಅಸಂಖ್ಯ ಜಾತಿಗಳುಂಟಾಗಿವೆ. ಒಂದೇ ಧರ್ಮವನ್ನು ಅನುಸರಿಸುವ ಜನರಲ್ಲಿ ಸಹ ಅನೇಕ ಜಾತಿಗಳುಂಟಾಗಿರುವವು.

ಬೇರೆ ಬೇರೆ ಉದ್ಯೋಗಗಳನ್ನು ಮಾಡುವವರು ಕೂಡಾ ಬೇರೆ ಬೇರೆ ಜಾತಿಯವರೆಂದು ಹೇಳಿಕೊಳ್ಳುವರು. ಇಲ್ಲಿ ಮೂರು ನಾಲ್ಕು ಮುಖ್ಯ ಜಾತಿಯವರನ್ನು ಕುರಿತು ನಾವು ಇಲ್ಲಿ ಬರೆಯುವೆವು:—

ಧಾರವಾಡ ಜಿಲ್ಹೆಯ ಹಿಂದೂ ಜನರಲ್ಲಿ ಬ್ರಾಹ್ಮಣರು, ಲಿಂಗಾಯತರು ಎಂಬ ಎರಡು ಜಾತಿಯ ಜನರು ಮುಖ್ಯವಾಗಿ ಇರುವರು. ಇವರಲ್ಲದೆ ಜೈನರು, ಮರಾಟರು, ಕೋಮಟಿಗರು, ಮಾರವಾಡೀರು, ಬಡಿಗರು, ಉಪ್ಪಾರರು, ಸಿಂಪಿಗರು, ಅಕ್ಕಸಾಲಿಗರು, ಕುರುಬರು ಮೊದಲಾದ ಹಲವು ಜಾತಿಯವರು ಉಂಟು.

ಬ್ರಾಹ್ಮಣರಲ್ಲಿ ಅನೇಕ ವರ್ಗಗಳುಂಟು. ಇವುಗಳಲ್ಲಿ ದೇಶಸ್ಥ, ಚಿತ್ಪಾವನ ಇಲ್ಲವೆ ಕೊಂಕಣಸ್ಥ, ಹಾಗೂ ಕರ್ಹಾಡೆ ಎಂಬ ಮೂರು ಮುಖ್ಯ ವರ್ಗಗಳು. ದೇಶಸ್ಥ, ಕೊಂಕಣಸ್ಥ, ಕರ್ಹಾಡೆ ಎಂಬ ಹೆಸರುಗಳು ಅನ್ವರ್ಥಕವಾಗಿರುತ್ತವೆ. ಮೂಲತಃ ಕೊಂಕಣದಲ್ಲಿ ಇದ್ದು ದಕ್ಷಿಣ ಹಿಂದುಸ್ಥಾನದಲ್ಲಿ ಬೇರೆ ಬೇರೆ ಕಡೆಗೆ ವಾಸಿಸುವವರು ಕೊಂಕಣಸ್ಥರೆನಿಸುವರು. ಕೊಂಕಣದ ಪೂರ್ವಕ್ಕಿರುವ ಪ್ರದೇಶಕ್ಕೆ ದೇಶವೆಂಬ ಹೆಸರು. ಈ ಭಾಗವೇ ಮೂಲಸ್ಥಾನವಾದವರು ದೇಶಸ್ಥರು. ದೇಶಸ್ಥರಲ್ಲಿ ವೈಷ್ಣವರೆಂದೂ, ಸ್ಮಾರ್ತರೆಂದೂ ಎರಡು ಮತದವರಿರುವರು. ಶಂಕರಾಚಾರ್ಯರ ಅನುಯಾಯಿಗಳು ಸ್ಮಾರ್ತರು, ಮಧ್ವಾಚಾರ್ಯರ ಅನುಯಾಯಿಗಳು ವೈಷ್ಣವರು; ಸ್ಮಾರ್ತರ ಮುಖ್ಯ ದೇವತೆಯು ಶಿವನು; ವೈಷ್ಣವರ ಮುಖ್ಯ ದೇವತೆಯು ವಿಷ್ಣುವು. ಕೊಂಕಣಸ್ಥರೆಲ್ಲ ಶಂಕರಾಚಾರ್ಯರ ಮತಕ್ಕೆ ಸೇರಿರುವರು.

ಸಾತಾರಾ ಜಿಲ್ಹೆಯೊಳಗಿನ ಕರ್ಹಾಡ ಎಂಬ ಗ್ರಾಮವೇ ಕರ್ಹಾಡರ ಮೂಲಸ್ಥಾನವು. ಇವರ ಧರ್ಮಗುರುಗಳು ಶಂಕರಾಚಾರ್ಯರು. ದೇಶಸ್ಥ, ಕೊಂಕಣಸ್ಥ, ಕರಾಡರಲ್ಲಿ ಅನ್ನವ್ಯವಹಾರವು ನಡೆಯುತ್ತದೆ; ಆದರೆ ಲಗ್ನವ್ಯವಹಾರವು ಮಾತ್ರ ಪ್ರಚಾರದಲ್ಲಿಲ್ಲ.

ದೇಶಸ್ಥರಲ್ಲಿ ವೈಷ್ಣವರೆಂತಲೂ ಸ್ಮಾರ್ತರೆಂತಲೂ ಭೇದವುಂಟಷ್ಟೇ. ವೈಷ್ಣವರು ಸಾಧಾರಣ ಕಪ್ಪುಮೈಬಣ್ಣವುಳ್ಳವರೂ, ಚಲುವರೂ, ಕಸುವುಳ್ಳವರೂ, ಒಳ್ಳೇ ಮೈಕಟ್ಟುಳ್ಳವರೂ ಇರುತ್ತಾರೆ. ಇವರು ಶ್ರೀಮುದ್ರೆಗಳನ್ನೂ ಉದ್ದನಾಮಗಳನ್ನೂ ಧರಿಸುವರು. ಹಣೆಯ ಮೇಲೆ ಅಂಗಾರವನ್ನು ಎಳೆದು,

ಮಧ್ಯದಲ್ಲಿ ಅಕ್ಷತೆಯ ಬೊಟ್ಟನ್ನು ಹಚ್ಚುವರು. ಇವರು ಆಡುವ ಭಾಷೆ ಕನ್ನಡವಿದ್ದು ಅವರೊಳಗೆ ಮರಾಠಿಭಾಷೆಯ ಶಬ್ದಗಳು ಕೆಲವು ಕೂಡಿರುತ್ತವೆ. ಇವರು ಆಡುವ ಭಾಷೆಯು ಮೇಲ್ತರದ ಕನ್ನಡವೆಂದೆಣಿಸುವದು. ಇವರಲ್ಲಿ ಗೃಹಸ್ಥರೆಂದೂ ವೈದಿಕರೆಂದೂ ಎರಡು ವರ್ಗಗಳಿರುವವು. ಗೃಹಸ್ಥರು ಸರಕಾರದಲ್ಲಿ ಚಿಕ್ಕದೊಡ್ಡ-ಅಧಿಕಾರಗಳನ್ನು ಸಂಪಾದಿಸಿ ಉದ್ಯೋಗಮಾಡುತ್ತಾರೆ. ಕೆಲವರು ವ್ಯಾಪಾರ, ಕೆಲವರು ಚಿನಿವಾರಿಕೆ, ಕೆಲವರು ಬಡ್ಡಿವ್ಯವಹಾರಮಾಡುವರು. ಕೆಲವರು ಭೂಮಿಗಳನ್ನು ಮಾಡಿಸುತ್ತಾರೆ. ಹೆಂಗಸರು ಮನೆಯ ಕೆಲಸವನ್ನು ಮಾತ್ರ ಮಾಡುವರು. ಗೃಹಸ್ಥರಿಗೆ ಶಾಸ್ತ್ರ ಪುರಾಣಗಳನ್ನು ಹೇಳುವದು, ವೈದಿಕ ಕಾರ್ಯಗಳಲ್ಲಿ ನೆರವಾಗುವದು ಯಾಚನೆಯನ್ನು ಮಾಡುವದು ಇವೇ ವೈದಿಕರ ಮುಖ್ಯ ಹೋರೆಗಳು.

ವೈಷ್ಣವರಲ್ಲಿ ಗೃಹಸ್ಥರು ವಿದ್ಯಾವಂತರಿರುವರು. ಹುಡುಗರು ಇಂಗ್ಲಿಷ ಶಾಲೆಗಳಿಗೆ ಹೋಗುವರು. ಮುಂದೆ ಕೆಲವರು ಹೆಚ್ಚಿನ ವಿದ್ಯಾಲಯಗಳಿಗೆ ಹೋಗಿ, ದೊಡ್ಡದೊಡ್ಡ ಪದವಿಗಳನ್ನು ಪಡೆಯುತ್ತಾರೆ. ಕೆಲವರು ತಮ್ಮ ಹೆಣ್ಣು ಮಕ್ಕಳನ್ನು ೯, ೧೦ ವರುಷದವರಾಗುವವರೆಗೆ ಶಾಲೆಗೆ ಕಳಿಸುತ್ತಾರೆ.

ಸ್ಮಾರ್ತರು ಸಾಧಾರಣವಾಗಿ ಚೆಲುವರು. ಇವರು ವಿಭೂತಿಯನ್ನೂ ಹಣೆಯಮೇಲೆ ಅಡ್ಡ ಗಂಧವನ್ನೂ ಹಚ್ಚುವರು. ಇವರು ಪ್ರಾಮಾಣಿಕರೂ ಒಳಿತಾಗಿ ದುಡಿಯುವವರೂ, ಆದರಾತಿಥ್ಯ ಮಾಡುವವರೂ, ಇರುತ್ತಾರೆ. ಮನೆಮಾರುಗಳನ್ನು ಸ್ವಚ್ಛವಾಗಿ ಇಡುವರು. ಇವರು ಆಡುವ ಭಾಷೆ ಕನ್ನಡ. ಮರಾಠಿ ಶಬ್ದಗಳೂ ಕೆಲವು ಕೂಡಿರುತ್ತವೆ. ಇವರಲ್ಲಿಯೂ ಗೃಹಸ್ಥರು, ವೈದಿಕರು, ಎಂಬ ಭೇದಗಳುಂಟು. ಸರಕಾರೀನೌಕರಿ, ಚಿನಿವಾರಿಕೆ, ವ್ಯಾಪಾರಗಳನ್ನು ಮಾಡುವರು. ವೈದಿಕರು ಯಾಚನಾವೃತ್ತಿಯಿಂದ ಜೀವಿಸುವರು.

ಇವರ ಕುಲದೇವತೆಗಳು ಶಿವ, ಪಾರ್ವತಿ. ಶಂಕರಾಚಾರ್ಯರು ಇವರ ಧರ್ಮಗುರುಗಳು. ಇವರ ಆಚಾರ ಸಂಪ್ರದಾಯಗಳು ವೈಷ್ಣವರ ಆಚಾರ ಸಂಪ್ರದಾಯಗಳಂತೆಯೇ ಇರುವವು. ಇವರಾದರೂ

ವೈಷ್ಣವರಂತೆಯೇ ವಿದ್ಯಾವಂತರಿರುವರು. ಹುಡುಗರು ಹೆಚ್ಚಿನ ವಿದ್ಯಾಲಯಗಳಿಗೆ ಹೋಗುವರು.

ಕೊಂಕಣಸ್ಥರು:—ಇವರ ಮೈಬಣ್ಣ ಕೆಂಪು, ಮೈಕಟ್ಟು ತೆಳ್ಳಗೆ, ಮುಖಚರ್ಯವು ಉಲ್ಲಾಸವುಳ್ಳದ್ದಿರುತ್ತದೆ. ಅಂತೂ ಇವರು ಈ ಕಡೆಯ ಬ್ರಾಹ್ಮಣರಲ್ಲಿ ಚಲುವರೆಂದೆನಿಸಿಕೊಳ್ಳುವರು. ಆದರೆ ಇವರ ಕಣ್ಣುಗಳು ಬಹುತರ ಬೆಕ್ಕಿನ ಕಣ್ಣುಗಳಂತಿದ್ದು ದೊಡ್ಡವಿರುತ್ತವೆ. ಇವರು ಹಣೆಯಮೇಲೆ ಅಕ್ಷತೆಯ ಒಂದು ಇಲ್ಲವೆ ಎರಡು ಬೊಟ್ಟುಗಳನ್ನಾಗಲಿ ಅಡ್ಡ ಗಂಧವನ್ನಾಗಲಿ ಹಚ್ಚುವರು. ಶಂಕರಾಚಾರ್ಯರು ಇವರ ಗುರುಗಳು. ಪಾರ್ವತಿ-ಪರಮೇಶ್ವರರು ಕುಲದೇವತೆಗಳು. ದತ್ತಾತ್ರೇಯ, ವಿಠೋಬಾ ದೇವತೆಗಳನ್ನೂ ಅರ್ಚಿಸುವರು.

ಇವರು ಮನೆಯಲ್ಲಿ ಮರಾಠಿ ಭಾಷೆಯನ್ನಾಡುವರು. ಧಾರವಾಡದಲ್ಲಿಯೇ ನೆಲೆಗೊಂಡ ಕೆಲವು ಮನೆತನದವರು, ಕನ್ನಡವನ್ನು ಚನ್ನಾಗಿ ಮಾತಾಡುವದುಂಟು. ಆದರೂ ಇವರ ಮಾತಿನಲ್ಲಿ ಮರಾಠಿ ಭಾಷೆಯ ಶಬ್ದಗಳು ಸೇರಿರುತ್ತವೆ.

ಇವರಲ್ಲಿಯೂ ಗೃಹಸ್ಥರು ವೈದಿಕರು ಎಂಬ ಭೇದಗಳುಂಟು. ಗೃಹಸ್ಥರು ಬಹುತರವಾಗಿ ಸರಕಾರೀ ಉದ್ಯೋಗಗಳನ್ನು ಮಾಡಿ ಜೀವಿಸುವರು. ಆದರೆ ಕೆಲವರು ಹೊಲ ಮಾಡಿಸೋಣ, ವ್ಯಾಪಾರ, ಬಡ್ಡಿವ್ಯವಹಾರ ಮುಂತಾದ ಉದ್ಯೋಗಗಳನ್ನು ಮಾಡುವರು. ವೈದಿಕರು ಯಾಚನೆಯಿಂದ ಜೀವಿಸುವರು.

ಇವರು ಮಿತವ್ಯಯಿಗಳೂ, ಬುದ್ಧಿವಂತರೂ, ಉದ್ಯೋಗಪ್ರಿಯರೂ ಇರುವರು. ಮನೆಮಾರುಗಳನ್ನು ಬಹಳ ಸ್ವಚ್ಛವಾಗಿ ಇಡುವರು.

ಇವರ ಇತರ ಸಂಪ್ರದಾಯಗಳು ದೇಶಸ್ಥರಂತೆಯೇ ಇರುವವು. ತಮ್ಮ ತಮ್ಮ ಮಕ್ಕಳನ್ನು ಶಾಲೆಗೆ ಕಳಿಸುವರು. ಇವರಿಗೆ ಹೊಸ ಉದ್ಯೋಗಗಳು ಸೇರುತ್ತವೆ.

ಕರ್ಹಾಡಸ್ಥರು:—ಇವರ ಮುಖಚರ್ಯ, ಉಡಿಗೆತೊಡಿಗೆ, ಆಚಾರ ವಿಚಾರಗಳೆಲ್ಲ ಬಹುತರ ಕೊಂಕಣಸ್ಥರಂತೆಯೇ ಇರುವವು. ಇವರು ಆಡುವ ಭಾಷೆ ಮರಾಠಿ. ಇವರು ಬುದ್ಧಿವಂತರೂ, ಮಿತವ್ಯಯಿಗಳೂ, ಕೆಲಸಕ್ಕೆ ಮೆಚ್ಚಿದವರೂ, ಸುಂದರರೂ, ನಿರ್ಮಲರೂ ಇರುತ್ತಾರೆ.

ಲಿಂಗಾಯತರು:–ಇವರಿಗೆ ವೀರಶೈವರೆಂತಲೂ ಹೆಸರುಂಟು. ಇವರು ಕಸುವುಳ್ಳವರೂ, ಒಳ್ಳೇ ಮೈಕಟ್ಟಿನವರೂ ಇರುತ್ತಾರೆ. ಆದರೆ ಸಾಮಾನ್ಯವಾಗಿ ಚಲುವರಲ್ಲ. ಇವರು ಹಣೆಗೆ ವಿಭೂತಿಯನ್ನು ಹಚ್ಚಿಕೊಳ್ಳುವರು. ಕೊರಳಲ್ಲಿ ಒಂದು ಬೆಳ್ಳಿಯ ಚೌಕದಲ್ಲಿ ಲಿಂಗವನ್ನು ಕಟ್ಟಿಕೊಳ್ಳುವರು. ಇವರು ಬ್ರಾಹ್ಮಣರಷ್ಟು ಚತುರರೂ ನಿರ್ಮಲರೂ ವಿದ್ಯಾವಂತರೂ ಅಲ್ಲದಿದ್ದರೂ ಸರಳಸ್ವಭಾವದವರೂ ಆದರಾತಿಥ್ಯ ಮಾಡುವವರೂ ಇರುತ್ತಾರೆ.

ಇವರು ಆಡುವ ಭಾಷೆ ಕನ್ನಡ. ಇವರ ಧರ್ಮಭಾಷೆಯು ಕನ್ನಡವಿರುವದರಿಂದ, ಇವರು ಉಪಯೋಗಿಸುವ ಭಾಷೆಯಲ್ಲಿ ಅಚ್ಚಗನ್ನಡ ಶಬ್ದಗಳು ಹಲವಿರುತ್ತವೆ. ಆದರೆ ಸಂಸ್ಕೃತದ ಸಂಪರ್ಕವಿಲ್ಲದಿರುವದರಿಂದಲೂ ಇವರಲ್ಲಿ ವಿದ್ಯಾವಂತರ ಸಂಖ್ಯೆಯು ಸ್ವಲ್ಪವಿರುವದರಿಂದಲೂ ಇವರ ಭಾಷೆಯು ಮೇಲಾದದ್ದೆಂದು ಎಣಿಸಲ್ಪಡುವದಿಲ್ಲ. ಇವರು ಶಿವನೇ ಮುಖ್ಯ ದೇವರು ಎಂದು ತಿಳಿದಾಗ್ಯೂ, ವೀರಭದ್ರ, ಮಲ್ಲಿಕಾರ್ಜುನ, ದ್ಯಾಮವ್ವ, ದುರ್ಗವ್ವ, ಹನುಮಂತ ಮುಂತಾದ ದೇವತೆಗಳನ್ನೂ ಪೂಜಿಸುವರು. ಇವರಲ್ಲಿ ಗೃಹಸ್ಥರೆಂತಲೂ ಜಂಗಮರೆಂತಲೂ, ಎರಡು ಮುಖ್ಯ ಭೇದಗಳುಂಟು. ಇವರಲ್ಲಿ ಒಟ್ಟಿಗೆ ೩೧ ಒಳಭೇದಗಳುಂಟು. ಜಂಗಮರು ಯಾವತ್ತು ಲಿಂಗವಂತಜಾತಿಗಳಿಗೆ ವಂದ್ಯರೆನಿಸಿಕೊಳ್ಳುತ್ತಾರೆ. ಇವರಲ್ಲಿ ವಿರಕ್ತರೇ ಎಲ್ಲಕ್ಕೂ ಶ್ರೇಷ್ಠರು. ಇವರು ಲಗ್ನ ಮಾಡಿಕೊಳ್ಳುವದಿಲ್ಲ. ಹೆಂಗಸರ ಮೋರೆಯನ್ನು ನೋಡುವದಿಲ್ಲ. ಜಡಿ ಬೆಳಿಸುವರು; ಗಡ್ಡ ಬಿಡುವರು; ಮಠದಲ್ಲಿ ವಾಸಿಸುವರು; ಕೌಪೀನ ಧರಿಸುವರು; ಕಾಟೆಯನ್ನು ಹೊರುವರು; ಭಿಕ್ಷೆಯಿಂದ ಜೀವಿಸುವರು. ಇವರ ಕೊರಳಿನಲ್ಲಿಯೂ ತಲೆಯಮೇಲಿನ ಟೊಪ್ಪಿಗೆಗೂ ರುದ್ರಾಕ್ಷಿ ಮಾಲೆಗಳಿರುವವು. ಸಾಮಾನ್ಯ ಜಂಗಮರಿಗೆ ವಾಡಿಕೆಯಾಗಿ ಅಯ್ಯನವರೆಂದೆನ್ನುವರು. ಅಯ್ಯನಾಗತಕ್ಕ ಹುಡುಗನಿಗೆ ೮ನೇ ವರ್ಷ ಅಯ್ಯತನವೆಂಬ ಸಂಸ್ಕಾರವನ್ನು ಮಾಡುವರು. ಇವರು ಲಗ್ನಮಾಡಿಕೊಂಡು ಮನೆಗಳಲ್ಲಿ ವಾಸಿಸುವರು. ಭಿಕ್ಷೆಯೇ ಇವರ ಉಪಜೀವನದ ಹೋರೆಯು. ಆದರೆ ಕೆಲವರು ಒಕ್ಕಲತನ ವ್ಯಾಪಾರ ಮುಂತಾದ ಹೋರೆಗಳನ್ನು ಮಾಡುತ್ತಾರೆ.

ಶೀಲವಂತರ ಸಂಖ್ಯೆಯು ಬಹು ಸ್ವಲ್ಪವಿರುತ್ತದೆ. ಇವರು ಅಂಗೆ

ಡಿಯ ವ್ಯಾಪಾರ, ಸುನ್ನಗಾರಿಕೆ ಮುಂತಾದ ಹೋರೆಗಳನ್ನು ಮಾಡುವರು. ಪಂಚಮ ಸಾಲಿಯುವರ ಸಂಖ್ಯೆಯು ಎಲ್ಲಕ್ಕೂ ಹೆಚ್ಚು ಇರುವದು.

ಮೇಲಿನ ಜಾತಿಯುವರು ಕೆಳಗಿನ ಜಾತಿಯುವರು ಮನೆಯಲ್ಲಿ ಉಣ್ಣುವದಿಲ್ಲ. ಇದೇ ಮೇರೆಗೆ ಮೇಲಿನ ಜಾತಿಯುವರು ತಮ್ಮ ಹೆಣ್ಣುಮಕ್ಕಳನ್ನು ಕೆಳಗಿನ ಜಾತಿಯುವರಿಗೆ ಕೊಡುವದಿಲ್ಲ.

ಮಠದಲ್ಲಿ ಜಾತಿನಿರ್ಬಂಧವಿಲ್ಲದೆ ಬೇಕಾದ ಜಾತಿಯ ಲಿಂಗವಂತರು ಒಂದೇ ಪಂಕ್ತಿಯಲ್ಲಿ ಕೂತು ಊಟಮಾಡುವರು. ಆದರೆ ಅಲ್ಲಿ ಜಂಗಮ ನಿರಲಿಕ್ಕೆಬೇಕು. ಜಂಗಮನು ಭಿಕ್ಷೆಬೇಡಿ ತಂದ ಅನ್ನವನ್ನು ಹಲವು ಜಾತಿಗಳ ಜನರು ಒಂದೇ ಪಂಕ್ತಿಯಲ್ಲಿ ಕೂತು ಉಣ್ಣಬಹುದು. ಹೀಗೆಯೇ ಅರವಟ್ಟಿಗೆಯಲ್ಲಿಯೂ ಹೊಲದಲ್ಲಿಯೂ ಜಾತಿನಿರ್ಬಂಧಗಳ ಕಟ್ಟಳೆಯು ಸಡಿಲಾಗುತ್ತದೆ.

ಇವರಲ್ಲಿ ಹುಡಿಗೆಯರು ದೊಡ್ಡವರಾಗುವದಕ್ಕಿಂತ ಮೊದಲು ಲಗ್ನ ಮಾಡುವರು. ಆದರೆ ವಿಧವೆಯರಿಗೆ ಪುನರ್ವಿವಾಹವುಂಟು.

ಲಿಂಗವಂತರಲ್ಲಿ ಕಲಿತವರ ಸಂಖ್ಯೆಯು ಕಡಿಮೆ. ಇತ್ತಲಾಗಿ ಕೆಲವರು ತಮ್ಮ ಹುಡುಗರನ್ನು ಇಂಗ್ಲಿಷ ಶಾಲೆಗಳಿಗೂ, ಹೆಚ್ಚಿನ ವಿದ್ಯಾಲಯಗಳಿಗೂ ಕಳಿಸುವರು. ಲಿಂಗವಂತರು ಅನೇಕ ತರದ ಹೋರೆಗಳನ್ನು ಮಾಡುವರು. ಈ ಹೋರೆಗಳಿಂದ ಇವರಲ್ಲಿ ಕೆಲವು ಜಾತಿಗಳೂ ಉಂಟಾಗಿವೆ. ಇವರ ಮುಖ್ಯ ಉದ್ಯೋಗವು ವ್ಯಾಪಾರ ಹಾಗೂ ಒಕ್ಕಲತನ. ಕೆಲವರು ಸರಕಾರಿ ನೌಕರಿಯನ್ನು ಹಿಡಿಸಿರುವರು. ಇವರು ತಮ್ಮ ಹೆಣ್ಣುಮಕ್ಕಳುಗಳನ್ನು ೧೦-೧೨ ವರ್ಷಗಳವರೆಗೆ ಶಾಲೆಗೆ ಕಳಿಸುವದುಂಟು.

ಮುಸಲ್ಮಾನರು:—ಧಾರವಾಡ ಜಿಲ್ಹೆಯಲ್ಲಿ ಬಹುತರ ಯಾವತ್ತು ಮುಸಲ್ಮಾನರು ಮುಸಲ್ಮಾನ ಧರ್ಮವನ್ನು ಸ್ವೀಕರಿಸಿದಂಥ ಹಿಂದೂ ಜನರೇ ಇರುತ್ತಾರೆ. ಈ ಧರ್ಮದಲ್ಲಿ ಸುನ್ನೀ ಮತ್ತು ಶಿಯಾ ಎಂಬೆರಡು ಮುಖ್ಯ ಪಂಥಗಳಿರುತ್ತವೆ. ಇಲ್ಲಿ ಸುನ್ನೀ ಪಂಥದವರೇ ಬಹುತರ ಯಾವತ್ತು ಜನರಿದ್ದಾರೆ. ಕಡಿಮೆಪ್ರತಿಯ ಮುಸಲ್ಮಾನರಿಗೆ ಈ ಪಂಥಗಳು ಸಹ ಗೊತ್ತಿಲ್ಲವೆಂದು ಹೇಳಬಹುದು. ಕೆಲವರು ಹಿಂದೂ ದೇವತೆಗಳನ್ನು ಪೂಜಿಸುವರು; ಹಿಂದೂ ಹಬ್ಬಗಳನ್ನು ಮಾಡುವರು; ಹಿಂದೂ ನಡಾವಳಿಯಂತೆ ನಡಿಯುವರು.

ಹಳ್ಳಿಯ ಮುಸಲ್ಮಾನರು ಎತ್ತರವಾಗಿಯೂ, ಧಷ್ಟಪುಷ್ಟರಾಗಿಯೂ ಇರುತ್ತಾರೆ. ಆದರೆ ದೊಡ್ಡ ಗ್ರಾಮಗಳಲ್ಲಿ ಸೌಖ್ಯದಿಂದ ಬೆಳೆದವರ ಮೈಬಣ್ಣ ಕೆಂಪು, ಕಣ್ಣು ದೊಡ್ಡವು. ಯಾವತ್ತೂ ಮುಸಲ್ಮಾನರು ತಲೆಯನ್ನು ಪೂರಾ ಬೋಳಿಸಿಕೊಂಡು ಬಹುತರ ಗಡ್ಡ ಬಿಡುವರು. ಬಹುಜನರು ಇಜಾರುಗಳನ್ನೂ ಉದ್ದಂಗಿಗಳನ್ನೂ ಹಾಕುವರು. ಕೆಲವರು ತಲೆಗೆ ಸಣ್ಣ ಟೊಪ್ಪಿಗೆಗಳನ್ನು ಹಾಕುವರು. ಉತ್ತಮ ಕುಲದ ಹೆಂಗಸರು ಪರರ ದೃಷ್ಟಿಗೆ ಬೀಳುವದಿಲ್ಲ. ಅವರು ಬಹುತರ ಮನೆಬಿಟ್ಟು ಹೋಗುವದಿಲ್ಲ; ಅವಶ್ಯಬಿದ್ದರೆ ಬಿಳೀ ಹಚ್ಚಡದ ಬುರಿಕೆ ಹಾಕಿಕೊಂಡು ಹೋಗುವರು.

ಮುಸಲ್ಮಾನರ ಭಾಷೆ ಹಿಂದುಸ್ತಾನಿ. ಆದರೆ ಕಡಿಮೆಜಾತಿಗಳ ಮಾತಿನಲ್ಲಿ ಕನ್ನಡ ಮರಾಠಿ ಶಬ್ದಗಳು ಬಹಳ ಸೇರುತ್ತವೆ. ಹಳ್ಳಿಗಳೊಳಗಿನ ಮುಸಲ್ಮಾನರು ಅಚ್ಚ ಕನ್ನಡಿಗರೇ ಇರುತ್ತಾರೆಂದು ಹೇಳಬಹುದು.

ಹಳ್ಳಿಯೊಳಗಿನ ಮುಸಲ್ಮಾನರಿಗೆ ಅಲ್ಪಸ್ವಲ್ಪ ಭೂಮಿ ಇರುತ್ತದೆ. ಅವರು ವಾಡಿಕೆಯಾಗಿ ಒಕ್ಕಲತನ ಮಾಡುವರು. ಮಿಕ್ಕಾದವರು ಅತ್ಯುತ್ತಮದಿಂದ ಅತಿನೀಚದವರೆಗೆ ಯಾವತ್ತೂ ಹೋರೆಗಳನ್ನು ಮಾಡುವರು. ನೌಕರಿಯ ಹೋರೆಯನ್ನು ಮಾಡುವವರೇ ಬಹಳ. ಇವರಲ್ಲಿ ಅನೇಕರಿಗೆ ಹೋರೆಯಿಂದ ಹೆಸರು ಬಂದದೆ. ಅತ್ತಾರರು, ಮಣಿಗಾರರು, ಕಲಾಯಿಗಾರರು, ನಾಲಬಂದರು, ಹಕೀಮರು ಇವರೆಲ್ಲ ಮುಸಲ್ಮಾನಜಾತಿಯವರೇ.

ಆಲಸ್ಯವು ಊರೊಳಗಿರುವ ಕಡಿಮೆಪ್ರತಿಯ ಮುಸಲ್ಮಾನರ ಮುಖ್ಯಗುಣವೆಂದು ಹೇಳಬಹುದು. ಕಡಿಮೆಪ್ರತಿಯವರು ಜಗಳಗಂಟರೂ ತುಂಟರೂ ಇರುತ್ತಾರೆ. ಇವರಲ್ಲಿ ಸ್ವಚ್ಛತೆ ತೀರ ಕಡಿಮೆ. ಇವರಲ್ಲಿ ಬಹುಜನರಿಗೆ ಸರಾಯಿ ಕುಡಿಯುವಚಟ ಬಹಳ ಇರುತ್ತದೆ. ಸುಶಿಕ್ಷಿತರೂ ವತನದಾರರೂ ವ್ಯಾಪಾರಸ್ತರೂ ಹೊರತಾಗಿ ಮಿಕ್ಕಾದವರೆಲ್ಲರೂ ಸೋಮಾರಿತನ, ಸರಾಯಿ ಈ ಎರಡು ಕಾರಣಗಳಿಂದ ಬಡತನದ ಸ್ಥಿತಿಯಲ್ಲಿ ಇದ್ದಾರೆ. ಹಳ್ಳಿಯೊಳಗೆ ಹೊಲಗೆಲಸದಿಂದ ಬಾಳುವವರು ಉದ್ಯೋಗಿಗಳೂ ಮಿತವ್ಯಯಿಗಳೂ ಇರುತ್ತಾರೆ.

ಮುಸಲ್ಮಾನರಲ್ಲಿ ಹಲವರು ವಿದ್ಯೆ ಕಲಿಯುವದಿಲ್ಲ. ಇತ್ತಲಾಗಿ ಇವರು ತಮ್ಮ ಹುಡುಗರನ್ನು ಶಾಲೆಗೆ ಕಳಿಸುತ್ತಾರೆ. ಒಳ್ಳೇ ಸ್ಥಿತಿಯಲ್ಲಿ ರುವವರು ತಮ್ಮ ಹುಡುಗರನ್ನು ಇಂಗ್ಲಿಷಶಾಲೆಗೆ ಕಳಿಸುವರು.

೭ನೇ ಪ್ರಕರಣ.

ಉದ್ಯೋಗಗಳು.

ಮನುಷ್ಯರಿಗೆ ತಿನ್ನಲಿಕ್ಕೆ ಕಾಳೂ ಹೊದ್ದುಕೊಳ್ಳಲಿಕ್ಕೆ ಅರಿವೆಯೂ ಅತ್ಯವಶ್ಯವಾದ ಪದಾರ್ಥಗಳಿರುವದರಿಂದ ಮನುಷ್ಯನ ಉದ್ಯೋಗಗಳಲ್ಲಿ ಕೃಷಿಯೂ ಅರಿವೆಗಳನ್ನು ನೇಯುವದೂ ಅತಿ ಮಹತ್ವವುಳ್ಳ ಉದ್ಯೋಗಗ ಳಾಗಿರುತ್ತವೆ.

ಈ ಜಿಲ್ಹೆಯಲ್ಲಿ ಒಕ್ಕಲತನವು ಹೆಚ್ಚಾಗಿ ನಡೆಯುತ್ತದೆಂದು ಇಲ್ಲಿಯ ಹುಟ್ಟುವಳಿಯಿಂದ ಸ್ಪಷ್ಟವಾಗುವದು. ಧಾರವಾಡ ಜಿಲ್ಹೆಯಲ್ಲಿರುವ ಪ್ರ ಯೊಂದು ಹಳ್ಳಿಯ ಜನರು ಮುಖ್ಯವಾಗಿ ಹೊಲಗಳಿಂದಲೇ ಉಪಜೀವಿಸ ವರೆಂದು ಸಾಮಾನ್ಯವಾಗಿ ಹೇಳಬಹುದು. ಹೊಲಗೆಲಸದಲ್ಲಿ ತೊ ಗಿದವರ ಸಂಖ್ಯೆಯು ಈ ಜಿಲ್ಹೆಯಲ್ಲಿ ೧೦೦ ರಲ್ಲಿ ೬೮ ಇರ ವದು. ಈ ಉದ್ಯೋಗದಲ್ಲಿ ಮುಖ್ಯವಾಗಿ ಲಿಂಗಾಯತರೂ, ಮರ ಠರೂ, ಮುಸಲ್ಮಾನರೂ, ಬ್ರಾಹ್ಮಣರೂ ತೊಡಗಿರುವರು. ಇವ ರಲ್ಲಿ ಲಿಂಗಾಯತರೇ ಒಳ್ಳೇ ಸ್ಥಿತಿಯಲ್ಲಿರುವರು. ಲಿಂಗಾಯತ ಒಕ್ಕಲಿಗನ ಇಲ್ಲಿಯ ಮರಾಠಾ ಒಕ್ಕಲಿಗನಿಗಿಂತ ಧಷ್ಟಪುಷ್ಟನೂ, ಶ್ರಮಬಟ್ಟು ದು ಯುವವನೂ, ಮುಂದಣ ದೃಷ್ಟಿಯುಳ್ಳವನೂ ಇರುವನು. ಇವನಿ ವ್ಯಾಪಾರದ ಒಲವು ಹೆಚ್ಚಾಗಿ ಉಂಟು. ಆದ್ದರಿಂದಲೇ ಇವನು ಮರಾ ರಿಗಿಂತ ಒಳ್ಳೇ ಸ್ಥಿತಿಯಲ್ಲಿರುವನು. ಲಿಂಗಾಯತರಲ್ಲಿ ಹಲವರು ಬಡ್ಡಿ ವ್ಯವಹಾರವನ್ನು ಮಾಡುತ್ತಾರೆ; ಹತ್ತಿಯ ಗಿರಣಿಗಳನ್ನು ಇಟ್ಟಿದ್ದಾ ಕಾಳಿನ ವ್ಯಾಪಾರವನ್ನು ಮಾಡುತ್ತಾರೆ. ಮರಾಠರು ಈ ಕೆಲಸಗಳನ ಮಾಡುವದಿಲ್ಲ. ಹೊಲಗೆಲಸದ ಉದ್ಯೋಗವನ್ನು ಮಾಡುವ ಬ್ರಾಹ್ಮಣ ಸಂಖ್ಯೆಯು ಬಹಳ ಕಡಿಮೆ. ಇವರು ಸ್ವಂತವಾಗಿ ದುಡಿಯುವದಿ ಕೂಲಿಯವರನ್ನು ಹಚ್ಚಿ ದುಡಿಸುವರು. ಇವರು ಬಹಳವಾಗಿ ಹೊ ಳನ್ನು ಲಾವಣಿಗೆ ಕೊಡುವರು.

ಈ ಜಿಲ್ಲೆಯಲ್ಲಿ ನಡೆಯುವ ಕೈಗಾರಿಕೆಗಳಲ್ಲಿ ಬಡಿಗತನ ಕಮ್ಮಾರಿಕೆ ಉಪ್ಪಾರಿಕೆ ಮೊದಲಾದ ತೀರ ಸಾಧಾರಣ ಪ್ರತಿಯ ಉದ್ಯೋಗಗಳನ್ನು ಮಾಡುವ ಜನರು ಪ್ರತಿಯೊಂದು ಊರಲ್ಲಿಯೂ, ಹಳ್ಳಿಗಳಲ್ಲಿಯೂ ಇರುವರು. ಆದರೆ ಇವುಗಳಲ್ಲಿ ವಿಶೇಷವಾಗಿ ನಡೆಯುವ ಕೈಗಾರಿಕೆಯು ಹತ್ತಿಯ ಕೆಲಸಕ್ಕೆ ಸಂಬಂಧಿಸಿದ್ದಿರುವದು. ಯಾಕಂದರೆ ಈ ಪ್ರಾಂತದಲ್ಲಿ ಹತ್ತಿಯು ಬೆಳೆಯಲಿಕ್ಕೆ ಅನುಕೂಲವಾದ ಭೂಮಿಯು ಬಹಳ ಇದೆ. ಜನರಾದರೂ ಮುಖ್ಯವಾಗಿ ನೂಲಿನ ಅರಿವೆಗಳನ್ನೇ ತೊಡುವರು. ಅನೇಕ ವರ್ಷಗಳಿಂದ ನಡೆದು ಬಂದ ಕೈಗಾರಿಕೆಗಳಲ್ಲಿ ಹತ್ತಿಯನ್ನು ಅರಿಯುವದು, ನೂಲುವದು, ನೇಯುವದು, ಇವು ಮುಖ್ಯವಾದವು ಇರುತ್ತವೆ. ಹತ್ತಿಯನ್ನು ಅರಿಯುವ ಕೆಲಸವನ್ನು ಎಲ್ಲ ಕಡೆಯಲ್ಲಿ ಒಕ್ಕಲಿಗರ ಹೆಂಗಸರು ಮಾಡುತ್ತಾರೆ. ಪೂರ್ವದಲ್ಲಿ ಅಮೇರಿಕದ ಹತ್ತಿಯನ್ನು ಈ ಸೀಮೆಯ ಒಕ್ಕಲಿಗರು ಬಿತ್ತುತ್ತಿದ್ದಾಗ ಅರಿಯುವ ಕರಗಸದ ಯಂತ್ರಗಳು ದೇಶದ ತುಂಬ ನಡಿಯುತ್ತಿದ್ದವು. ಅದರಿಂದ ಸುಮಾರು ೩೦ ವರ್ಷದ ಹಿಂದೆ ಹೆಂಗಸರು ಹತ್ತಿಯನ್ನು ಅರಿಯುವ ನಡಾವಳಿಯು ಬಹುತರ ಹಿಂದಕ್ಕೆ ಬಿದ್ದಿತ್ತು. ಮುಂದೆ ಅಮೇರಿಕದ ಹತ್ತಿಯಿಂದ ಒಕ್ಕಲಿಗರಿಗೆ ಆಗತಕ್ಕಷ್ಟು ಲಾಭವು ಆಗದ್ದರಿಂದ ಆ ಹತ್ತಿಯು ಹಿಂದಕ್ಕೆ ಬಿತ್ತು. ಸದ್ಯಕ್ಕೆ ಹತ್ತಿಯನ್ನು ಅರಿಯುವ ಯಂತ್ರಗಳು ಬಹಳಾಗಿವೆ; ಗದಗಿನಲ್ಲಿ ೧೦ ಹುಬ್ಬಳ್ಳಿಯಲ್ಲಿ ೮ ಯಂತ್ರಗಳು ಉಗಿಯಿಂದ ನಡೆಯುತ್ತವೆ. ಆದರೆ ಯಂತ್ರಗಳ ಸಹಾಯದಿಂದ ಹತ್ತಿಯನ್ನು ಅರಿಯುವದು, ನೂಲುವದು, ನೇಯುವದು ಈ ಪ್ರಾಂತದಲ್ಲಿ ಪ್ರಾರಂಭವಾದದರಿಂದಲೂ, ಪರದೇಶದ ಅರಿವೆಗಳು ಇಲ್ಲಿಗೆ ಬರಲಾರಂಭಿಸಿದ್ದರಿಂದಲೂ, ಈ ಉದ್ಯೋಗವು ಕಡಿಮೆಯಾಗಿದೆ. ಯಾಕಂದರೆ, ಯಂತ್ರಗಳಿಂದ ಮಾಡಿಸಿದ ಕೆಲಸಕ್ಕೆ ಕೂಲಿ ಕಡಿಮೆ; ಖರ್ಚು ಕಡಿಮೆ. ಆದ್ದರಿಂದ ಅವು ಅಗ್ಗವಾಗಿ ದೊರೆಯುತ್ತವೆ. ಇದಲ್ಲದೆ ಅವು ನೋಡಲಿಕ್ಕೂ ಚಂದವಾಗಿ ಕಾಣುತ್ತವೆ. ಆದರೂ ಯಂತ್ರಗಳಿಂದ ತಯಾರಾಗಿ ಪರದೇಶಗಳಿಂದ ಇಲ್ಲಿಗೆ ಬಂದು ಅಗ್ಗವಾಗಿ ಮಾರುವ ಬಟ್ಟೆಗಳು ಇಲ್ಲಿಯ ಮಗ್ಗದ ಮೇಲೆ ತಯಾರಾದ ಬಟ್ಟೆಗಳಷ್ಟು ತಾಳುವದಿಲ್ಲ. ಆದ್ದರಿಂದ ಬಡಬಗ್ಗರೂ, ಕೂಲಿಕಾರರೂ, ಒಕ್ಕಲಿಗರೂ ಇಲ್ಲಿಯ ಅರಿವೆಗಳನ್ನೇ ಉಪಯೋಗಿಸುವದುಂಟು. ಹೀಗಾಗಿ ನಮ್ಮಲ್ಲಿ ಜವಾರೀ ಬಟ್ಟೆಗಳನ್ನು ತಯಾರು ಮಾಡುವ ಉದ್ಯೋಗವು ಇನ್ನೂ ನಡೆದಿದೆ.

ಇದಲ್ಲದೆ ನಮ್ಮ ಜನರಲ್ಲಿ ಉಪಯೋಗಿಸುವ ಹಚ್ಚಡ, ಜಮಖಾನೆ, ರುಮಾಲ, ಕಂಬಳಿ, ಜಾಜಮು, ಮತ್ತು ಎಲ್ಲಕ್ಕೂ ಮಹತ್ವದ್ದೆಂದರೆ, ಅಂಚಿನಧೋತರಗಳು, ಹೆಂಗಸರ ಸೀರೆ-ಕುಬಸಗಳು ಪರದೇಶಗಳಿಂದ ಬರುವದಿಲ್ಲ. ಇವು ಇಲ್ಲಿಯೇ ತಯಾರಾಗುತ್ತವೆ. ಆದರೂ ಇವುಗಳಲ್ಲಿ ಉಪಯೋಗಿಸುವ ನೂಲನ್ನು ನೇಕಾರರು ಮುಂಬಯಿಯಿಂದಾಗಲಿ, ವಿಲಾಯತಿಯಿಂದಾಗಲಿ ತರಿಸುವದುಂಟು. ಧಾರವಾಡಜಿಲ್ಲೆಯಲ್ಲಿ ನೇಕಾರರ ಮನೆಗಳು ಹತ್ತುಸಾವಿರಕ್ಕಿಂತ ಹೆಚ್ಚು ಇರುತ್ತವೆ. ಹುಬ್ಬಳ್ಳಿ, ಗದಗ ಇವು ಈ ಜಿಲ್ಲೆಯ ಹತ್ತಿ ಬೆಳೆಯುವ ತಾಲೂಕುಗಳಲ್ಲಿ ದೊಡ್ಡವೂ, ಮುಖ್ಯವೂ ಆದವುಗಳಿರುವದರಿಂದ, ಅಲ್ಲಿ ಈ ಜನರ ಸಂಖ್ಯೆ ಹೆಚ್ಚು. ಅಲ್ಲಿ ಆಗುವ ವಸ್ತ್ರಗಳೂ ಹೆಸರಾದವಿರುತ್ತವೆ. ಈ ಪಟ್ಟಣಗಳಲ್ಲಿ ರುಮಾಲಗಳು, ಧಡೋತಿಯ ಧೋತರಗಳು, ಬೆಲೆಯುಳ್ಳ ಸೀರೆಗಳು, ಖಣಗಳು, ಪೀತಾಂಬರಗಳು ಹುಟ್ಟುತ್ತವೆ. ಅಣ್ಣೀಗೇರಿ, ಲಕ್ಕುಂಡಿ, ನರಗುಂದ ಈ ಊರುಗಳು ಧೋತರಗಳ ಬಗ್ಗೆ ಹೆಸರಾಗಿವೆ. ಅಂಚಿನ ವಸ್ತ್ರಗಳನ್ನು ಹುಬ್ಬಳ್ಳಿ, ಕರ್ಜಗಿಯಲ್ಲಿ ನೇಯುವದುಂಟು. ಧಾರವಾಡದ ತುರಂಗೆದಲ್ಲಿಯೂ, ನವಲಗುಂದದಲ್ಲಿಯೂ, ಮೇಲ್ತರದ ಜಮಖಾನೆಗಳಾಗುತ್ತವೆ. ಜಮಖಾನೆಯನ್ನು ನೇಯುವವರು ಎಲ್ಲಕಡೆಯಲ್ಲಿ ಮುಸಲ್ಮಾನರೇ ಇರುವರು. ಕುರುಬರು ಕಂಬಳಿಗಳನ್ನು ನೇಯುವರು. ಇವು ಎಲ್ಲ ತಾಲೂಕುಗಳಲ್ಲಿ ಆಗುತ್ತಿದ್ದಾಗ್ಯೂ, ಮೇಲಾದ ಕಂಬಳಿಗಳು ರಾಣೇಬಿನ್ನೂರಿನಲ್ಲಿ ಆಗುತ್ತವೆ.

ನಮ್ಮಲ್ಲಿಯ ಜನರು ಬಹುತರವಾಗಿ ತಾಮ್ರ ಇಲ್ಲವೆ ಹಿತ್ತಾಳೆಯ ಪಾತ್ರೆಗಳನ್ನು ಉಪಯೋಗಿಸುವರು. ಈ ಪಾತ್ರೆಗಳು ಈ ಜಿಲ್ಲೆಯಲ್ಲಿ ಕೆಲವು ಕಡೆಯಲ್ಲಿ ಆಗುತ್ತವೆ. ಹುಬ್ಬಳ್ಳಿ, ಧಾರವಾಡ ಪಟ್ಟಣಗಳು ಈ ಬಗ್ಗೆ ಹೆಸರಾಗಿವೆ. ತಾಮ್ರದ ಹಾಗೂ ಹಿತ್ತಾಳೆಯ ತಗಡುಗಳನ್ನು ಮುಂಬಯಿಯಿಂದ ತರಿಸಿ ಈ ಪಾತ್ರೆಗಳನ್ನು ಮಾಡುವರು. ಹುಬ್ಬಳ್ಳಿಯಲ್ಲಿ ಹುಟ್ಟುವ ಮೇಲಾದ ಪಾತ್ರೆಗಳು ಜಿಲ್ಹೆಯಲ್ಲೆಲ್ಲ ಮಾರಾಟವಾಗುವದಲ್ಲದೆ, ಬಳ್ಳಾರಿ, ಮೈಸೂರು ಮುಂತಾದ ಪ್ರಾಂತಗಳಿಗೆ ಸಹ ಹೋಗುತ್ತವೆ.

ಧಾರವಾಡ ಜಿಲ್ಹೆಯಲ್ಲಿ ಬೇಕಾದಷ್ಟು ಕಬ್ಬಿಣದ ಅದರೂ ಅಲ್ಪಸ್ವಲ್ಪ ಚಿನ್ನವೂ ದೊರೆಯುತ್ತದೆಂದು ಹಿಂದೆ ಹೇಳಿದ್ದೇವೆ. ಆದರೆ, ಇದ

ನ್ನು ಈ ಪ್ರಾಂತದ ಜನರು ಉಪಯೋಗಿಸುವದಿಲ್ಲ. ಯಾಕಂದರೆ, ಪರದೇಶದ ಕಬ್ಬಿಣವು ಬಹಳ ಅಗ್ಗವಾಗಿ ಸಿಗುತ್ತದೆ. ಅಲ್ಲಿಯ ಜನರಿಗೆ ಕಬ್ಬಿಣ-ಕಲ್ಲಿದ್ದಲಿಗಳು ಒಂದೇ ಕಡೆಯಲ್ಲಿ ಹೇರಳವಾಗಿ ದೊರೆಯುತ್ತವೆ. ಆದ್ದರಿಂದ ಅವರು ಯಂತ್ರಗಳಿಂದ ಕಬ್ಬಿಣದ ಅದುರುಗಳನ್ನು ಕರಗಿಸುತ್ತಾರೆ; ಅನೇಕ ತರದ ಸಾಮಾನುಗಳನ್ನು ಮಾಡುತ್ತಾರೆ. ನಮಗೆ ಬೇಕಾಗುವ ಸಣ್ಣ ಸಣ್ಣ ಮೊಳೆಗಳಿಂದ ಅತಿದೊಡ್ಡ ಯಂತ್ರಗಳ ವರೆಗೆ ಎಲ್ಲ ಕಬ್ಬಿಣದ ಸಾಮಾನುಗಳೂ ಬಹುಶಃ ಪರದೇಶದಿಂದ, ಮುಖ್ಯವಾಗಿ ವಿಲಾಯತಿಯಿಂದ ಬರುತ್ತವೆ. ನಮ್ಮ ಜನರು ಮನೆಯಲ್ಲಿ ಉಪಯೋಗಿಸುವ ಈಳಿಗೆ, ಹಾರಿ, ಮೊದಲಾದ ಸಣ್ಣ ಪದಾರ್ಥಗಳನ್ನೂ ಹೊಲಗೆಲಸದಲ್ಲಿ ಉಪಯೋಗವಾಗುವ ಕೆಲವು ಆಯುಧಗಳನ್ನೂ ಕಮ್ಮಾರರು ಅಗ್ಗವಾದ ವಿಲಾಯತಿಯ ಕಬ್ಬಿಣದಿಂದ ಮಾಡುವರು.

ಧಾರವಾಡ ಜಿಲ್ಹೆಯಲ್ಲಿ ತೇಗೂರ ಎಂಬಲ್ಲಿ ಕಬ್ಬಿಣವನ್ನು ಕರಗಿಸುವ ಕುಲಿಮೆಗಳಿವೆ ಎಂದು ಹೇಳಿದ್ದೇವೆ. ಕಟ್ಟಿಗೆಯು ತುಟ್ಟಿಯಾದ್ದರಿಂದ ಇಲ್ಲಿಯವರಿಗೆ ಹೇಳತಕ್ಕಷ್ಟು ಲಾಭವಾಗುವದಿಲ್ಲ.

೮ನೇ ಪ್ರಕರಣ.

ಗಮನಸಾಧನಗಳು, ಅಥವಾ ಮಾರ್ಗಗಳು.

ಮಾರ್ಗಗಳಲ್ಲಿ ಜಲಮಾರ್ಗಗಳು, ರೇಲ್‌ಮಾರ್ಗಗಳು, ಲೈನಮಾರ್ಗಗಳು ಎಂದು ಮೂರುಭೇದಗಳುಂಟು. ಲೈನಮಾರ್ಗಗಳಲ್ಲಿ ಮುರಮು ಹಾಕಿದ ಪಕ್ಕಾಮಾರ್ಗಗಳು, ಮುರಮು ಹಾಕದ ಕಚ್ಚಾಮಾರ್ಗಗಳು ಎಂದು ಎರಡು ವರ್ಗಗಳನ್ನು ಮಾಡಬಹುದು. ಜಲಮಾರ್ಗಗಳು ಎಲ್ಲಕ್ಕೂ ಮೇಲಾದವು. ನದಿಗಳಾಗಲಿ ಅವುಗಳಿಂದ ತೆಗೆದ ಹಡಗನಡೆಯುವಂಥ ಕಾಲಿವೆಗಳಾಗಲಿ ಜಲಮಾರ್ಗಗಳೆನಿಸುತ್ತವೆ. ವ್ಯಾಪಾರಕ್ಕೆ ಹೆಸರಾದ ಪ್ರದೇಶದಲ್ಲಿ ಸರಕಾರದವರು ಜಲಮಾರ್ಗಗಳನ್ನು ಮಾಡಿಸುವದುಂಟು. ಜಲಮಾರ್ಗಗಳಾಗಲಿಕ್ಕೆ ಅನುಕೂಲವಾದ ಸಂಗತಿಗಳನ್ನು ಹಿಂದೆ ಹೇಳಿದ್ದೇವೆ.

ಧಾರವಾಡಜಿಲ್ಹೆಯ ನದಿಗಳಲ್ಲಿ ಜಲಮಾರ್ಗಗಳಾಗಲಿಕ್ಕೆ ಅನುಕೂಲವಿಲ್ಲವೆಂಬದನ್ನು ಸಹ ಹಿಂದೆ ಕಾರಣಗಳೊಡನೆ ಹೇಳಿದ್ದೇವೆ. ರೇಲ್ವೆ

ಮಾರ್ಗಗಳಿಂದ ಜನರ ಸಂಚಾರಕ್ಕೂ, ಪದಾರ್ಥಗಳ ವಿನಿಮಯಕ್ಕೂ ವ್ಯಾಪಾರಕ್ಕೂ ಬಹಳ ಅನುಕೂಲವಾಗುವದು. ಬರದ ಬಾಧೆಯನ್ನು ಕಡಿಮೆಮಾಡುವದೇ ಇವುಗಳ ಮುಖ್ಯ ಉಪಯೋಗವು.

ಲೈನಮಾರ್ಗಗಳಿಂದ ಒಳದೇಶದ ವ್ಯಾಪಾರಕ್ಕೆ ಅನುಕೂಲವಾಗುವದು. ಪಕ್ಕಾ ಮಾರ್ಗಗಳು ಮಳೆಗಾಲದಲ್ಲಿ ಸಹ ಕೆಡುವದಿಲ್ಲ. ಆದರೆ ಕಚ್ಚಾ ಮಾರ್ಗಗಳಲ್ಲಿ ಮಳೆಗಾಲದಲ್ಲಿ ಕೆಸರಾಗುವದು. ಮಾರ್ಗಗಳನ್ನು ಮಾಡಬೇಕಾದರೆ ಮೂರಮು-ಕಲ್ಲುಗಳ ಅನುಕೂಲವಿರಬೇಕು. ಧಾರವಾಡದ ಯಾವ ಭಾಗದಲ್ಲಿ ಮೂರಮಿನ ಮಾರ್ಗಗಳಿಗೆ ಹೆಚ್ಚು ಅನುಕೂಲವಿರುವದೆಂಬದು ಸುಲಭವಾಗಿ ತಿಳಿಯುವಂತಿದೆ. ಮಲ್ಲಾಡದ ಗುಡ್ಡದ ಭೂಮಿಯಲ್ಲಿ ಮೂರಮು ಹೇರಳವಾಗಿ ದೊರೆಯುತ್ತದೆ. ಕರೇ ಮಣ್ಣಿನ ಬೈಲುಸೀಮೆಯಲ್ಲಿ ಈ ಅನುಕೂಲವಿಲ್ಲ.

ಧಾರವಾಡಜಿಲ್ಲೆಯ ಮಾರ್ಗಗಳ ನಕಾಶವನ್ನು ನೋಡಿದರೆ ಇಲ್ಲಿ ಮಾರ್ಗಗಳ ಅನುಕೂಲವು ಬೇಕಾದಷ್ಟಿರುವದೆಂದು ತೋರುವದು. ಇವುಗಳ ಮಾರ್ಗವಾಗಿ ಈ ಜಿಲ್ಲೆಯ ವ್ಯಾಪಾರಕ್ಕೆ ಎಷ್ಟು ಅನುಕೂಲವು ಉಂಟಾಗುವದೆಂಬದನ್ನು ಅಭ್ಯಾಸಿಸುವದಕ್ಕಿಂತ ಮೊದಲು, ಈ ಮಾರ್ಗಗಳು ಎಂದು ಆಗಿರುವವೆಂಬದನ್ನು ಕುರಿತು ಹೇಳುವೆವು.

ಸದ್ಯಕ್ಕೆ ತಾಲೂಕಿನ ಊರಿನಿಂದಾಗಲಿ ದೊಡ್ಡ ಊರಿನಿಂದಾಗಲಿ, ನಾಲ್ಕೂಕಡಿಗೆ ಲೈನದಾರಿಗಳು ಹೋಗಿರುವದನ್ನೂ ಅವುಗಳಲ್ಲಿ ಹಾಯುವ ಬಂಡಿಗಳನ್ನೂ ನೋಡಿ, ಇವು ಇಲ್ಲದಿದ್ದರೆ ಜನರು ಊರಿಂದ ಊರಿಗೆ ಹೋಗಲಿಕ್ಕೂ ಸಾಮಾನುಗಳನ್ನು ಕಳಿಸಲಿಕ್ಕೂ ಎಷ್ಟು ತೊಂದರೆಯಾಗುತ್ತಿತ್ತೆಂಬ ಪ್ರಶ್ನೆಯನ್ನು ಕೇಳಿಕೊಳ್ಳಬಹುದು. ಬ್ರಿಟಿಶ್ ಸರಕಾರದವರು ಬರುವ ಪೂರ್ವದಲ್ಲಿ ಈ ಸೀಮೆಯಲ್ಲಿ ಲೈನಮಾರ್ಗಗಳ ಸುದ್ದಿಯೇ ಇದ್ದಿಲ್ಲ. ಬಂಡಿಗಳೂ ಇದ್ದಿಲ್ಲ. ದೂರಿಂದ ತರಿಸುವ ಸರಕುಗಳನ್ನೂ ದೂರದೇಶಕ್ಕೆ ಕಳಿಸುವ ಸರಕುಗಳನ್ನೂ ಕತ್ತೆ-ದನಗಳ ಮೇಲೆ ಕಳಿಸಬೇಕಾಗುತ್ತಿತ್ತು. ಕುದುರೆ, ಎತ್ತು, ಮನುಷ್ಯರು ಇವರ ತುಳುಕಲಿನಿಂದ, ತಮಗೆ ತಾವೇ ಬಿದ್ದ ಮಾರ್ಗಗಳಿಂದಲೇ ಯಾವತ್ತು ವ್ಯವಹಾರವು ನಡೆಯುತ್ತಿತ್ತು. ಈ ಮಾರ್ಗಗಳು ತಗ್ಗುದಿನ್ನೆಯಾಗಿಯೂ ಸಣ್ಣದೊಡ್ಡವಾಗಿಯೂ, ಡೊಂಕಡೊಂಕಾಗಿಯೂ ಇರುತ್ತಿದ್ದವು; ಮಳೆ

ಗಾಲದಲ್ಲಿ ಕೆಸರಾಯಿತೆಂದರೆ ಈ ಮಾರ್ಗಗಳಲ್ಲಿ ಮನುಷ್ಯರಿಗೆ ಸಹ ನಡಿಯುವದು ಅಸಾಧ್ಯವಾಗುತ್ತಿತ್ತು. ಕಳ್ಳರ ಉಗದ್ರವಕ್ಕಂತೂ ಕೊರತೆಯೇ ಇದ್ದಿಲ್ಲ. ಒಟ್ಟಿಗೆ ಆ ಕಾಲಕ್ಕೆ ಇಪ್ಪತ್ತು ಮೂವತ್ತು ಹರದಾರಿ ದೂರ ಹೋಗುವದೆಂದರೆ ದೂರ ದೇಶದ ಪ್ರವಾಸಕ್ಕೆ ಹೋದಂತೆ ಕಷ್ಟವಾಗುತ್ತಿತ್ತು.

ಬ್ರಿಟಿಶ್‌ಸರಕಾರದ ಅಮಲಿನ ಆರಂಭದಲ್ಲಿ, ಅಂದರೆ ಸನ್ನ ೧೮೨೦ ನೇ ವರ್ಷದ ಸುಮಾರಿನಲ್ಲಿ ಮೇಲೆ ಹೇಳಿದಂತೆ ಸ್ವಾಭಾವಿಕವಾಗಿ ದಂಡಿನವರ ತುಳಕಲದಿಂದ ಬಿದ್ದ ಮಾರ್ಗಗಳು ಈ ಜಿಲ್ಹೆಯಲ್ಲಿ ಒಂದೆರಡು ಮಾತ್ರ ಇದ್ದವು. ಒಂದು ಮಾರ್ಗವು ಪುಣೆ, ಬೆಳಗಾವಿ, ಧಾರವಾಡ, ಶಿರಸಿಗಳ ಮೇಲಿಂದ ಮೈಸೂರಿಗೆ ಹೋಗುತ್ತಿತ್ತು. ಮಳೆಗಾಲದಲ್ಲಿ ಹೊಳೆಗಳಲ್ಲಿ ನಾವುಗಳಾಡುತ್ತಿದ್ದಿಲ್ಲ. ಒಬ್ಬ ಮನುಷ್ಯನು ಹೊಳೆದಾರಾಗಲಿಕ್ಕೆ ಇಡೀ ಒಂದು ದಿವಸವೇ ಹೋಗುತ್ತಿತ್ತು. ಪೂಲುಕಟ್ಟಿದ ಮಾರ್ಗಗಳ ವರ್ತಮಾನವೇ ಇದ್ದಿಲ್ಲ.

೧೮೫೦ ರಿಂದ ಮಾರ್ಗಗಳ ಸಂಖ್ಯೆಯು ಹೆಚ್ಚಾಯಿತು. ಈಗಿನ ಲೈನಮಾರ್ಗಗಳಲ್ಲಿ ಇಲಾಖೆಯ ಸರಕಾರದವದರು ಮಾಡಿಸಿದ ಮಾರ್ಗಗಳೂ, ಲೋಕಲ್‌ಬೋರ್ಡಿನವರು ಮಾಡಿಸಿದ ಮಾರ್ಗಗಳೂ ಉಂಟು. ಇಲಾಖೆಯ ಮಾರ್ಗಗಳು ಹಲವು ಜಿಲ್ಹೆಗಳಲ್ಲಿ ಹಾಗೂ ದೂರದೂರಿರುವ ಪ್ರದೇಶಗಳಿಗೆ ಹೋಗುತ್ತವೆ. ಇವೆಲ್ಲ ಪಕ್ಕಾ ಮಾರ್ಗಗಳಿರುವವು. ಲೋಕಲಫಂಡಿನ ಮಾರ್ಗಗಳು ನೆರೆಜಿಲ್ಹೆಯ ಲೋಕಲ್‌ಫಂಡ ಮಾರ್ಗಗಳಿಗೆ, ಇಲ್ಲವೆ ಪ್ರೊವ್ಹಿನ್ಸಿಯಲ್ ಮಾರ್ಗಗಳಿಗೆ ಕೂಡಿ ದೂರ ದೂರಿರುವ ಗ್ರಾಮಗಳಿಗೆ ಹೋಗುತ್ತವೆ. ಇವು ಬಹುತರ ಪಕ್ಕಾ ಮಾರ್ಗಗಳಿರುವವು.

ಈ ಜಿಲ್ಹೆಯೊಳಗಿನ ಪ್ರೊವ್ಹಿನ್ಸಿಯಲ್, ಅಂದರೆ ಇಲಾಖೆ ಸರಕಾರದಿಂದಾದ ಮಾರ್ಗಗಳನ್ನು ಕೆಳಗೆ ಕಾಣಿಸುತ್ತೇವೆ:—

(೧). ಪುಣೆಯಿಂದ ಹರಿಹರಕ್ಕೆ ಹೋಗುವಮಾರ್ಗ:—ಇದು ಬೆಳಗಾವಿಯಿಂದ ಧಾರವಾಡಜಿಲ್ಹೆಯ ವಾಯವ್ಯದ ಮೇರೆಯ ನೆರೆಯಲ್ಲಿ ತೇಗೂರದ ಮೇಲಿಂದ ಹಾಯ್ದು ಧಾರವಾಡ, ಹುಬ್ಬಳ್ಳಿ, ಸಿಗ್ಗಾವಿ, ಬಂಕಾಪೂರ, ಹಾವೇರಿ, ರಾಣೆಬಿನ್ನೂರಗಳ ಮೇಲಿಂದ, ಹರಿಹರಕ್ಕೆ ಹೋಗಿ, ಅಲ್ಲಿ ಧಾರವಾಡ ಜಿಲ್ಹೆಯನ್ನು ಬಿಟ್ಟು ಮುಂದೆ ಬೆಂಗಳೂರ, ಮೈಸೂರಗಳ

ವರೆಗೆ ಹೋಗಿದೆ. ಇದಕ್ಕೆ ವರದೆಯ ಮೇಲೆಯೂ, ಮಿಕ್ಕ ಕಡೆಗಳಲ್ಲಿ ಯೂ ಪೂಲುಗಳು ಇರುವವು. ಇದರ ಮೇಲೆ ೧೨ ತಿಂಗಳೂ ಗಾಡಿಗಳು ಓಡಾಡುತ್ತವೆ. ಇದು ದಕ್ಷಿಣಮಹಾರಾಷ್ಟ್ರದಲ್ಲಿಯ ಅತಿ ಮಹತ್ವವುಳ್ಳ ಮಾರ್ಗವು.

(೨) ಬಾಗಲಕೋಟೆಯಿಂದ ಕಾರವಾರಕ್ಕೆ:- ಈ ಮಾರ್ಗವು ಧಾರವಾಡಜಿಲ್ಹೆಯ ಈಶಾನ್ಯದಲ್ಲಿ ಹಿರೇಹಾಳ ಎಂಬಲ್ಲಿ ಈ ಜಿಲ್ಹೆಯನ್ನು ಸೇರಿ, ರೋಣ, ನವಲಗುಂದ, ಹೆಬಸೂರ, ಹುಬ್ಬಳ್ಳಿ, ಕಲಘಟಗಿಗಳ ಮೇಲಿಂದ ಕಾರವಾರಕ್ಕೆ ಹೋಗಿದೆ. ಇದರಲ್ಲಿ ಕೆಲವು ಕಡೆಯಲ್ಲಿ ಕಚ್ಚಾ ರಸ್ತೆಯಿರುವದರಿಂದ ಮಳೆಗಾಲದಲ್ಲಿ ಕೆಸರಾಗುವದು. ಮಧ್ಯದಲ್ಲಿ ಹಾಯ್ದ ಹೊಳೆಗಳನ್ನು ನಾವೆಗಳಲ್ಲಿ ದಾಟಬೇಕಾಗುತ್ತದೆ.

(೩) ಕಾರವಾರದಿಂದ ಬಳ್ಳಾರಿಗೆ :—ಇದು ಕಾರವಾರ, ಬಾಗಲಕೋಟೆ ಮಾರ್ಗದಲ್ಲಿ ಹುಬ್ಬಳ್ಳಿಯಿಂದ ಹೊರಟು ಪೂರ್ವಕ್ಕೆ ಗದಗಿನ ವರೆಗೆ ಹೋಗಿ ಆಗ್ನೇಯಕ್ಕೆ ತಿರುಗಿ, ಡಂಬಳ, ಮುಂಡರಗಿ, ಹೆಸರೂರಿನ ಮೇಲಿಂದ ಬಳ್ಳಾರಿಯ ಕಡೆಗೆ ಹೋಗುವದು.

(೪) ಹುಬ್ಬಳ್ಳಿಯಿಂದ ಕುಮಟೆಗೆ:—ಇದು ತಡಸದ ನೆರೆಯಲ್ಲಿ ಪುಣೆ, ಹರಿಹರ ಮಾರ್ಗವನ್ನು ಬಿಟ್ಟು ಕಾರವಾರಜಿಲ್ಹೆಯೊಳಗೆ ಸಿರಸಿ ಕುಮಟೆಗಳಿಗೆ ಹೋಗುತ್ತದೆ.

(೫) ಧಾರವಾಡದಿಂದ ತಿನೈಘಟ್ಟದವರೆಗೆ:—ಇದು ಅಳನಾವರದ ಮಾರ್ಗವಾಗಿ ತಿನೈಘಟ್ಟಕ್ಕೆ ಹೋಗಿ, ಮುಂದೆ ಗೋವೆಗೆ ಹೋಗುತ್ತದೆ.

(೬) ಧಾರವಾಡದಿಂದ ಸುಪೆಗೆ:—ಇದು ಧಾರವಾಡದಿಂದ ಹಳ್ಳಿಯೊಳದ ಮಾರ್ಗವಾಗಿ ಮುಂದೆ ಸುಪೆಗೆ ಹೋಗುವದು.

ಇವಲ್ಲದೆ ಇನ್ನು ಕೆಲವು ದೊಡ್ಡ ರಸ್ತೆಗಳು ನಕಾಶದಲ್ಲಿ ದೃಷ್ಟಿಗೆ ಬೀಳುವವು. ಅವು ಬಹುತರವಾಗಿ ಲೋಕಲ್‌ಫಂಡ ಮಾರ್ಗಗಳು.

(೧) ಗೊಂದಿಯಿಂದ ಗಜೇಂದ್ರಗಡದವರೆಗೆ:- ಇದು ಗೊಂದಿಯಿಂದ ಹಾನಗಲ್ಲ, ಸವಣೂರ, ಯಲವಿಗಿ, ಲಕ್ಷ್ಮೇಶ್ವರ ಮುಳಗುಂದ, ಗದಗ ನರೇಗಲ್ಲುಗಳ ಮೇಲಿಂದ ಗಜೇಂದ್ರಗಡದವರೆಗೆ ಹೋಗಿರುವದು. ಯಲವಿ

ಗಿಯಿಂದ ಮುಂದೆ ಕಚ್ಚಾ ರಸ್ತೆ ಇದ್ದು, ಕಾರವಾರದಿಂದ ಬಾಗಲಕೋಟೆಗೆ ಹೋಗುವ ಮಾರ್ಗಕ್ಕೆ ಬಹುತರ ಸಮಾಂತರವಾಗಿ ಜಿಲ್ಹೆಯ ಮಧ್ಯದಲ್ಲಿ ಹಾಯ್ದು ನೈಋತ್ಯದಿಂದ ಈಶಾನ್ಯಕ್ಕೆ ಹೋಗಿದೆ.

(೨) ಕುಮಟೆಯಿಂದ ಹಾವನೂರಿಗೆ:—ಇದು ಸಮುಸಗಿಯಿಂದ ಆರಂಭವಾಗಿ ಆಲೂರ, ಅಡೂರ, ಹಾವೇರಿ, ಗುತ್ತಲಗಳ ಮೇಲಿಂದ ಹಾವನೂರಿಗೆ ಹೋಗಿದೆ.

(೩) ಕುಮಟೆ ಕರೂರ ರಸ್ತೆ:—ಇದು ಸಮುಸಗಿಯಿಂದ ತಿಳವಳ್ಳಿ ಕೋಡ, ಹಲಗೇರಿಗಳ ಮೇಲಿಂದ ಕರೂರದವರೆಗೆ ಹೋಗಿದೆ.

ಇದಲ್ಲದೆ ಧಾರವಾಡದಿಂದ ಸವದತ್ತಿಗೂ, ನವಲಗುಂದದಿಂದ ಗೋಕಾವಿಗೂ, ನರಗುಂದದಿಂದ ಸೊಲ್ಲಾಪುರಕ್ಕೂ, ರಸ್ತೆಗಳು ಹೋಗಿವೆ.

ಇವಲ್ಲದೆ ಒಂದು ಹಳ್ಳಿಯಿಂದ ಮತ್ತೊಂದು ಹಳ್ಳಿಗೆ ಹೋಗಲಿಕ್ಕೆ ಬಹುತರ ಲೈನಮಾರ್ಗವಿರುತ್ತದೆ. ಧಾರವಾಡ ಜಿಲ್ಹೆಗೂ ಕಾರವಾರ ಜಿಲ್ಹೆಗೂ ನಡುವೆ ಹಲವು ಮಾರ್ಗಗಳಿವೆ. ಬೆಳಗಾವಿಗೂ ೩-೪ ಮಾರ್ಗಗಳಿವೆ; ವಿಜಾಪೂರಕ್ಕೆ ೨; ಪೂರ್ವದಲ್ಲಿರುವ ನಿಜಾಮನ ರಾಜ್ಯ, ಮದ್ರಾಸ ಇಲಾಖೆ, ಮೈಸೂರ ಪ್ರಾಂತಗಳಿಗೆ ಹೋಗಲಿಕ್ಕೂ ಒಂದೆರಡು ಮುಖ್ಯ ಮಾರ್ಗಗಳಿವೆ. ಇವೆಲ್ಲ ಮಾರ್ಗಗಳಿಗೆ ಮತ್ತೆ ಸಣ್ಣ ಮಾರ್ಗಗಳು ಕೂಡಿ ಜಿಲ್ಹೆಯ ತುಂಬ ಹಬ್ಬಿರುವವೆಂಬ ಸಂಗತಿಯನ್ನು ಲಕ್ಷದಲ್ಲಿಡುವಂತಿದೆ. ಅದರಿಂದ, ಈ ಜಿಲ್ಹೆಯಲ್ಲಿ ಲೈನಮಾರ್ಗದ ಮೇಲೆ ಇರದಂಥ ಹಳ್ಳಿಗಳು ಹತ್ತರಲ್ಲಿ ಎರಡು-ಮೂರಕ್ಕಿಂತ ಹೆಚ್ಚು ದೊರೆಯಲಿಕ್ಕಿಲ್ಲ. ಒಟ್ಟಿಗೆ ಧಾರವಾಡ ಜಿಲ್ಹೆಯಲ್ಲಿ ಇತ್ತಲಾಗಿ ಉತ್ತಮವಾದ ಮಾರ್ಗಗಳನ್ನು ಮಾಡಿರುವಷ್ಟು ಬಹುಶಃ ಮುಂಬಯಿ ಇಲಾಖೆಯ ಬೇರೆ ಯಾವ ಭಾಗದಲ್ಲಿಯೂ ಮಾಡಿರುವದಿಲ್ಲವೆಂದು ಹೇಳಬಹುದು. ೫೦ ವರ್ಷಗಳ ಆಚೆಯಲ್ಲಿ ಈ ಜಿಲ್ಹೆಯಲ್ಲಿ ಒಂದೂ ಲೈನಮಾರ್ಗವಿರಲಿಲ್ಲ. ಗಾಡಿಗಳೂ ಇರಲಿಲ್ಲ. ಆದರೆ ೧೯೦೩-೪ ರ ವರೆಗೆ ಖಡೀ ಮುರಮು ಹಾಕಿದ ೩೩೭ ಮೈಲು ಪಕ್ಕಾ ಮಾರ್ಗಗಳೂ, ೯೯೫ ಮೈಲು ಕಚ್ಚಾಮಾರ್ಗಗಳೂ ಮಾಡಲ್ಪಟ್ಟವು. ಇದರಿಂದ ಈ ಜಿಲ್ಹೆಯಲ್ಲಿ ಕಳೆದ ೫೦ ವರ್ಷಗಳಲ್ಲಿ ಮಾರ್ಗಗಳ ಸುಧಾರಣೆ ಎಷ್ಟು ಆಗಿರುವದೆಂಬದು ಲಕ್ಷದಲ್ಲಿ ಬರುವದು.

ಇವುಗಳಲ್ಲಿ ಧಾರವಾಡ, ಹುಬ್ಬಳ್ಳಿ, ಗದಗ, ಹಾವೇರಿ, ರಾಣೇಬಿನ್ನೂರ ಇವು, ಮೂರು ನಾಲ್ಕು ಮುಖ್ಯ ಮಾರ್ಗಗಳು ಕೂಡುವ ಸ್ಥಳದಲ್ಲಿರುವವೆಂಬುದನ್ನು ನೆನಪಿನಲ್ಲಿಡುವಂತಿದೆ.

ಸದ್ಯದಲ್ಲಿ ಬಹುತರವಾಗಿ ಜನರೂ ವ್ಯಾಪಾರದ ಸರಕುಗಳೂ ರೇಲ್ವೆ ಮಾರ್ಗದಿಂದಲೇ ಒಂದು ಊರಿಂದ ಮತ್ತೊಂದು ದೂರದ ಊರಿಗೆ ಹೋಗುವವು. ಉಗಿಬಂಡಿಯು ಬಹು ತ್ವರೆಯಿಂದ ಹೋಗುತ್ತದೆ. ಇದರ ಹಾಸಲೂ ಬಹು ಕಡಿಮೆ. ಇವೆರಡು ಕಾರಣಗಳಿಂದ ವ್ಯಾಪಾರಕ್ಕೆ ಇದರ ಅನುಕೂಲವು ಬಹಳಾಗಿದೆ. ಧಾರವಾಡ ಜಿಲ್ಹೆಯಲ್ಲಿ ರೇಲ್ವೆ ಮಾರ್ಗಗಳು ತಕ್ಕಮಟ್ಟಿಗೆ ಇವೆ. ಒಂದು ಮಾರ್ಗವು ವಾಯುವ್ಯದಿಂದ ಆಗ್ನೇಯಕ್ಕೂ ಮತ್ತೊಂದು ಪಶ್ಚಿಮದಿಂದ ಪೂರ್ವಕ್ಕೂ ಹೋಗಿದೆ. ಪುಣೆಯಿಂದ ಬರುವ ಮಾರ್ಗವು ಅಳಣಾವರದ ಸಮೀಪದಲ್ಲಿ ಧಾರವಾಡ ಜಿಲ್ಹೆಯನ್ನು ಸೇರಿ, ಧಾರವಾಡ, ಹುಬ್ಬಳ್ಳಿ, ಯಲವಿಗಿ, ಹಾವೇರಿ, ರಾಣೇಬಿನ್ನೂರಗಳ ಮಾರ್ಗವಾಗಿ ಹರಿಹರದಿಂದ ಮೈಸೂರಿನ ಕಡೆಗೆ ಹೋಗಿದೆ. ಇದು ಪುಣೆ ಹರಿಹರ ಲೈನ ಮಾರ್ಗದ ಗುಂಟ ಹೋಗಿರುವದೆಂದು ಲಕ್ಷದಲ್ಲಿಡಬಹುದು. ರೇಲ್ವೆ ಮಾರ್ಗವು ದೂರದಲ್ಲಿರುವ ಪಟ್ಟಣಗಳ ವ್ಯಾಪಾರಕ್ಕೂ ಅವಸರದ ಕೆಲಸಕ್ಕೂ ಅಗ್ಗವಾದಾಗ್ಯೂ, ಸಮೀಪದಲ್ಲಿರುವ ವ್ಯಾಪಾರದ ಸ್ಥಳಗಳ ವ್ಯಾಪಾರವು ಇದರ ಮಾರ್ಗವಾಗಿ ನಡೆಯುವದಿಲ್ಲ. ಆದ್ದರಿಂದ, ಧಾರವಾಡ ಹುಬ್ಬಳ್ಳಿ, ಹಾವೇರಿ, ಬ್ಯಾಡಿಗಿ, ರಾಣೇಬಿನ್ನೂರುಗಳ ನಡುವೆ ನಡಿಯುವ ವ್ಯಾಪಾರದ ಸರಕುಗಳು ಲೈನಮಾರ್ಗದಿಂದಲೇ ಹೋಗುವವು.

ಹುಬ್ಬಳ್ಳಿಯಿಂದ ರೇಲಮಾರ್ಗದ ಒಂದು ಶಾಖೆಯು ಪೂರ್ವದ ಕಡೆಗೆ ಗದಗಿಗೆ ಹೋಗಿ ಮುಂದೆ ಬಳ್ಳಾರಿಯ ಕಡೆಗೆ ಸಾಗಿದೆ. ಗದಗಿನಿಂದ ಒಂದು ಮಾರ್ಗವು ಉತ್ತರದ ಕಡೆಗೆ ಸಾಗಿ ವಿಜಾಪುರ ಜಿಲ್ಹೆಯೊಳಗಿಂದ ಹುಟಗಿಗೆ ಹೋಗಿದೆ.

ಧಾರವಾಡ ಜಿಲ್ಹೆಯಲ್ಲಿ ಗದಗ, ನವಲಗುಂದ, ರೋಣ ತಾಲೂಕುಗಳಲ್ಲಿ ಮಳೆ ಬಹಳ ಕಡಿಮೆ ಬೀಳುತ್ತದೆ. ಆದ್ದರಿಂದ ಈ ಜಿಲ್ಹೆಯಲ್ಲಿ ಬರ ಬೀಳಬಹುದಾದ ತಾಲೂಕುಗಳು ಇವೇ ಎಂದು ಹೇಳಬಹುದು. ರೇಲ್ವೆಮಾರ್ಗವು ಈ ಮೂರು ತಾಲೂಕುಗಳಲ್ಲಿಯೂ ಹಾಯ್ದಿರುವದರಿಂದ ಇವುಗಳಿಗೆ ಬರದ ತಾಪತ್ರಯವು ಈಗ ಕಡಿಮೆಯಾಗಿದೆ.

ಈ ಜಿಲ್ಹೆಯಲ್ಲಿ ಹಾಯುವ ಮುಖ್ಯ ಮುಖ್ಯ ಮಾರ್ಗಗಳಲ್ಲಿ ಹತ್ತುವ ದೊಡ್ಡ ಊರುಗಳಲ್ಲಿ ಪ್ರಯಾಣಸ್ಥರೂ, ಸರಕಾರೀ ಅಧಿಕಾರಸ್ಥರೂ, ಇಳಕೊಳ್ಳಲಿಕ್ಕೆ ಮನೆಗಳಿವೆ. ಬಹುಶಃ ಈ ಊರುಗಳಲ್ಲಿ ಟಪಾಲ ಆಫೀಸುಗಳು ಇರುತ್ತವೆ. ಇಲ್ಲಿಂದ ನೆರೆಹಳ್ಳಿಗಳಿಗೆ ಟಪಾಲುಗಳನ್ನು ವಾರಕ್ಕೆ ಒಮ್ಮೆಯಾಗಲಿ ಕೆಲವೆಡೆಯಲ್ಲಿ ಎರಡು ಸಾರೆಯಾಗಲಿ ಆ ಖಾತೆಯ ಸಿಪಾಯರು ಒಯ್ದು ಜನರಿಗೆ ಮುಟ್ಟಿಸುವರು.

ರೇಲ್ವೆಯ ಷ್ಟೇಶನುಗಳಲ್ಲಿಯೂ, ದೊಡ್ಡ ಊರುಗಳಲ್ಲಿಯೂ, ತಂತೀ ಟಪಾಲಿನ ಆಫೀಸುಗಳು ಇರುತ್ತವೆ.

೯ನೇ ಪ್ರಕರಣ.

ವ್ಯಾಪಾರ.

ಧಾರವಾಡಜಿಲ್ಹೆಯೊಳಗಿನ ಜನರ ಮುಖ್ಯ ಉದ್ಯೋಗವು ಕೃಷಿಯೆಂದು ಹಿಂದೆ ಹೇಳಿರುವೆವಷ್ಟೇ. ಹುಬ್ಬಳ್ಳಿ, ಗದಗು, ಬೆಟಗೇರಿ, ಮೊದಲಾದ ಸ್ಥಳದಲ್ಲಿ ಅರಿವೆ, ಹಿತ್ತಾಳಿ, ತಾಮ್ರದ ಪಾತ್ರೆಗಳ ಕೈಗಾರಿಕೆಗಳು ನಡೆಯುತ್ತವೆಂದೂ ಹೇಳಿರುವೆವು. ಧಾರವಾಡಜಿಲ್ಹೆಯಲ್ಲಿ ಅನೇಕ ವ್ಯಾಪಾರಸ್ಥರು ವ್ಯಾಪಾರವನ್ನು ಮಾಡುವರು. ಆದ್ದರಿಂದ ಇದೊಂದು ಮಹತ್ವದ ಉದ್ಯೋಗವೆನ್ನಬಹುದು.

ಈ ಜಿಲ್ಹೆಯಲ್ಲಿ ವ್ಯಾಪಾರವು ಚನ್ನಾಗಿ ನಡೆದಾಗ್ಯೂ ವ್ಯಾಪಾರಸ್ಥರ ಸಂಖ್ಯೆಯು ಮಾತ್ರ, ಒಕ್ಕಲತನದಲ್ಲಿ ತೊಡಗಿದವರಷ್ಟು ಇಲ್ಲ. ಆದರೂ ಈ ಜಿಲ್ಹೆಯ ಸುತ್ತಲಿರುವ ಜಿಲ್ಹೆಗಳಿಗಿಂತ ಇಲ್ಲಿ ವ್ಯಾಪಾರವು ಹೆಚ್ಚಾಗಿ ನಡೆಯುವದರಿಂದಲೂ, ವಾಪಾರದಿಂದ ಈ ಸೀಮೆಯ ಸಂಪತ್ತು ಹೆಚ್ಚಾಗಿರುವದರಿಂದಲೂ, ಇದನ್ನು ಬೇರೆಯಾಗಿ ಹೇಳಿರುತ್ತೇವೆ.

ವ್ಯಾಪಾರವೆಂದರೇನು?:— ಒಂದು ಪ್ರಾಂತದವರು ತಮ್ಮಲ್ಲಿ ಹೆಚ್ಚಾಗಿ ಹುಟ್ಟುವ ಕಚ್ಚಾಮಾಲನ್ನೂ, ತಮ್ಮಲ್ಲಿ ತಯಾರಾಗುವ ಕೈಗಾರಿಕೆಯ ಸರುಕುಗಳನ್ನೂ ಬೇರೆಯವರಿಗೆ ಕೊಟ್ಟು ತಮಗೆ ಅವಶ್ಯವಿದ್ದು ತಮ್ಮಲ್ಲಿ ಹುಟ್ಟದ ಇಲ್ಲವೆ ತಯಾರಾಗದ ಸರಕುಗಳನ್ನು ಅವರಿಂದ ತೆಗೆದುಕೊಳ್ಳುವದು ವ್ಯಾಪಾರವು. ತಾವು ಸರಕು ಹೆಚ್ಚಾಗಿ ಮಾರಿ, ಕಡಿಮೆ ತರಿಸಿದರೆ ಹಣವನ್ನು ಪ್ರತಿಯಾಗಿ ತೆಗೆದುಕೊಳ್ಳುವದು ಸ್ವಾಭಾವಿಕವಾದ

ದ್ದು. ಮನುಷ್ಯರಿಗೆ ಅವಶ್ಯವಾದ ಎಲ್ಲ ಪದಾರ್ಥಗಳು ಒಂದೇಕಡೆಗೆ ಹುಟ್ಟುವದಿಲ್ಲ; ಹಾಗೂ ತಯಾರಾಗುವದಿಲ್ಲ; ಹಾಗೂ ಕೆಲವುಗಳನ್ನು ತಯಾರಿಸಲಿಕ್ಕೆ ಅನುಕೂಲವೂ ಇರುವದಿಲ್ಲ. ಆದ್ದರಿಂದ ನಮ್ಮಲ್ಲಿ ಬೆಳೆಯುವ ಇಲ್ಲವೆ ತಯಾರಾಗುವ ಸರಕುಗಳನ್ನು ಅವುಗಳ ಅವಶ್ಯವಿದ್ದವರಿಗೆ ಕಳಿಸಿ, ಅವರಲ್ಲಿ ಹುಟ್ಟುವ ಇಲ್ಲವೆ ತಯಾರಾಗುವ ಪದಾರ್ಥಗಳನ್ನು ನಾವು ತರಿಸಿಕೊಳ್ಳುವದು ಇಬ್ಬರಿಗೂ ಲಾಭಕರವು.

ಇನ್ನು, ಒಂದು ಸೀಮೆಯ ವ್ಯಾಪಾರವು ಹೆಚ್ಚಾಗಿ ನಡೆಯಬೇಕಾದರೆ, ಅದಕ್ಕೆ ಹಲವು ಅನುಕೂಲಗಳು ಇರಬೇಕಾಗುವವು. ಅವು ಯಾವವೆಂದರೆ:—

(೧) ದೇಶದಲ್ಲಿ ಹೆಚ್ಚಾಗಿ ಹುಟ್ಟುವ ಕಚ್ಚಾಮಾಲಾಗಲಿ ತಯಾರಾಗುವ ಕೈಗಾರಿಕೆಯ ಸರಕುಗಳಾಗಲಿ, ಸುತ್ತಲಿರುವ ದೇಶದವರಿಗೆ ಬೇಕಾಗಿರಬೇಕು.

(೨) ದೇಶದಿಂದ ದೇಶಗಳಿಗೆ ಹೋಗಲಿಕ್ಕೆ ಮಾರ್ಗಗಳಿರಬೇಕು.

(೩) ದೇಶವು ಸುತ್ತಲಿರುವ ದೇಶಗಳ ಸರಕುಗಳನ್ನು ಖರೀದಿಮಾಡಿ, ನಾಲ್ಕು ಕಡೆಗೆ ಕಳಿಸುವಂಥ ಸ್ಥಳದಲ್ಲಿರಬೇಕು.

ಧಾರವಾಡಜಿಲ್ಹೆಯೊಳಗೆ ಈ ಅನುಕೂಲಗಳು ಎಷ್ಟರಮಟ್ಟಿಗೆ ಇರುವವೆಂಬದನ್ನು ನೋಡೋಣ:—

(೧) ಇಲ್ಲಿ ಯಾವ ಕಚ್ಚಾಮಾಲು ಹುಟ್ಟುತ್ತದೆ? ಹಾಗೂ ಎಷ್ಟು ಹುಟ್ಟುತ್ತದೆ? ಎಂಬ ಪ್ರಶ್ನೆಗಳು ಮಹತ್ವದವಿರುತ್ತವೆ. ಎಲ್ಲ ಮನುಷ್ಯರಿಗೆ ಅತ್ಯವಶ್ಯವಾದ ಪದಾರ್ಥಗಳೆಂದರೆ ತಿನ್ನಲಿಕ್ಕೆ ಕಾಳು, ಹೊತ್ತುಕೊಳ್ಳಲಿಕ್ಕೆ ಅರಿವೆಅಂಚಡಿ, ಉಪಯೋಗಿಸಲಿಕ್ಕೆ ಪಾತ್ರೆಗಳು ಎಂಬದನ್ನು ಹೇಳುವ ಕಾರಣವಿಲ್ಲ. ಧಾರವಾಡಜಿಲ್ಹೆಯ ಮಲೆನಾಡಿನಲ್ಲಿ ಅಕ್ಕಿ, ಕಬ್ಬು ವಿಶೇಷವಾಗಿ ಬೆಳೆಯುತ್ತವೆ. ಬೈಲುಸೀಮೆಯ ಫಲವತ್ತಾದ ಕರೇಭೂಮಿಯಲ್ಲಿ ಹತ್ತಿ, ಜೋಳ, ಗೋದಿ, ಕಡ್ಲೆ, ಎಣ್ಣೆಯ ಕಾಳುಗಳು ಬೇಕಾದಷ್ಟು ಬೆಳೆಯುತ್ತವೆ. ಈ ಜಿಲ್ಹೆಯ ಜನರಿಗೆ ಹೆಚ್ಚಾದ ಈ ಕಾಳುಗಳನ್ನು ಸುತ್ತಲಿರುವ ದೇಶಗಳಿಗೆ ಕಳಿಸುವದಲ್ಲದೆ ದೂರದೂರ ದೇಶಗಳಿಗೂ ಕಳಿಸಲಿಕ್ಕೆ ಬರುವಂತಿದೆ. ಮಲ್ನಾಡದ ಅಕ್ಕಿಯೂ, ಕಬ್ಬೂ ಬಹುತರವಾಗಿ ಹೊರಗೆ ಹೋಗುವದಿಲ್ಲ. ಧಾರವಾಡ ಜಿಲ್ಹೆಯಲ್ಲಿಯೇ

ವೆಚ್ಚವಾಗುತ್ತವೆ. ಆದರೆ ಬೈಲು ಸೀಮೆಯ ಜೋಳ, ಕಡ್ಲೆ ಮೊದಲಾದ ವುಗಳು ಬಳ್ಳಾರಿ ಮೈಸೂರಗಳ ಕಡೆಗೆ ಹೋಗುತ್ತವೆ. ಗೋದಿ, ಎಣ್ಣೆಯ ಕಾಳುಗಳು, ಹತ್ತಿ ಇವು ಸುತ್ತಲಿನ ದೇಶಗಳಿಗೆ ಅಲ್ಪ ಸ್ವಲ್ಪ ಹೋಗುತ್ತವಲ್ಲದೆ, ಮುಂಬಯಿಗೂ ಹೋಗುವದುಂಟು. ಮುಂಬಯಿಯಿಂದ ಕೆಲವು ಸರಕುಗಳು ವಿಲಾಯತಿಗೆ ಸಹ ಹೋಗುವವು. ಅಂತೂ ಇಲ್ಲಿ ಆಹಾರಕ್ಕೆ ಬೇಕಾಗುವ ಕಾಳೂ ಬಟ್ಟೆಗೆ ಬೇಕಾದ ಹತ್ತಿಯೂ ವಿಶೇಷವಾಗಿ ಬೆಳೆಯುತ್ತವೆ. ಇಲ್ಲಿಯ ಜೋಳ, ಗೋದಿ, ಹತ್ತಿ, ಎಣ್ಣೀ ಕಾಳುಗಳು ಮೇಲ್ತರದವಿರುವದರಿಂದ ಸುತ್ತಲಿನ ಪ್ರದೇಶಗಳಿಗೆ ಇವು ಹೋಗುವವು. ಇಲ್ಲಿ ತಯಾರಾಗುವ ಕೈಗಾರಿಕೆಗಳಲ್ಲಿ ಹುಬ್ಬಳ್ಳಿಯ ಹಿತ್ತಾಳಿ ತಾಮ್ರದ ಪಾತ್ರೆಗಳು ದಕ್ಷಿಣ ಕರ್ನಾಟಕದಲ್ಲಿ ಹೆಸರಾದವಿರುತ್ತವೆ. ನಮ್ಮ ಜನರು ಈ ಪಾತ್ರೆಗಳನ್ನು ಬಹಳವಾಗಿ ಉಪಯೋಗಿಸುವದರಿಂದ ಇವು ಸುತ್ತಲಿರುವ ಪ್ರದೇಶದವರಿಗೂ ಬೇಕಾಗುವವು. ಹುಬ್ಬಳ್ಳಿಯ ಪಾತ್ರೆಗಳು ಬೆಳಗಾವಿ, ವಿಜಾಪುರ, ಧಾರವಾಡ ಜಿಲ್ಹೆಗಳಿಗೆ ಹೋಗುವವಲ್ಲದೆ, ಮೈಸೂರ ಪ್ರಾಂತಕ್ಕೂ, ನಿಜಾಮನ ಸೀಮೆಗೂ, ಬಳ್ಳಾರಿ, ಕಡಪೆ, ಮೊದಲಾದ ಆಗ್ನೇಯದ ಪ್ರದೇಶಗಳಿಗೂ ಹೋಗುತ್ತವೆ. ಈ ಮೇರೆಗೆ ಈ ಜಿಲ್ಹೆಯ ಸುತ್ತಲಿರುವ ಪ್ರದೇಶಗಳ ಜನರಿಗೆ ಅತ್ಯವಶ್ಯವಾದ ಸರಕುಗಳೇ ಇಲ್ಲಿ ಹೆಚ್ಚಾಗಿ ಬೆಳೆಯುವದರಿಂದ, ಇಲ್ಲಿಯ ವ್ಯಾಪಾರವು ಹೆಚ್ಚಾಗಿದೆ.

(೨) ನೂರುವರ್ಷಗಳ ಹಿಂದೆ ಧಾರವಾಡಜಿಲ್ಹೆಯ ವ್ಯಾಪಾರವು ಇಷ್ಟಿರಲಿಲ್ಲ. ಯಾಕಂದರೆ ಆಗ ದೇಶದಲ್ಲಿ ಹೆಚ್ಚಾಗಿ ಬೆಳೆಯುವ ಪದಾರ್ಥಗಳನ್ನು ಸುತ್ತಲಿರುವ ದೇಶಗಳಿಗೆ ಕಳಿಸಲಿಕ್ಕೆ ಒಳ್ಳೇಮಾರ್ಗಗಳಿರಲಿಲ್ಲ. ದೂರದೇಶಕ್ಕೆ ಸರಕುಗಳನ್ನು ಕಳಿಸುವದು ಬಹು ಪ್ರಯಾಸವಾಗಿತ್ತು. ಅಷ್ಟು ಸಾಹಸಮಾಡಿ ಕಳಿಸಿದರೂ ತಕ್ಕಷ್ಟು ಲಾಭವಾಗುತ್ತಿದ್ದಿಲ್ಲ. ಆದ್ದರಿಂದ ಜನರು ತಮಗೆ ಅವಶ್ಯವಿದ್ದದ್ದಕ್ಕಿಂತ ಹೆಚ್ಚಾದ ಮಾಲನ್ನು ಬೆಳೆಯಿಸುತ್ತಿದ್ದಿಲ್ಲ. ಆದರೆ ಹಿಂದೆ ಹೇಳಿದಂತೆ ಇಂಗ್ಲಿಷರ ಅಮಲು ಪ್ರಾರಂಭವಾದಂದಿನಿಂದ ಮಾರ್ಗಗಳು ಹೆಚ್ಚಾಗುತ್ತ ನಡೆದವು. ವ್ಯಾಪಾರಕ್ಕೆ ಬಹಳ ಅನುಕೂಲವಾದ ರೇಲ್ವೆಮಾರ್ಗಗಳು ಜಿಲ್ಹೆಯ ನಾಲ್ಕೂ ಕಡೆಗೆ ಹಬ್ಬಿದವು. ಇದರಿಂದ ದೂರ ದೂರ ದೇಶಗಳ ಸಂಗಡ ಸಹ ವ್ಯಾಪಾರ ನಡಿಸಲಿಕ್ಕೆ ಅನುಕೂಲವಾಯಿತು. ವರ್ಷದಲ್ಲೆಲ್ಲ ಚಕ್ಕಡಿಗಳೂ ಮನು

ಷ್ಯರೂ ಯಥೇಚ್ಛವಾಗಿ ಓಡಾಡಲಿಕ್ಕೆ ಅನುಕೂಲವಾದ ಮಾರ್ಗಗಳು ಧಾರವಾಡ ಜಿಲ್ಹೆಯ ಸುತ್ತಲಿರುವ ಪ್ರದೇಶಗಳಿಗೆಲ್ಲ ಹೋಗಿವೆ. ರೇಲ್ವೆ ಯಿಂದ ಮುಂಬಯಿ, ಬೆಳಗಾವಿ, ವಿಜಾಪುರ, ಬಳ್ಳಾರಿ, ಮೈಸೂರ ಸೀಮೆ ಗಳಿಗೆ ಸರಕುಗಳನ್ನು ಕಳಿಸುವ ಅನುಕೂಲವುಂಟಾಗಿದೆ. ಈ ಜಿಲ್ಹೆ ಯಿಂದ ಕಾರವಾರ ಜಿಲ್ಹೆಗೆ ರೇಲ್ವೆ ಮಾರ್ಗವಿಲ್ಲದಿದ್ದರೂ ಚಕ್ಕಡಿಯ ಮಾರ್ಗಗಳು ಹಲವು ಇವೆ. ಬೆಳಗಾವಿಗೆ ಮೂರು, ವಿಜಾಪುರಕ್ಕೆ ಮೂರು, ನಿಜಾಮ ಇಲಾಖೆಗೆ ಎರಡು, ಮದ್ರಾಸ ಪ್ರಾಂತಕ್ಕೆ ಮೂರು, ಮೈಸೂರಿಗೆ ಮೂರು ಮಾರ್ಗಗಳಿದ್ದಾಗ್ಯೂ, ಕಾರವಾರಕ್ಕೊಂದಕ್ಕೇ ಐದಾರು ಮಾರ್ಗಗಳಿರುವವು. ಈ ಮೇರೆಗೆ ಧಾರವಾಡ ಜಿಲ್ಹೆಗೂ ಸುತ್ತ ಲಿರುವ ಸೀಮೆಗಳಿಗೂ, ವ್ಯಾಪಾರಕ್ಕೆ ಹಲವು ಮಾರ್ಗಗಳಿವೆ. ಇದಲ್ಲದೆ ಒಳದೇಶದ ವ್ಯಾಪಾರಕ್ಕೂ ಅನುಕೂಲವಾಗುವಂತೆ ಅನೇಕ ಮಾರ್ಗಗಳು ಜಿಲ್ಹೆಯ ತುಂಬ ಹಬ್ಬಿವೆ. ಒಂದು ದೊಡ್ಡ ಲೈನ ಮಾರ್ಗವೂ, ರೇಲ್ವೆ ಮಾರ್ಗವೂ ಜಿಲ್ಹೆಯ ಮಧ್ಯದಲ್ಲಿ ವಾಯುವ್ಯದಿಂದ ಆಗ್ನೇಯಕ್ಕೆ ಹೋಗಿರು ವವು. ಈ ಮಾರ್ಗವನ್ನು ಈಶಾನ್ಯದಿಂದ ನೈಋತ್ಯದ ಕಡೆಗೆ ಹೋಗುವ ಮಾರ್ಗಗಳು ಛೇದಿಸಿವೆ. ಇವಲ್ಲದೆ ಜಿಲ್ಹೆಯ ಪಡಮೂಲೆಗಳನ್ನೂ, ವ್ಯಾಪಾರದ ಮುಖ್ಯ ಸ್ಥಳಗಳನ್ನೂ ಕೂಡಿಸುವ ಹಲವು ಮಾರ್ಗಗಳು ಅಲ್ಲಲ್ಲಿ ಇವೆ. ಈ ಮೇರೆಗೆ ಒಳದೇಶದ ವ್ಯಾಪಾರಕ್ಕೆ ಅನುಕೂಲವಾಗು ವಂತೆ ಮಾರ್ಗಗಳು ಜಾಳಿಗೆಯಂತೆ ಹಬ್ಬಿವೆ.

ಇನ್ನು, ಈ ಜಿಲ್ಹೆಯ ಸುತ್ತಲಿರುವ ಪ್ರದೇಶಗಳ ಸಂಬಂಧದಿಂದ ಈ ಜಿಲ್ಹೆಯ ವ್ಯಾಪಾರಕ್ಕೆ ಅನುಕೂಲ ಪ್ರತಿಕೂಲ ಸಂಗತಿಗಳನ್ನು ವಿಚಾ ರಿಸುವ:-

ಧಾರವಾಡ ಜಿಲ್ಹೆಯಲ್ಲಿ ಹುಟ್ಟುವ ಸರಕುಗಳೇ ಸ್ವಲ್ಪ ಪ್ರಮಾಣ ದಿಂದ ಸುತ್ತಲಿರುವ ಪ್ರದೇಶಗಳಲ್ಲಿ ಹುಟ್ಟುವದಾದರೆ ಈ ಜಿಲ್ಹೆಯು ನಡುವೆ ಇರುವದರಿಂದ ಇದಕ್ಕೆ ಏನೂ ಲಾಭವಾಗಲಾರದು. ಇದು ತನ್ನಲ್ಲಿದ್ದ ಸರಕುಗಳನ್ನು ಕಳಿಸಿ ಕೈಮುಚ್ಚಿಕೊಂಡು, ಹಣ ಬರುವ ಮಾರ್ಗವನ್ನು ನಿರೀಕ್ಷಿಸುತ್ತ, ಕೂಡ್ರಬೇಕಾಗುವದು. ಇದರೆ ಇದು ಒಂದು ಪ್ರದೇಶದ ಮಾಲನ್ನು ಮತ್ತೊಂದು ಪ್ರದೇಶಕ್ಕೆ ಹಂಚುವಂತಿದ್ದರೆ, ಅಂದರೆ ಇದರ ಸುತ್ತಲಿರುವ ಪ್ರದೇಶಗಳಲ್ಲಿ ಬೇರೆ ಬೇರೆ ತರದ ಸರಕುಗಳು ಹುಟ್ಟುವಂತಿದ್ದರೆ, ಇದು ತನ್ನ ಸರಕುಗಳ ವ್ಯಾಪಾರವನ್ನು ಮಾಡುವದ

ಲ್ಲದೆ, ಇತರ ಪ್ರದೇಶಗಳ ವ್ಯಾಪಾರವನ್ನೂ ತನ್ನ ಕೈಯ್ಯಲ್ಲಿ ತಕ್ಕೊಳ್ಳಬಹುದು. ಧಾರವಾಡ ಜಿಲ್ಹೆಗೆ ಈ ಅನುಕೂಲವು ಚನ್ನಾಗಿ ಇರುವದೆಂದು ಗೊತ್ತಾಗುವದು. ವಿಜಾಪುರ ಬೆಳಗಾವಿ ಜಿಲ್ಹೆಗಳನ್ನು ಬಿಟ್ಟರೆ ಇದರ ಸುತ್ತಲಿರುವ ಇತರ ಪ್ರದೇಶಗಳಲ್ಲಿ ಹುಟ್ಟುವ ಸರಕುಗಳು ಭಿನ್ನವಾದವಿರುತ್ತವೆ. ಕಾರವಾರ ಜಿಲ್ಹೆಯೂ, ಮೈಸೂರ ಪ್ರಾಂತವೂ ಅಡಿಕೆ, ತೆಂಗು, ಯಾಲಕ್ಕಿ, ಮೆಣಸು, ಮೊದಲಾದ ಪದಾರ್ಥಗಳಿಗೆ ಹೆಸರಾದವಿರುತ್ತವೆ. ಈ ಸರಕುಗಳು ಮದ್ರಾಸ ಇಲಾಖೆಯಲ್ಲಿಯೂ, ನಿಜಾಮನ ರಾಜ್ಯದಲ್ಲಿಯೂ, ಉತ್ತರದಲ್ಲಿರುವ ಜಿಲ್ಹೆಗಳಲ್ಲಿಯೂ ಬೆಳೆಯುವದಿಲ್ಲ. ಧಾರವಾಡ ಜಿಲ್ಹೆಯಿಂದ ಈ ಸಾಮಾನುಗಳು ಎಲ್ಲ ದೇಶಗಳಿಗೆ ಹೋಗುತ್ತವೆ. ಈ ಮೇರೆಗೆ ಧಾರವಾಡ ಜಿಲ್ಹೆಯು ಸ್ಥಾನಮಾಹಾತ್ಮ್ಯದಿಂದ, ತನ್ನಲ್ಲಿ ಹುಟ್ಟಿದ ಸರಕುಗಳನ್ನು ಸಹ ತಂದು ದೂರದೂರದ ದೇಶಗಳಿಗೆ ಕಳಿಸಿ ಲಾಭಮಾಡಿಕೊಳ್ಳುವದು.

ಧಾರವಾಡವು ಹೊರಗೆ ಕಳಿಸುವ ಸರಕುಗಳನ್ನು ಮಾತ್ರ ಇಲ್ಲಿಯವರೆಗೆ ಹೇಳಿದೆವು. ಇನ್ನು, ಇಲ್ಲಿ ಬೆಳೆಯುವಿರುವ ಹಾಗೂ ತಯಾರಾಗದೆ ಸಾಮಾನುಗಳನ್ನು ಈ ಜಿಲ್ಹೆಯುವರು ಹೊರಗಿನಿಂದ ತರಿಸಬೇಕಷ್ಟೇ. ಹೊರಗಿಂದ ಬರುವ ಸರುಕುಗಳಿಗೆ ಆಮದವೆಂದೂ ಹೊರಗೆ ಹೋಗುವ ಸರುಕುಗಳಿಗೆ ರಫ್ತವೆಂದೂ ಅನ್ನುವದುಂಟು. ಆಮದಾಗುವ ಪದಾರ್ಥಗಳೆಲ್ಲ ಇಲ್ಲಿಯೇ ಹುಟ್ಟಿರಬೇಕೆಂಬದು ನಿಯಮವಲ್ಲವೆಂದು ಮೇಲೆ ಹೇಳಿದ ಸಂಗತಿಯಿಂದ ಸಿದ್ಧವಾಗುತ್ತದೆ. ಒಂದು ಸೀಮೆಯ ಹುಟ್ಟುವಳಿಯೂ ಕೈಗಾರಿಕೆಯೂ ಗೊತ್ತಿದ್ದರೆ, ಆ ದೇಶದ ಆಮದ-ರಫ್ತಗಳನ್ನು ನಾವು ಹೇಳಬಹುದು. ಈ ಜಿಲ್ಹೆಯ ಹುಟ್ಟುವಳಿ ಕೈಗಾರಿಕೆಗಳ ಬಗ್ಗೆ ಹಿಂದೆ ಹೇಳಿದ್ದೇವೆ. ಇನ್ನು ಇಲ್ಲಿಯ ಆಮದ ರಫ್ತಗಳಲ್ಲಿ ಮುಖ್ಯವಾದವುಗಳನ್ನು ಮಾತ್ರ ಹೇಳುವೆವು:-

ರಫ್ತಾಗುವ ಸರಕುಗಳಲ್ಲಿ ಹತ್ತಿಯು ಎಲ್ಲಕ್ಕೂ ಮಹತ್ವದ್ದು. ಇಲ್ಲಿಯ ಹತ್ತಿಯಲ್ಲಿ ಜವಾರಿ ಹತ್ತಿಯೆಂದೂ, ವಿಲಾಯತಿ ಹತ್ತಿಯೆಂದೂ ಎರಡು ಪ್ರಕಾರಗಳುಂಟು. ಜವಾರಿಹತ್ತಿಯ ಬಹಳ ಭಾಗವು ಹೊರಗೆ ಹೋಗುತ್ತದೆ. ಈ ಜಿಲ್ಹೆಯಲ್ಲಿ ನೂಲಿನ ಬಟ್ಟೆಗಳು ಹುಬ್ಬಳ್ಳಿ, ಗದಗು, ಬೆಟಗೇರಿ ಮುಂತಾದ ಊರುಗಳಲ್ಲಿ ತಯಾರಾಗುತ್ತಿದ್ದರೂ, ಇಲ್ಲಿಯ

ನೇಕಾರರು ಮುಂಬಯಿಯಿಂದ ತಯಾರಾಗಿ ಬಂದ ನೂಲನ್ನೇ ಉಪಯೋಗಿಸುವರು. ಇಲ್ಲಿಯ ಅರಳೆಯನ್ನೂ ಅಲ್ಪ ಸ್ವಲ್ಪ ನೂಲುವದುಂಟು.

ಮಗ್ಗದ ಅರಿವೆಗಳು ಕಾನಡಾಜಿಲ್ಹೆ, ಬಳ್ಳಾರಿ, ಕಡಪೆಗಳಿಗೆ ಹೋಗುತ್ತವೆ. ಗದಗ, ಹುಬ್ಬಳ್ಳಿಯ ಸೀರೆಗಳೂ, ಧೋತರಗಳೂ, ಬೆಳಗಾವಿ. ಬಳ್ಳಾರಿಗಳಿಗೆ ಹೋಗುತ್ತವೆ.

ಕಾಳುಗಳಲ್ಲಿ ಜೋಳ ಗೋದಿಗಳು, ಮೈಸೂರ ಪ್ರಾಂತಕ್ಕೂ ಬಳ್ಳಾರಿಗೂ ಸ್ವಲ್ಪ ಭಾಗವು ಕಾನಡಾ ಜಿಲ್ಹೆಗೂ ಹೋಗುವವು. ಎಣ್ಣೀ ಕಾಳುಗಳೂ, ಹತ್ತಿಯ ಬೀಜಗಳೂ, ಗೋದಿಯೂ ಮುಂಬಯಿಗೆ ಹೋಗಿ, ಮುಂದೆ ವಿಲಾಯತಿಗೆ ಸಹ ಹೋಗುವವು.

ಹಿತ್ತಾಳಿಯ ಹಾಗೂ, ತಾಮ್ರದ ಪಾತ್ರೆಗಳು ಹುಬ್ಬಳ್ಳಿಯಿಂದ, ಬಳ್ಳಾರಿ, ಬೆಂಗಳೂರ, ಬೆಳಗಾವಿಗಳಿಗೆ ಹೋಗುವವು.

ಯಾಲಕ್ಕಿ, ಮೆಣಸು, ಇವು ಮೈಸೂರಿನಿಂದಲೂ ಕಾನಡಾ ಜಿಲ್ಹೆಯಿಂದಲೂ ಬಂದು ಉತ್ತರದಲ್ಲಿ ಪುಣೆ ಮುಂಬಯಿ ಸಾತಾರೆಗಳಿಗೆ ಹೋಗುವವು.

ಆಮದವಾಗುವ ಪದಾರ್ಥಗಳಲ್ಲಿ ಹಲವು ಹಿಂದುಸ್ತಾನದ ಹೊರಗಿನಿಂದ ಬರುವವೆಂದು ಸಾಮಾನ್ಯವಾಗಿ ಹೇಳಬಹುದು. ನಮ್ಮಲ್ಲಿ ಮುಖ್ಯವಾಗಿ ಧಾನ್ಯವು ಹುಟ್ಟುವದು. ಅರಿವೆಗಳಿಗೆ ಅವಶ್ಯವಾದ ಹತ್ತಿಯು ಹುಟ್ಟಿದರೂ, ನೂಲು ಮಾತ್ರ ಮುಂಬಯಿಯಿಂದ ಬರುವದು. ಆದ್ದರಿಂದ ಮನುಷ್ಯನಿಗೆ ಬೇಕಾಗುವ ಸಂಣಪುಟ್ಟ ಸರಕುಗಳೆಲ್ಲ ಹೊರಗಿಂದಲೇ ಈ ಜಿಲ್ಹೆಗೆ ಬರುವದೆಂಬದನ್ನು ಲಕ್ಷದಲ್ಲಿಡುವಂತಿದೆ. ಈ ಜಿಲ್ಹೆಯಲ್ಲಿ ಮಧ್ಯಮ ಸ್ಥಿತಿಯಲ್ಲಿರುವ ಜನರ ಮನೆಗೆ ಹೋಗಿ, ಅವರು ಉಪಯೋಗಿಸುವ ಪದಾರ್ಥಗಳನ್ನು ಪರೀಕ್ಷಿಸಿದರೆ ಅವುಗಳಲ್ಲಿ ಅನೇಕ ಪದಾರ್ಥಗಳು ಹೊರಗಿಂದ ಬರುವವೆಂದು ಮನಗಾಣಬಹುದು. ಇತರ ದೇಶದವರಿಗೆ ಕೈಗಾರಿಕೆಯ ವಿಷಯದಲ್ಲಿರುವ ಅನುಕೂಲಗಳು ನಮ್ಮ ಜಿಲ್ಹೆಯಲ್ಲಿ ಇಲ್ಲದಿರುವದೇ ಇದಕ್ಕೆ ಕಾರಣವು. ನಮ್ಮಲ್ಲಿ ಹಳ್ಳಿಯವರಿಗೆ ಸಹ ಅತ್ಯವಶ್ಯವೆನಿಸುವ ಕೆಲವು ಪದಾರ್ಥಗಳು ಪರದೇಶಗಳಿಂದಲೇ ಬರುವವು.

ಕಬ್ಬಿಣವೂ ಕಬ್ಬಿಣದ ಬಹುತರ ಎಲ್ಲಬಗೆಯ ಸಾಮಾನುಗಳೂ ಅತಿದೊಡ್ಡ ಕಾರಖಾನೆಯ ಯಂತ್ರಗಳಿಂದ ಸಣ್ಣ ಸಣ್ಣ ಮೊಳೆಗಳ ವರೆಗೆ ವಿಲಾಯತಿಯಿಂದ ಬರುತ್ತವೆ. ಯಂತ್ರದಿಂದ ತಯಾರಾದ ಅರಿವೆಗಳೂ ನೂಲೂ ವಿಲಾಯತಿಯಿಂದಲೇ ಬರುತ್ತವೆ. ಕೆಲವು ಮುಂಬಯಿಯಿಂದಲೂ ಬರುತ್ತವೆ. ಚಿಮಣೀ ಎಣ್ಣೆಯು ರಸಿಯಾದಿಂದಲೂ ಸಂಯುಕ್ತಸಂಸ್ಥಾನ ಬ್ರಹ್ಮದೇಶಗಳಿಂದಲೂ ಮುಂಬಯಿಯ ಮಾರ್ಗವಾಗಿ ಬರುತ್ತದೆ. ಕಡ್ಡೀಪೆಟ್ಟಿಗೆಗಳು ನಾರ್ವೆ, ಸ್ವೀಡನ್, ಜಪಾನದಿಂದಲೂ ಮುಂಬಯಿಯಿಂದಲೂ ಬರುತ್ತವೆ. ಬೆಳ್ಳಿ, ಬಂಗಾರ, ಕಬ್ಬಿಣ, ತಾಮ್ರಗಳು ಪರದೇಶದಿಂದ ಮುಂಬಯಿ ಮಾರ್ಗವಾಗಿಯೇ ಬರುತ್ತವೆ.

ಅರಿವೆಗಳಲ್ಲಿ ಶಾಲುಗಳೂ ಸೀರೆಗಳೂ ಬೆಂಗಳೂರಿನಿಂದಲೂ, ಪೀತಾಂಬರಗಳು ಕಾಶಿಯಿಂದಲೂ, ಬರುತ್ತವೆ. ಹಿತ್ತಾಳಿ-ತಾಮ್ರದ ಪಾತ್ರೆಗಳು ನಾಶಿಕ, ಪುಣೆ ನಾಗಪೂರಗಳಿಂದ ಬರುತ್ತವೆ. ಸಕ್ಕರೆ, ಬೆಲ್ಲ, ಅರಿಸಿಣ ಮೊದಲಾದವುಗಳು ಬೆಂಗಳೂರಿಂದ ಬರುವವಲ್ಲದೆ ಮುಂಬಯಿಯಿಂದಲೂ ಬರುತ್ತವೆ. ಕೊಬ್ಬರಿಎಣ್ಣೆ, ಯಾಲಕ್ಕಿ, ತೆಂಗಿನಕಾಯಿ, ಮೆಣಸು, ಅಡಿಕೆ, ಕಾನಡಾದಿಂದಲೂ ಮೈಸೂರಿಂದಲೂ ಬರುತ್ತವೆ.

ಈ ಜಿಲ್ಹೆಯಲ್ಲಿ ವ್ಯಾಪಾರಕ್ಕೆ ಹೆಸರಾದ ಹತ್ತು ಊರುಗಳವೆ. ಅವುಗಳಲ್ಲಿ ಐದು ಪಡಮೂಲೆಗಳೂ, ಐದು ಕಿರುಕಳ ಹಾಗೂ ಠೋಕ ವ್ಯಾಪಾರವಾಡುವ ಸ್ಥಳಗಳೂ ಇರುವವು. ಪಶ್ಚಿಮದಲ್ಲಿ ಹುಬ್ಬಳ್ಳಿ-ಧಾರವಾಡ ಪಟ್ಟಣಗಳಲ್ಲಿಯೂ, ಪೂರ್ವದಲ್ಲಿ ಗದಗಿನಲ್ಲಿಯೂ, ಉತ್ತರದಲ್ಲಿ ನವಲಗುಂದದಲ್ಲಿಯೂ, ದಕ್ಷಿಣದಲ್ಲಿ ರಾಣೆಬೆನ್ನೂರಲ್ಲಿಯೂ ಠೋಕ ಹಾಗು ಕಿರುಕಳ ವ್ಯಾಪಾರವು ನಡೆಯುತ್ತದೆ, ಇವು ವ್ಯಾಪಾರದಬಗ್ಗೆ ಇಷ್ಟು ಹೆಸರಾದ ಕಾರಣವನ್ನು ಇಲ್ಲಿ ವಿವರಿಸುತ್ತೇವೆ:—

ಹುಬ್ಬಳ್ಳಿ:— ಪಶ್ಚಿಮದಲ್ಲಿ ಮಲ್ಲಾಡವಿದೆ. ಪೂರ್ವದಲ್ಲಿ ಬೈಲುಸೀಮೆಯದೆ. ತಾಲೂಕು ಬೆಳೆಯುಳ್ಳದ್ದು. ಮಾರ್ಗಗಳ ದೃಷ್ಟಿಯಿಂದ ಅತಿ ಮಹತ್ವವುಳ್ಳದ್ದು. ಉತ್ತರ ದಕ್ಷಿಣ ಪೂರ್ವಗಳ ಕಡೆಗೆ ರೇಲ್ವೆ ಮಾರ್ಗ ಹಾಗು ಲೈನ ಮಾರ್ಗವಿದೆ. ಪಶ್ಚಿಮದಲ್ಲಿ ಕಾರವಾರದಿಂದಲೂ ಕುಮಟೆಯಿಂದಲೂ ರಾಜಮಾರ್ಗಗಳು. ಉತ್ತರದಲ್ಲಿ ನವಲಗುಂದಕ್ಕೆ ಮಾರ್ಗ

ವು. ಜಿಲ್ಹೆಯಲ್ಲಿ ಅರಿವೆ, ಹತ್ತಿ, ಪಾತ್ರೆಗಳ ಕೈಗಾರಿಕೆಗಳ ಮುಖ್ಯ ಸ್ಥಳ. ಪ್ರಾಚೀನಕಾಲದಿಂದ ವ್ಯಾಪಾರದ ಬಗ್ಗೆ ಹೆಸರಾದ ಸ್ಥಳ. ಇವೆಲ್ಲ ಕಾರಣಗಳಿಂದ ಹುಬ್ಬಳ್ಳಿಯು ಇಡೀ ಜಿಲ್ಹೆಯಲ್ಲಿ, ಬಹುಶಃ ಕರ್ನಾಟಕದಲ್ಲಿ ವ್ಯಾಪಾರಕ್ಕೆ ಹೆಸರಾದ ಪಟ್ಟಣವಾಗಿದೆ.

ಧಾರವಾಡ:- ಪೂರ್ವದಲ್ಲಿ ಬೆಳೆಯುಳ್ಳ ಭೂಮಿಯು. ಹುಬ್ಬಳ್ಳಿ, ಸವದತ್ತಿ, ಹಳ್ಳಿಯಾಳ, ಬೆಳಗಾಂವಿ, ಮೊದಲಾದವುಗಳ ಮಾರ್ಗಗಳು ಈ ಊರಲ್ಲಿ ಕೂಡಿರುತ್ತವೆ. ಪಶ್ಚಿಮಕ್ಕೆ ಹತ್ತಿದ ಕಾರವಾರ ಜಿಲ್ಹೆಯ ಭಾಗವು ಬೆಳೆಯುಳ್ಳದ್ದಲ್ಲ. ಆದ್ದರಿಂದ ಕಾರವಾರದ ಸರಕು ಇಲ್ಲಿಗೆ ಬರುವದಿಲ್ಲ. ಬೆಳಗಾಂವಿ-ಮುಂಬಯಿಗಳಿಗೆ ಈ ಜಿಲ್ಹೆಯಲ್ಲಿ ಇದು ರೇಲ್ವೆ ಮಾರ್ಗದಿಂದ ತೀರ ಸಮೀಪದ ಊರು. ಜಿಲ್ಹೆಯ ಮುಖ್ಯಸ್ಥಳ.

ಗದಗ:- ಪೂರ್ವಭಾಗದಲ್ಲಿಯ ದೊಡ್ಡ ಪಟ್ಟಣ. ಹತ್ತಿ, ಗೋದಿ ಬೆಳೆಯುವ ಪ್ರದೇಶದ ಮಧ್ಯದಲ್ಲಿರುವ ಊರು. ಗಜೇಂದ್ರಗಡ, ಮುಂಡರಗಿ, ಹಾನಗಲ್ಲ, ನವಲಗುಂದ, ಹುಬ್ಬಳ್ಳಿಗಳ ಮಾರ್ಗಗಳು ಕೂಡುವ ಸ್ಥಳ. ಹುಬ್ಬಳ್ಳಿಯಿಂದಲೂ ವಿಜಾಪುರ ಬಳ್ಳಾರಿಗೂ ರೇಲ್ವೆ ಮಾರ್ಗಗಳು. ನೂಲಿನ ಬಟ್ಟೆಗಳ ಕೈಗಾರಿಕೆಯ ಸ್ಥಳ.

ನವಲಗುಂದ:- ಬೈಲು ಸೀಮೆಯಿಂದ ತುಂಬಿದ ತಾಲೂಕು.

ನರಗುಂದ:- ರೋಣ, ಗದಗಗಳಿಗೆ ಮತ್ತು ಹುಬ್ಬಳ್ಳಿಗೆ ರಹದಾರಿಯು.

ರಾಣೆಬೆನ್ನೂರು:- ಜಿಲ್ಹೆಯ ಆಗ್ನೇಯದಲ್ಲಿ ಹುಬ್ಬಳ್ಳಿ, ಬೆಂಗಳೂರುಗಳಿಗೆ ರೇಲ್ವೆ ಮಾರ್ಗವು. ಇದರ ದಕ್ಷಿಣದಲ್ಲಿ ಮೈಸೂರು ಪ್ರಾಂತವೂ ಪೂರ್ವದಲ್ಲಿ ಕಾರವಾರ ಜಿಲ್ಹೆಯೂ ನೆರೆಯಲ್ಲಿರುವವು. ಈ ಪ್ರದೇಶಗಳ ವ್ಯಾಪಾರಸ್ಥರು ವಾರಕ್ಕೊಮ್ಮೆ ಇಲ್ಲಿ ಬಂದು, ತಮ್ಮ ಸರಕುಗಳನ್ನು ರೊಕ್ಕ ಮಾರುತ್ತಾರೆ. ಇದೇ ಮೇರೆಗೆ ಮುಂಡರಗಿಯು ನಿಜಾಮನ ರಾಜ್ಯಕ್ಕೂ ಬಳ್ಳಾರಿ ಸೀಮೆಗೂ ಸಮೀಪದಲ್ಲಿದೆ.

ಹಾವೇರಿ:— ಮೈಸೂರು, ಕಾರವಾರಗಳಿಂದ ಬರುವ ಯಾಲಕ್ಕಿ, ಅಡಿಕೆ, ಮೆಣಸುಗಳ ಪಡಮೂಲೆಯ ಸ್ಥಳ. ಕುಮಟೆಯಿಂದ ಸಮೀಪದಲ್ಲಿರುವ ದೊಡ್ಡ ಪಟ್ಟಣ. ಕುಮಟೆಗೆ ಮಾರ್ಗವು. ಹುಬ್ಬಳ್ಳಿ, ಮೈಸೂರಗಳಿಗೆ ರೇಲ್ವೆ ಮಾರ್ಗ. ಹಾವೇರಿಯಲ್ಲಿ ಸೌಳು ನೀರಿನದೊಂದು ಬಾವಿ

ವುಂಟು. ಅದರ ನೀರೊಳಗೆ ಸೀಗಿಕಾಯಿ, ಅಂಟುವಾಳಕಾಯಿಗಳನ್ನು ಹಾಕಿ, ಅದರಿಂದ ಯಾಲಕ್ಕಿಗಳನ್ನು ತೊಳೆದು, ಆ ಮೇಲೆ ಸ್ವಚ್ಛ ನೀರಿನಿಂದ ತೊಳೆದು ಒಣಗಿಸುತ್ತಾರೆ. ಅದರಿಂದ ಯಾಲಕ್ಕಿಗಳು ಉಬ್ಬಿ ಬೆಳ್ಳಗಾಗುತ್ತವೆ.

ದುಂಡಶಿ:—ಬಂಕಾಪುರ ತಾಲೂಕಿನಲ್ಲಿ ಜಿಲ್ಹೆಯಲ್ಲಿ ಕುಮಟೆಗೆ ಸಮೀಪವಾದ ಪಟ್ಟಣ. ಹುಬ್ಬಳ್ಳಿಯಿಂದ ಕುಮಟೆಗೆ ಮಾರ್ಗವಾಗುವ ಮೊದಲು ವ್ಯಾಪಾರದ ಬಗ್ಗೆ ಹೆಸರಾಗಿತ್ತು. ಹುಬ್ಬಳ್ಳಿಯು ಬೆಳೆದಂತೆ ಇಲ್ಲಿಯ ವ್ಯಾಪಾರ ಕುಗ್ಗಿತು.

ನರಗುಂದ:— ವಿಜಾಪುರ ಬೆಳಗಾವಿಗಳಿಗೆ ಸಮೀಪವಾದದ್ದು.

ಇದಲ್ಲದೆ, ತಾಲೂಕಿನ ಮುಖ್ಯ ಊರುಗಳಲ್ಲಿಯೂ, ಸಣ್ಣ ದೊಡ್ಡ ಊರುಗಳಲ್ಲಿಯೂ ವಾರವಾರಕ್ಕೆ ಸಂತೆಯಾಗುತ್ತದೆ. ಈ ಸಂತೆಗಳಲ್ಲಿ ಸುತ್ತಲಿನ ಊರುಗಳ ಇಲ್ಲವೆ ಹಳ್ಳಿಗಳ ಜನರು ತಮಗೆ ಬೇಕಾದ ಸಾಮಾನುಗಳನ್ನು ಒಯ್ಯುವರು.

ಇದಲ್ಲದೆ ಜಾತ್ರೆಗಳು ನೆರೆದಲ್ಲಿಯೂ ವ್ಯಾಪಾರವಾಗುವದುಂಟು. ಇಲ್ಲಿ ಸಹ ಕೊಳ್ಳುವವರು ಬಹುತರವಾಗಿ ಹಳ್ಳಿಯ ಜನರೇ ಇರುತ್ತಾರೆ. ಆದರೆ, ಇಲ್ಲಿ ಹೇಳತಕ್ಕಷ್ಟು ವ್ಯಾಪಾರವಾಗುವದಿಲ್ಲ. ಈ ಜಿಲ್ಹೆಯಲ್ಲಿ ನವಲಗುಂದ ತಾಲೂಕಿನಲ್ಲಿ ಯಮನೂರ ಜಾತ್ರೆಯೂ, ರಾಣೆಬೆನ್ನೂರ ತಾಲೂಕಿನಲ್ಲಿ ದೇವರ ಗುಡ್ಡದ ಜಾತ್ರೆಯೂ, ಬಂಕಾಪೂರ ತಾಲೂಕಿನಲ್ಲಿ ಹುಲುಗೂರು ಜಾತ್ರೆಯೂ, ತಕ್ಕ ಮಟ್ಟಿಗೆ ದೊಡ್ಡವಾಗುತ್ತವೆ.

೧೦ನೇ ಪ್ರಕರಣ.

ಸರಕಾರ.

ಜನರನ್ನು ಕ್ಷೇಮದಿಂದಲೂ ಸುಖದಿಂದಲೂ ಇಡುವದು ಸರಕಾರದವರ ಕರ್ತವ್ಯವಿರುವದು. ಪ್ರಾಚೀನ ಕಾಲದಲ್ಲಿ ಈ ಜಿಲ್ಹೆಯಲ್ಲಿ ಅನೇಕ ರಾಜ್ಯಗಳಾಗಿ ಹೋದವು. ಆದರೆ ದೇಶದಲ್ಲಿ ಶಾಂತತೆಯನ್ನಿಟ್ಟು ಪ್ರಜೆಗಳಿಗೆ ಸೌಖ್ಯಸಮೃದ್ಧಿಗಳನ್ನುಂಟು ಮಾಡುತ್ತ ಬಹಳ ಕಾಲದ ವರೆಗೆ ಬಲಿಷ್ಠರಾಗಿ ಯಾರೂ ಆಳಲಿಲ್ಲ. ಮೇಲಿಂದ ಮೇಲೆ ನಾಡೆಲ್ಲ ರಣರಂಗವಾಗುತ್ತಿತ್ತು. ಇತ್ತಲಾಗಿ ಇಂಗ್ಲಿಷ ಸರಕಾರದವರ ಅಮಲು ಉಂಟಾದಂ

ದಿನಿಂದ ಜನರು ಕ್ರಮೇಣ ಉದ್ಯೋಗಿಗಳೂ ಸುಖಿಗಳೂ ಆಗುತ್ತ ನಡೆದಿರುವರು.

ಸುಧಾರಿಸಿದ ಸರಕಾರವು ಜನರ ಹಿತದ ಬಗ್ಗೆ ಕೆಲವು ಮುಖ್ಯ ಕೆಲಸಗಳನ್ನು ಮಾಡತಕ್ಕದ್ದಿರುತ್ತದೆ. ಅವು ಯಾವವೆಂದರೆ:—ದೇಶದಲ್ಲಿ ಶಾಂತತೆಯನ್ನು ನೆಲೆಗೊಳಿಸುವದು; ಜನರಿಗೆ ನ್ಯಾಯವನ್ನು ಕೊಡುವದು; ದೇಶದಲ್ಲಿ ವ್ಯಾಪಾರ, ಕಲಾಕೌಶಲ್ಯ, ಉದ್ಯೋಗಗಳು ಹೆಚ್ಚಲಿಕ್ಕೆ ಅನುಕೂಲಗಳನ್ನು ಮಾಡಿ ಕೊಡುವದು. ಜನರ ಬುದ್ಧಿಯನ್ನೂ ಜ್ಞಾನವನ್ನೂ ಬೆಳೆಯಿಸುವದು; ಅವರ ಆರೋಗ್ಯವನ್ನು ರಕ್ಷಿಸುವದು; ಹಾಗೂ ಅವರಿಗೆ ಸ್ವಂತವಾಗಿ ತಮ್ಮ ಕೊರತೆಗಳನ್ನು ದೂರ ಮಾಡಿಕೊಂಡು ತಮ್ಮ ಹಣದ ವ್ಯವಸ್ಥೆಯನ್ನು ಯೋಗ್ಯವಾಗಿ ಮಾಡಿಕೊಳ್ಳಲಿಕ್ಕೆ ಕಲಿಸುವದು. ಇವೆಲ್ಲ ಸರಕಾರದ ಕರ್ತವ್ಯಗಳೆಂದು ಹೇಳಬಹುದು. ಈ ಜಿಲ್ಹೆಯಲ್ಲಿ ಇಂಗ್ಲಿಷ ಸರಕಾರದವರು ಇವೆಲ್ಲ ಕಾರ್ಯಗಳನ್ನು ಜರುಗಿಸುವದಕ್ಕೆ ಮಾಡಿರುವ ವ್ಯವಸ್ಥೆಯನ್ನು ತಿಳಿದುಕೊಳ್ಳುವ:—

ಇನ್ನು, ಸರಕಾರವು ಇಷ್ಟು ಕೆಲಸಗಳನ್ನೆಲ್ಲ ಮಾಡಲಿಕ್ಕೆ ಅಧಿಕಾರಸ್ಥರನ್ನು ನೇಮಿಸಬೇಕಷ್ಟೇ. ಆ ಅಧಿಕಾರಿಗಳಿಗೆ ಸಂಬಳ ಕೊಡಬೇಕಷ್ಟೇ. ಆದ್ದರಿಂದ ಸರಕಾರಕ್ಕೆ ಹಣದ ಅವಶ್ಯಕತೆಯುಂಟಾಗುತ್ತದೆ. ಅದನ್ನು ಸರಕಾರವು ಜನರಿಂದ ಕರದ ರೂಪದಿಂದ ತೆಗೆದುಕೊಳ್ಳುವದು. ಈ ಮೇರೆಗೆ ಹಣವನ್ನು ವಸೂಲ ಮಾಡುವ ಕೆಲಸವು ಸರಕಾರದ ಅತಿ ಮಹತ್ವದ ಕೆಲಸವೆನ್ನಬಹುದು. ಯಾಕಂದರೆ ಈ ಹಣವೇ ಇಲ್ಲದಿದ್ದರೆ ಸರಕಾರದವರು ಮಾಡತಕ್ಕ ಮಹತ್ವದ ಕೆಲಸಗಳು ಸಾಗಲಾರವು.

ಒಂದು ರೀತಿಯಿಂದ ಕಲೆಕ್ಟರನು ಜಿಲ್ಹೆಯ ಅರಸನೆಂದು ಹೇಳಬಹುದು. ಇವನು ಬಹುತರವಾಗಿ ಯುರೋಪಿಯನ್‌ನಿರುವನು. ಇವನಿಗೆ ತಿಂಗಳಿಗೆ ೨೦೦೦–೨೫೦೦ ರೂಪಾಯಿ ಸಂಬಳವಿರುವದು. ಕಲೆಕ್ಟರನು ಜಿಲ್ಹೆಯ ವಸೂಲು ಶಿಲುಕು ಇವುಗಳ ಮುಖ್ಯಾಧಿಕಾರಿಯಾಗಿ ಇರುವದಲ್ಲದೆ ಜಿಲ್ಹೆಯ ಮುಖ್ಯ ಮಾಜಿಸ್ಟ್ರೇಟನಿರುತ್ತಾನೆ. ಅವನು ಬಹುತರ ಲೋಕಲ್‌ಬೋರ್ಡಿನ ಅಧ್ಯಕ್ಷನೂ ಇರುವನು. ಕೆಲವು ಕಡೆಯಲ್ಲಿ ಡಿಸ್ಟ್ರಿಕ್ಟ ಮ್ಯುನಸೀಪಾಲಿಟಿಯ ಅಧ್ಯಕ್ಷನೂ ಇವನೇ ಇರುತ್ತಾನೆ. ಇದಲ್ಲದೆ ಒಕ್ಕಲತನದ ಖಾತೆಯೂ ಇವನಿಗೇ ಅಧೀನವಿರುತ್ತದೆ. ಪೋಲೀಸ ಖಾತೆಯು ಬೇರೆ ಇದ್ದಾಗ್ಯೂ ಪೋಲೀಸ ಅಧಿಕಾರಿಗಳ ಮೇಲೆ ಇವನ ಅಮಲು ನಡೆ

ಯುತ್ತದೆ. ಇವೆಲ್ಲ ಖಾತೆಗಳು ಮೇಲೆ ಹೇಳಿದ ಸರಕಾರದ ಕರ್ತವ್ಯಗಳನ್ನು ಜರಗಿಸುವ ಬೇರೆ ಬೇರೆ ಖಾತೆಗಳಾಗಿರುವದರಿಂದ ಕಲೆಕ್ಟರನು ಜಿಲ್ಹೆಯ ಪ್ರಜೆಗಳ ಸೌಖ್ಯಕ್ಕೆ ಬಹಳ ಮಟ್ಟಿಗೆ ಕಾರಣನಾಗಿರುತ್ತಾನೆಂಬದು ಸ್ಪಷ್ಟವಾದದ್ದದೆ. ಇಷ್ಟು ಜವಾಬುದಾರಿಯುಳ್ಳ ಅಧಿಕಾರಸ್ಥನಿಗೆ ದೊಡ್ಡ ಸಂಬಳವೂ ಅಧಿಕಾರವೂ ಇರಬೇಕೆಂದು ಹೇಳಲು ಅವಶ್ಯವಿರುವದಿಲ್ಲ.

ಕಲೆಕ್ಟರನ ಕೈಕೆಳಗೆ ಇಬ್ಬರಾಗಲಿ ಮೂವರಾಗಲಿ ಸನದೀ ಯುರೋಪಿಯನ್ ಅಸಿಸ್ಟಂಟ ಕಲೆಕ್ಟರರೂ, ಡಿಸ್ಟ್ರಿಕ್ಟ ಡೆಪ್ಯೂಟಿ, ಹುಜೂರ ಡೆಪ್ಯೂಟಿ, ಎಂಬ ಇಬ್ಬರು ದೇಶೀಯ ಅಧಿಕಾರಸ್ಥರೂ ಇರುವರು. ಮೊದಲಿನ ಎರಡು ತರದ ಅಧಿಕಾರಸ್ಥರಿಗೆ ಮೂರು ನಾಲ್ಕು ತಾಲೂಕುಗಳ ಮೇಲ್ವಿಚಾರಣೆಯು ಒಪ್ಪಿಸಲ್ಪಟ್ಟಿರುತ್ತದೆ. ಇವರು ವರ್ಷದಲ್ಲಿ ಏಳು ತಿಂಗಳಗಳ ವರೆಗೆ ಫಿರತೀ ಮಾಡಬೇಕು; ಮುಲಕೀ ಕೆಲಸವು ಯೋಗ್ಯ ರೀತಿಯಿಂದ ನಡೆದಿರುವದೆಂಬದನ್ನು ಪ್ರತ್ಯಕ್ಷವಾಗಿ ನೋಡಬೇಕು. ಇದೇ ಮೇರೆಗೆ ಕಲೆಕ್ಟರನು ಸಹ ವರ್ಷದಲ್ಲಿ ನಾಲ್ಕು ತಿಂಗಳಗಳ ವರೆಗೆ ತನ್ನ ಜಿಲ್ಹೆಯಲ್ಲಿ ತಿರುಗಬೇಕು. ಈ ಏರ್ಪಾಡಿನಿಂದ ಹಳ್ಳಿಯ ಜನರಿಗೆ ಸರಕಾರದ ವರಿಷ್ಠ ಅಧಿಕಾರಿಗಳ ಭೆಟ್ಟಿಯು ಸುಲಭವಾಗಿ ಆಗುವದು. ಸರಕಾರಕ್ಕೂ ಜನರ ಕೋರಿಕೆಗಳು ಚನ್ನಾಗಿ ತಿಳಿಯುವವು. ಇವರು ತಮ್ಮ ಕೈಕೆಳಗಿನ ತಾಲೂಕುಗಳ ಮುಲಕೀ ಖಾತೆಯ ಮೇಲ್ವಿಚಾರಣೆಯನ್ನು ಮಾಡುವದಲ್ಲದೆ, ೧ನೇ ೨ನೇ ವರ್ಗದ ಮಾಜಿಸ್ಟ್ರೇಟರಾಗಿ ಫೌಜದಾರಿ ಅಪರಾಧಿಗಳ ವಿಚಾರಣೆಯನ್ನು ಮಾಡುತ್ತಾರೆ. ಹುಜೂರ ಡೆಪ್ಯೂಟೀ ಕಲೆಕ್ಟರನು ಜಿಲ್ಹೆಯ ನಗದ ಜಮೆ, ಖರ್ಚು, ಶಿಲುಕು, ಲೆಕ್ಕ ಇವುಗಳಿಗೆ ಜವಾಬುದಾರನಿರುವನಲ್ಲದೆ, ೧ನೇ ವರ್ಗದ ಮಾಜಿಸ್ಟ್ರೇಟನಾಗಿ ಫೌಜದಾರೀ ಗುನ್ಹೆಗಳ ಚೌಕಸಿಯನ್ನು ಮಾಡುತ್ತಾನೆ.

ಕಾರಭಾರದ ಅನುಕೂಲತೆಗಾಗಿ ಈ ಜಿಲ್ಹೆಯಲ್ಲಿ ೧೧ ತಾಲೂಕಗಳನ್ನು ಮಾಡಿರುವರು. ತಾಲೂಕಿನ ಮುಖ್ಯಾಧಿಕಾರಿಯು ಮಾಮಲೇದಾರನು. ಮಾಮಲೇದಾರರು ತಮ್ಮ ತಾಲೂಕಿನ ಖಜೀನೆಯ ಕೆಲಸದಬಗ್ಗೆ ಜವಾಬದಾರರಿರುವರು. ಇವರು ತಮ್ಮ ತಾಲೂಕಿನ ಹಳ್ಳಿಯವರು ಕೊಡತಕ್ಕ ತೆರಿಗೆಗಳನ್ನು ಕಾಲಕಾಲಕ್ಕೆ ಮುಟ್ಟಿಸುವರೋ ಇಲ್ಲವೋ ಎಂಬದನ್ನು

ನೋಡಬೇಕು. ಗ್ರಾಮದ ಲೆಕ್ಕದ ಕಾಗದಪತ್ರಗಳು ಸರಿಯಾಗಿ ಇಡಲ್ಪಟ್ಟವೆ ಎಂಬದನ್ನು ಮೇಲಿಂದ ಮೇಲೆ ತಪಾಸು ಮಾಡಬೇಕು. ರೈತರ ನುಟ್ಟಿಸುವ ಹಣಕ್ಕೆ ಅವರಿಗೆ ಪಾವತಿ ದೊರೆಯುತ್ತದೆಂಬದನ್ನು ಮನಸಾರಿಕೆ ಮಾಡಿಕೊಳ್ಳಬೇಕು. ಹೊಲಗಳ ಮೇರೆಯ ಕಲ್ಲುಗಳೂ, ಒಡ್ಡುಗಳೂ ಸರಿಯಾಗಿ ಇಡಲ್ಪಟ್ಟವೆಂಬದನ್ನು ನೋಡಬೇಕು. ಅಂತು ಗ್ರಾಮದ ಅಧಿಕಾರಸ್ಥರು ತಮ್ಮ ತಮ್ಮ ಕೆಲಸಗಳನ್ನು ತಪ್ಪದೆ ಮಾಡುವರೆಂಬದನ್ನು ನೋಡುತ್ತಿರಬೇಕು. ಇವರು ತಮ್ಮ ತಾಕೂಕಿನ ಲೋಕಲ್‌ಫಂಡಿನ ವ್ಯವಸ್ಥೆಯ ಮೇಲಧಿಕಾರಿಗಳಿರುವರು. ಇಷ್ಟಲ್ಲದೆ ಇವರು ತಮ್ಮ ತಾಲೂಕಿನಲ್ಲಿ ನಡೆಯುವ ಮುಲಕೀ ಫೌಜದಾರೀ ವ್ಯಾಜ್ಯಗಳ ನಿರ್ಣಯವನ್ನು ಮಾಡುವರು. ಇವರಿಗೆ ಬಹುತರವಾಗಿ ಎರಡನೇ ಮೂರನೇ ವರ್ಗದ ಮಾಜಿಸ್ಟ್ರೇಟರ ಅಧಿಕಾರವಿರುತ್ತದೆ. ಜಿಲ್ಹೆಯಲ್ಲಿ ಒಬ್ಬಿಬ್ಬರು ಮಾಮಲೇದಾರರಿಗೆ ಮಾತ್ರ ೧ ನೇ ವರ್ಗದ ಮಾಜಿಸ್ಟ್ರೇಟರ ಅಧಿಕಾರವಿರುತ್ತದೆ.

ಜಿಲ್ಹೆಯಲ್ಲಿ ತಾಲೂಕಗಳನ್ನು ಮಾಡಿದಂತೆ ತಾಲೂಕಿನಲ್ಲಿ ಕೆಲವು ಹಳ್ಳಿಗಳ ವಿಭಾಗಗಳನ್ನು ಮಾಡಿ ಅವುಗಳಿಗೆ ಮಾಮಲೇದಾರನಿಗೆ ಅಂಕಿತರಾದ ಸರಕಲ್ ಇನಸ್ಪೇಕ್ಟರರೆಂಬ ಅಧಿಕಾರಸ್ಥರನ್ನು ನೇಮಿಸುವರು. ಇವರಿಗೆ ಮಾಜಿಸ್ಟ್ರೇಟರ ಅಧಿಕಾರವಿರುವದಿಲ್ಲ.

ಹಳ್ಳಿಯಲ್ಲಿ ಮುಲಕೀ ಫೌಜದಾರೀ ಕೆಲಸಗಳ ಅಧಿಕಾರಸ್ಥನು ಗೌಡನು. ಕೆಲವು ಕಡೆಯಲ್ಲಿ ಇವೆರಡೂ ಕೆಲಸಗಳು ಒಬ್ಬ ಗೌಡನ ಕೈಯಲ್ಲಿಯೇ ಇರುತ್ತವೆ. ಕೆಲವು ಕಡೆಯಲ್ಲಿ ಮುಲಕೀಗೌಡ ಬೇರೆ, ಫೌಜದಾರೀ ಗೌಡ ಬೇರೆ ಇರುತ್ತಾರೆ. ಒಬ್ಬ ಗೌಡನು ಒಂದಕ್ಕಿಂತ ಹೆಚ್ಚು ಹಳ್ಳಿಗಳ ಕೆಲಸವನ್ನು ಮಾಡಬಹುದು. ಗೌಡನಿಗೆ ಅವನ ಭೂಮಿಯ ಮೇಲೆ ಸರಕಾರೀ ತೆರಿಗೆಯನ್ನು ಅಂಶತಃ ಅಥವಾ ಪೂರ್ಣವಾಗಿ ಮಾಫಮಾಡಿರುತ್ತದೆ. ಗೌಡನ ಕೈಕೆಳಗೆ ಲೆಕ್ಕಬರಿಯುವ ಮನುಷ್ಯನು ಕುಲಕರಣಿ ಅಥವಾ ಶಾನಭೋಗನು. ಇವನು ಗೌಡನ ಕೈಕೆಳಗಿನ ಅಧಿಕಾರಸ್ಥನಾದಾಗ್ಯೂ ಯಾವತ್ತು ಸರಕಾರೀ ಕಾಗದಪತ್ರಗಳಿಗೆ ಗೌಡನ ಸಹಿಯಂತೆ ಕುಲಕರ್ಣಿಯ ಸಹಿಯಾದರೂ ಅವಶ್ಯವಿರುತ್ತದೆ. ವಿದ್ಯಾಕಲಿತ ಗೌಡನು ಅಪರೂಪ; ಕುಲಕರ್ಣಿಯು ಅಲ್ಪಸ್ವಲ್ಪ ಕಲಿತವನಿರುವನು. ಈ ಕಾರಣದಿಂದ ಊರೊಳಗೆ ಗೌಡನಿಗಿಂತ ಕುಲಕರ್ಣಿಯ ಅಮಲು ಬಹುತರ ಹೆಚ್ಚು ನಡೆಯು

ರುತ್ತದೆ. ಕುಲಕರ್ಣಿಗೂ ಸಹ ಸರಕಾರದ ತೆರಗಿಯು ಮಾಫ ಇರುದೆ. ಇವರಲ್ಲದೆ ಇವರ ಕೈಕೆಳಗೆ ತಳವಾರ, ಪಟ್ಟಣಶೆಟ್ಟಿ, ಹಳಬ, ಮುಂತಾದ ಕಿರುಕಳ ಕಾಮದಾರರೂ ಹಳ್ಳಿಹಳ್ಳಿಗೆ ಇರುವರು. ಇವರ ಭೂಮಿಗೂ ಸರಕಾರದ ಪೂರ್ಣ ತೆರಿಗೆ ಇರುವದಿಲ್ಲ. ತಳವಾರನು ವಸೂಲ ಮುಂತಾದ ಕೆಲಸಗಳಲ್ಲಿ ಗೌಡಕುಲಕರ್ಣಿಯರಿಗೆ ಸಹಾಯ ಮಾಡುತ್ತಾನೆ. ಪಟ್ಟಣಶೆಟ್ಟಿಯು ವರಿಷ್ಠಾಧಿಕಾರಿಗಳು ಬಂದಾಗ ಅವರ ಸರಬರಾಯಿಯ ಕೆಲಸಕ್ಕೆ ಸಹಾಯಮಾಡುತ್ತಾನೆ. ಹಳಬನು ಊರಿನ ಕಾವಲುಗಾರನಿರುವನು. ಇವರಲ್ಲದೆ, ಜೋಯಿಸ, ಸೊನ್ನಗಾರ, ನಾದಿಗ, ಅಗಸ ಮುಂತಾದ ಬಲೂತೆದಾರರು ಊರತನದ ಕೆಲಸಕ್ಕೆ ಪೂರ್ವದಲ್ಲಿ ಸಹಾಯ ಮಾಡುತ್ತಿದ್ದರು. ಆದರೆ ಅವರ ಚಾಕರಿಯು ಈಗ ಬೇಕಾಗದಿದ್ದದರಿಂದ ಇವರು ಸರಕಾರದ ನೌಕರಿಯಲ್ಲಿಲ್ಲ.

ದೇಶದಲ್ಲಿ ಶಾಂತತೆಯನ್ನು ರಕ್ಷಿಸುವ ಕೆಲಸವನ್ನು ಇಲಾಖೆಯ ಅಧಿಕಾರಸ್ಥರು ನೋಡಿಕೊಳ್ಳುತ್ತಾರೆ. ಈ ಜಿಲ್ಹೆಯಲ್ಲಿ ದಂಡಿನ ಸ್ಥಳಗಳು ಇಲ್ಲ. ಆದರೂ ಊರುಗಳಲ್ಲಿಯೂ ಪಟ್ಟಣಗಳಲ್ಲಿಯೂ ಕಳ್ಳರ ಹಾವಳಿಯೂ ಕೊಲೆಸುಲಿಗೆಗಳೂ ನಡೆಯದಂತೆ ಪೋಲೀಸಖಾತೆಯವರು ನೋಡಿಕೊಳ್ಳುತ್ತಾರೆ. ಜಿಲ್ಹೆಗೆ ಒಬ್ಬ ಪೋಲೀಸ ಸುಪರಿಂಟೆಂಡೆಂಟ ಎಂಬ ಅಧಿಕಾರಸ್ಥನಿರುವನು. ಇವನ ಕೈಕೆಳಗೆ ಅಸಿಸ್ಟಂಟ ಪೋಲೀಸ ಸುಪರಿಂಟೆಂಡೆಂಟನೂ ಡಿಪ್ಯೂಟಿ ಪೋಲೀಸ ಸುಪರಿಂಟೆಂಡೆಂಟರೂ ಇನಸ್ಪೇಕ್ಟರರೂ ಸಬ್ ಇನಸ್ಪೆಕ್ಟರರೂ ಇರುತ್ತಾರೆ.

ಜಿಲ್ಹೆಯ ಮುಖ್ಯ ನ್ಯಾಯಕೋರ್ಟಿನ ನ್ಯಾಯಾಧೀಶನು ಡಿಸ್ಟ್ರಿಕ್ಟ ಜಜ್ಜನು. ಇವನು ಮುಲಕೀ ಫೌಜದಾರೀ ವ್ಯಾಜ್ಯಗಳ ಅಪೀಲುಗಳನ್ನು ವಿಚಾರಿಸುವನು. ಇವನ ಕೈಕೆಳಗೆ ಅಸಿಸ್ಟಂಟಜಜ್ಜರೆಂದೂ ಸಬ್‌ಜಜ್ಜರೆಂದೂ ಅಧಿಕಾರಸ್ಥರಿರುವರು. ಸಬ್‌ಜಜ್ಜನು ೫೦೦೦ ರೂಪಾಯಿಯ ಒಳಗಿದ್ದ ದಿವಾಣೀ ವ್ಯಾಜ್ಯಗಳನ್ನು ತೀರಿಸುವನು. ಅಸಿಸ್ಟಂಟಜಜ್ಜನೂ ಡಿಸ್ಟ್ರಿಕ್ಟಜಜ್ಜನೂ ಫೌಜದಾರೀ ಅಪೀಲುಗಳನ್ನು ಸಹ ತೀರಿಸುವರು.

ದೇಶದಲ್ಲಿ ಶಾಂತತೆಯನ್ನಿಡುವದು, ಜನರಿಗೆ ನ್ಯಾಯವನ್ನು ಕೊಡುವದು, ವಸೂಲಿಯ ಕೆಲಸವನ್ನು ಮಾಡುವದು ಇವುಗಳನ್ನು ಸರಕಾರದ ಆ ಆ ಖಾತೆಯ ಅಧಿಕಾರಸ್ಥರು ಮಾಡುವರು. ವ್ಯಾಪಾರ, ಕಲಾಭಿವೃದ್ಧಿ

ಹಣ್ಣು, ಕೊಂಡವಾಡೆ,

ಲ್ ನಾಕೆಗಳ ಉತ್ಪನ್ನ, ಶಾಲೆ

ವೆ.

ಲೋ

ಕ್ಕೆ

ಹೊಸ , ನೀರ

ರುತ್ತ

ಗವನ

ಕ ಲೋಕಲ್ ಬೋರ್ಡುಗಳ

ಬ್ಬಳ್ಳಿ, ಗದಗ, ಗುಂದ, ಯಮನೂರ,

ಂದ, ಪುರ,

ಸ ರಿಗೆ ನಿಕ ಶಿಕ್ಷ

ಕ್ಕೊ ಂಥ ಸಂಘಗಳನ್ನು ಜನರ

ಸ್ಥಾನಿಕ ವ ವಸ್ತೆಯನ ಯಾಗಿ ಕೊಳ್ಳ ಉತ್ಸಾ

ತೋ ಆದ ಗಳನ

ನವು ಕೊ ಳನ್ನು

ನಿಕ ಸಗಳ ತ ಗತೆಯ